ಸಂಪುಟ 23 ಸಂಚಿಕೆ 8-9
ಮಾರ್ಚ್ 4, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪ್ರಕ್ಷೋರಂಗ

ರೈತರ ಸಂಕಟಗಳು ಮತ್ತು ಕರ್ನಾಟಕದ ರಾಜಕೀಯ





ಶಿಕ್ಷಣ ಕಡಿತ

ಬಾಗೇಪಲ್ಲಿ:

ಮುಖಭಂಗಕ್ಕೆ ಒಳಗಾದ ಕಾಂಗ್ರೆಸ್



ಹೈಟೆಕ್ ಆಡಳಿತದಲ್ಲಿ ಹಸುಳೆಗಳ ಅತ್ಯಾಚಾರ

ಇನ್ನೊಮ್ಮೆ ಪ್ರಜಾಪ್ರಭುತ್ವದ ಕಗ್ಗೊಲೆ

ಹಿಂದಿನ ಸಂಚಿಕೆಯಲ್ಲಿ ಪಾಟ್ನಾದ ರೈಲ್ವೆ ನಿಲ್ದಾಣದಲ್ಲಿ ಜ್ಯೋತಿಬಸುರವರನ್ನು ಗುಂಡೇಟಿನಿಂದ ಕೊಲ್ಲುವ ಆನಂದ ಮಾರ್ಗಿಗಳ ಯತ್ನ, ಅದರಲ್ಲಿ ಪಕ್ಷದ ಹಿತೈಷಿ ಅಲಿ ಇಮಾಮ್‌ರ ಸಾವು, ಮುಂದುವರಿದ ರಾಷ್ಟ್ರಪತಿ ಆಡಳಿತ, ರಾಜಕೀಯ ಅರಾಜಕತೆ ಹಾಗೂ ಆಕ್ರೋಶ ಆಂದೋಲನಗಳ ನಡುವೆ ಸಿಐಟಿಯು ಹಾಗೂ ದೇಶದ ವಿದ್ಯಾರ್ಥಿ ಮಿತ್ರನಾಗಿ ಎಸ್‌ಎಫ್‌ಐ ಜನ್ಮತಳೆದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮುಂದುವರಿದ ರಾಷ್ಟ್ರಪತಿ ಆಳ್ವಿಕೆಯ ಅರಾಜಕತೆಯಲ್ಲಿ 250 ಸಿಪಿಐ(ಎಂ) ಕಾರ್ಯಕರ್ತರ ಹತ್ಯೆ, 20 ಸಾವಿರಕ್ಕೂಹೆಚ್ಚು ಬಂಧನ, ವಿದ್ಯಾರ್ಥಿಗಳನ್ನು ಬಿಡದ ರಾಕ್ಷಸ ಪ್ರವೃತ್ತಿ ಮತ್ತು ಬಸುರವರ ಮೇಲೆ ಬಾಂಬ್ ದಾಳಿ .... ಈ ಬಗ್ಗೆ ಓದಿ

1970-71ರಲ್ಲಿ ರಾಜ್ಯ ಪೊಲೀಸರ ಸಂಖ್ಯೆ 60,000 ಇತ್ತು ಅದರ ಜತೆ ಕೇಂದ್ರ ಮೀಸಲು ಪೊಲೀಸ ಪಡೆ (ಸಿಆರ್‌ಪಿಎಫ್) ಹಾಗೂ ಇತರೆ ಅರೆಸೇನೆ ಪಡೆಗಳಿದ್ದವು. ಸುಮಾರು ಎರಡು ಲಕ್ಷ ಸಶಸ್ತ್ರ ಸಿಬ್ಬಂದಿ ಜನರಿಗೆ ಒಂದು 'ಪಾಠ ಕಲಿಸಲು' ಕಾಯುತ್ತಿದ್ದರು. ಈ ಪಡೆಗಳನ್ನು ರಾಜ್ಯದ ಎಲ್ಲೆಡೆ ಕಳಿಸಲಾಯಿತು. ಜನರ ಮೇಲೆ ದೌರ್ಜನ್ಯ ನಡೆಸಲಾಯಿತು. ತೀರಾ ಒಳಪ್ರದೇಶಗಳಲ್ಲಿರುವ ತಾಂಡಾಗಳನ್ನು ಕೂಡ ಬಿಡದೆ ದಬ್ಬಾಳಿಕೆ ನಡೆಸಲಾಯಿತು.

1970ರ ಮಾರ್ಚ್ 20 ರಂದು ರಾಷ್ಟ್ರಪತಿ ಆಡಳಿತ ಹೇರಿದ ನಂತರ ಆ ವರ್ಷದ ಕೊನೆಯವರೆಗೆ ಪೊಲೀಸರು, ಅರೆಸೇನೆ ಪಡೆಗಳು ಹಾಗೂ ಕಾಂಗ್ರೆಸ್ ಮಂದಿ ಸಿಪಿಐ(ಎಂ)ನ ಕನಿಷ್ಠ 150 ಬೆಂಬಲಿಗರನ್ನು ಕೊಂದು ಹಾಕಿದರು. ಅದರ ನಂತರ ಇನ್ನೈದು ತಿಂಗಳಲ್ಲಿ ಈ ಗೂಂಡಾಗಳಿಗೆ ಇನ್ನೂ 100 ಜನರು ಬಲಿಯಾದರು. 20 ಸಾವಿರಕ್ಕೂ ಹೆಚ್ಚು ಜನರು ಬಂಧಿತರಾದರು. ಸುಮಾರು ಒಂದು ಲಕ್ಷ ಜನರ ವಿರುದ್ಧ ಬಂಧನದ ವಾರಂಟ್ ಹೊರಟಿತು.

ಎರಡನೇ ಸಂಯುಕ್ತರಂಗ ಸರಕಾರದ ಆಡಳಿತ ಅವಧಿಯಲ್ಲಿ ಸಿಪಿಐ(ಎಂ) ವಿರುದ್ಧ ಹೇಳಲಾದ ಪಿತೂರಿಯ ದುಷ್ಟ ಬಾಹುಗಳು ಈಗ ಬಹಿರಂಗಕ್ಕೆ ಬರತೊಡಗಿತ್ತು. ಆ ಸರಕಾರ ಪತನಗೊಂಡ ಮೇಲೆ ಅದರ ಕರಾಳತೆ ಗೊತ್ತಾಗತೊಡಗಿತು. ಅಜಯ್ ಬಾಬು ಮುಖ್ಯಮಂತ್ರಿಯಾಗಿ ರಾಜಿನಾಮೆ ಸಲ್ಲಿಸಿದ ನಂತರ ಮಾರ್ಚ್ 17 ರಂದು ಸಾರ್ವತ್ರಿಕ ಮುಷ್ಕರ ಆಚರಿಸಿದ ಮೇಲೆ ನಮ್ಮ 30ಕ್ಕೂ ಹೆಚ್ಚು ಸಂಗಾತಿಗಳನ್ನು ಕೊಲ್ಲಲಾಯಿತು.

ದುರ್ಗಾಪುರ ಭಾರೀ ದೌರ್ಜನ್ಯ ದಬ್ಬಾಳಿಕೆಯ ಕೇಂದ್ರವಾಯಿತು. ಈ ಕೈಗಾರಿಕಾ ನಗರದ 60 ಸಾವಿರಕ್ಕೂ ಹೆಚ್ಚಿನ ಕಾರ್ಮಿಕರು 1970 ಆಗಸ್ಟ್ 12 ರಿಂದ ಅನಿರ್ಧಿಷ್ಟಾವಧಿ ಮುಷ್ಕರ ಆರಂಭಿಸಿದರು. ಸಿಆರ್‌ಪಿಎಫ್, ಬಿಎಸ್‌ಎಫ್, ಮತ್ತು ರಾಜ್ಯ ಪೊಲೀಸರ ಸಹಿತ 25 ಸಾವಿರಕ್ಕೂ ಅಧಿಕ ಸಶಸ್ತ್ರ ಸಿಬ್ಬಂದಿಯನ್ನು ಈ ಹೋರಾಟ ಮುರಿಯಲು ನಿಯೋಜಿಸಲಾಯಿತು. ನಗರಕ್ಕೆ ಎಲ್ಲಾ ಸರಬರಾಜುಗಳನ್ನು ನಿಲ್ಲಿಸಲಾಯಿತು. ನಿಷೇದಾಜ್ಞೆಗಳನ್ನು ಹೇರಲಾಯಿತು. ಸಿಆರ್‌ಪಿಎಫ್ ಸಿಬ್ಬಂದಿ ಆಸ್ಪತ್ರೆಗಳಿಗೂ ನುಗ್ಗಿ ಗಾಯಾಳು ಕಾರ್ಮಿಕರಿಗೆ ವೈದ್ಯರು ಚಿಕಿತ್ಸೆ ನೀಡುವುದನ್ನು ತಡೆಯಲೂ ಯತ್ನಿಸಿದರು.

ಹಾಲು ಬೆಳೆಗಾರರು ಮತ್ತು ರೈತರು ಕೂಡ ದಬ್ಬಾಳಿಕೆಗೆ ಗುರಿಯಾದರು. ಹಳ್ಳಿ ಹಳ್ಳಿಗಳು ಸಶಸ್ತ್ರ ಪಡೆಗಳ ಶಿಬಿರಗಳಾದವು. ಹಳ್ಳಿಗಳನ್ನು ಸುತ್ತುವರಿದು ಮೊದಲು ಗಂಡಸರನ್ನು ಹೆಕ್ಕಿ ಹೆಕ್ಕಿ ಪ್ರಾಣಿಗಳಂತೆ ಓಡಿಸಲಾಯಿತು. ಮಹಿಳೆಯರ ಮೇಲೆ ಅತ್ಯಾಚಾರ ನಡೆಸಲಾಯಿತು. ಅಥವಾ ಸಾಧ್ಯವಾದ ಇತರ ಎಲ್ಲಾ ಮಾರ್ಗಗಳಿಂದ ಅವಮಾನ ಮಾಡಲಾಯಿತು. ಈ 'ಕಾನೂನಿನ ರಕ್ಷಕರು' ಮರಳಿದ ನಂತರ ಗರಬಡಿದ ಈ ಗ್ರಾಮಗಳು ಭಯಾನಕ ಕುಕೃತ್ಯಗಳಿಗೆ ಸಾಕ್ಷಿಯಾಗಿ ನಿಂತವು. ಹಿಂಸೆ ಮತ್ತು ಆಕ್ರಮಣದ ಕತೆ ಕೊನೆಯಿಲ್ಲದ್ದಾಗಿತ್ತು. ಅದು ಸತ್ಯವೂ ಆಗಿತ್ತು.

ವಿದ್ಯಾರ್ಥಿಗಳ ಹಂತಕರು

ಶಿಕ್ಷಕ ಸಮುದಾಯ ಮತ್ತು ವಿದ್ಯಾರ್ಥಿಗಳನ್ನು ಕೂಡ ಈ ರಾಕ್ಷಸೀ ಪ್ರವೃತ್ತಿಯವರು ಬಿಡಲಿಲ್ಲ. ಎದೆಝಲ್ಲೆನಿಸುವ ಭಯಾನಕತೆಯ ಒಂದು ದೃಷ್ಟಾಂತ ಹೀಗಿದೆ.

ಕಲ್ಕತ್ತದ ಬೆಳಿಯು ಘಾಟ್ ಪ್ರದೇಶದಲ್ಲಿ ಚುಮುಚುಮು ಮುಂಜಾನೆ 49 ಯುವ ವಿದ್ಯಾರ್ಥಿಗಳನ್ನು ಸುತ್ತುವರಿದ ಸಶಸ್ತ್ರ ಪಡೆ ಸಿಬ್ಬಂದಿ ಆ ಪೈಕಿ ನಾಲ್ಕು ವಿದ್ಯಾರ್ಥಿಗಳನ್ನು ನೋಡ ನೋಡುತ್ತಿದ್ದಂತೆಯೇ ಗುಂಡಿಟ್ಟು ಕೊಂದರು. ಮೀಸಾ ಮತ್ತು ಪಿ.ಡಿ. ಕಾನೂನನ್ನು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ವಿರುದ್ಧ ಬೇಕಾಬಿಟ್ಟಿಯಾಗಿ ಬಳಸಲಾಯಿತು. ಆ ಅವಧಿಯಲ್ಲಿ ಸೂಕ್ತ ಭದ್ರತೆ ಇಲ್ಲದ್ದರಿಂದ ಅನೇಕ ಶಾಲೆ ಕಾಲೇಜುಗಳನ್ನು ಸೂಕ್ತ ಭದ್ರತೆ ಇಲ್ಲದ್ದರಿಂದ ಅನೇಕ ಶಾಲೆ ಕಾಲೇಜುಗಳನ್ನು ಅನಿರ್ಧಿಷ್ಟ ಅವಧಿಗೆ ಮುಚ್ಚಲಾಯಿತು.

"ಪ್ರತಿಯೊರದೂ ಪೂರ್ವನಿಯೋಜಿತವಾಗಿತ್ತು." ಸಿಪಿಐ(ಎಂ) ಅನ್ನು ನಾಶಮಾಡಲು ನಕ್ಸಲೀಯರು ಹಾಗೂ ಹಿಂದಿನ ಸಂಯುಕ್ತ ರಂಗದಿಂದ ಹೊರ ಹೋದ ಬಣಗಳನ್ನು ಬಳಸಿಕೊಳ್ಳಲಿಕ್ಕೂ ಕಾಂಗ್ರೆಸ್ ಹಿಂದೆ ಮುಂದೆ ನೋಡಲಿಲ್ಲ. ಜನರಿಂದ ಪ್ರತ್ಯೇಕಿತರಾದ ನಕ್ಸಲೀಯರು ಹೆಚ್ಚೆಚ್ಚು ಹತಾಶರಾಗುತ್ತಿದ್ದಂತೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡುವಷ್ಟು ಕೀಳುಮಟ್ಟಕ್ಕೂ ಇಳಿದರು.

ಈ ಅರಾಜಕತೆ ಮತ್ತು ಹುಚ್ಚು ಹಿಂಸಾಚಾರದ ವಿರುದ್ಧ ಸಿಪಿಐ(ಎಂ) ದೃಢವಾದ ಹೋರಾಟ ನಡೆಸಿತು. ನಮ್ಮನ್ನು ಮುಖ್ಯ ಗುರಿಯಾಗಿರಿಸಿಕೊಂಡ ನಮ್ಮ ವೈರಿಗಳು ತಮ್ಮ ಕುಕೃತ್ಯಗಳಲ್ಲಿ ನಕ್ಸಲೀಯರಿಗೆ ಕುಮ್ಮಕ್ಕು ನೀಡಿದರು.

ಸಂಯುಕ್ತರಂಗದ ಹಿಂದಿನ ಕೆಲವು ಪಾಲುದಾರರ ಪಾತ್ರವೂ ನಾಚಿಕೆಗೇಡಿನದಾಗಿತ್ತು. ಕಾಂಗ್ರೆಸ್ ಹೇಳಿದಂತೆ ಕುಣಿದ ಈ ಪಕ್ಷಗಳು ಎಲ್ಲಿವರೆಗೆ ಮುಂದುವರಿದವೆಂದರೆ ಕೊನೆಗೆ ಅವು ತಮ್ಮ ಸ್ವತಂತ್ರ ಅಸ್ತಿತ್ವವನ್ನೇ ಮರೆತುಬಿಟ್ಟಿದ್ದವು. ಅವು ತಮ್ಮದೇ ಸ್ವತ ನೆಲೆಯಲ್ಲಿ ರಾಜಕೀಯ ಪಕ್ಷಗಳೆಂಬ ಅಸ್ತಿತ್ವವನ್ನೇ ಮರೆತುಬಿಟ್ಟಿದ್ದವು.

ನಾವು ಬಹಳಷ್ಟನ್ನು ಕಳೆದುಕೊಂಡೆವು. 1969 ಮತ್ತು 1971ರ ನಡುವೆ ಒಟ್ಟು 543 ನಾಯಕರು ಮತ್ತು ಕಾರ್ಯಕರ್ತರು ಹತರಾದರು ಎರಡನೇ ಸಂಯುಕ್ತರಂಗ ಸರಕಾರದ ಅವಧಿಯಲ್ಲಿ 79 ಜನರು ಬಲಿಯಾದರು. ರಾಷ್ಟ್ರಪತಿ ಆಡಳಿತದ ಎರಡನೇ ಅವಧಿಯಲ್ಲಿ 238 ಮಂದಿ, ಕಾಂಗ್ರೆಸ್ ಮುಸ್ಲಿಂ ಲೀಗ್ ಆಡಳಿತದ ವೇಳೆ 109 ಹಾಗೂ ರಾಷ್ಟ್ರಪತಿ ಆಡಳಿತ ಮೂರನೇ ಅವಧಿಯಲ್ಲಿ 117 ಜನರು ಪ್ರಾಣಕಳೆದುಕೊಂಡರು.

ಹುತಾತ್ಮರಾದವರಲ್ಲಿ ಕಾಂಮ್ರೇಡ್‌ಗಳಾದ ಜಿವನ ಮೈತ್ರಿ ನೀರೇಶ್ ಠಾಕೂರ್, ಸಂತೋಷ್ ಭಟ್ಟಾನಾಯಕ್, ಅನಂತದತ್ತ, ಅಮರ್ ಠಾಕೂರ್, ಸ್ನೇಹೇಂದ್ರ ದಾಸ್, ಬಿ.ಎನ್. ಪ್ರಸಾದ್, ಎ.ಬಿ. ರಾಯ್, ರಾಮಚಂದ್ರ ರಾಯ್, ವಿವೇಕ ಪಂಜಾ, ಸುಕುಮಾರ್ ಭೌಮಿಕ್, ಕಾಳಿಚಕ್ರವರ್ತಿ, ಸುಲ್ತಾನ್ ಮುನ್ಶಿ, ಮತ್ತು ವಿಶ್ವನಾಥ ಘೋಷ್ ಸೇರಿದ್ದರು.

ಅರಾಜಕತೆ ಚುನಾವಣೆ

1971ರ ಮಾರ್ಚ್ 9 ರಂದು ಪಶ್ಚಿಮ ಬಂಗಾಳದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಬೇಕಿತ್ತು. ಹುಚ್ಚು ಹಿಂಸಾಚಾರದಿಂದಾಗಿ ಉಸಿರುಗಟ್ಟಿರುವ ವಾತಾವರಣ ಉಂಟಾಗಿತ್ತು. ಎರಡನೇ ಸಂಯುಕ್ತರಂಗ ಸರಕಾರ ಉರುಳಿದಾಗಿನಿಂದಲೂ ಚುನಾವಣೆ ನಡೆಸುವಂತೆ ಸಿಪಿಐ(ಎಂ) ಒತ್ತಾಯಿಸುತ್ತಲೇ ಇತ್ತು. ಆದರೆ ದೇಶದಲ್ಲಿ ಐದನೇ ಸಾರ್ವತ್ರಿಕ ಚುನಾವಣೆ ಘೋಷಣೆಯಾದಾಗ ದೇಶದ ಇತರ ಭಾಗಗಳ ಜತೆಯಲ್ಲಿ ಪಶ್ಚಿಮ ಬಂಗಾಳದ ಲೋಕಸಭೆ ಸ್ಥಾನಗಳಿಗೆ ಚುನಾವಣೆ ನಡೆಯಬಾರದು ಅದನ್ನು ಮುಂದಕ್ಕೆ ಹಾಕಬೇಕು ಎಂದು ಕಾಂಗ್ರೆಸ್ ಮತ್ತು ಅದರ ಮಿತ್ರರು ಪ್ರಯತ್ನಿಸಿದರು. ಅಸೆಂಬ್ಲಿ ಚುನಾವಣೆಯನ್ನಂತೂ ನಡೆಯದೇ ಅವರು ಮುಂದಾದರು.

ಹಾಗಾಗಲು ನಾವು ಬಿಡಲಿಲ್ಲ. ಸತತ ಹೋರಾಟ ಚಳುವಳಿಗಳ ಪರಿಣಾಮವಾಗಿ ಸುನಾವಣೆ ನಡೆಯಲೇಬೇಕಾಯಿತು ಕಾಂಗ್ರೆಸ್ ಅದನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಿತು.

ಮೂರು ವಿಧದ ದಾಳಿ.

ಏನಿದ್ದರೂ ಚುನಾವಣೆ ಎದುರಿಸುವುದು ಅಷ್ಟೊಂದು ಸುಲಭದ್ದಾಗಿರಲಿಲ್ಲ. ಸಶಸ್ತ್ರ ಪಡೆಗಳು, ಸಿಪಿಐ ಹಾಗೂ ರಂಗದ ಹಿಂದಿನ ಇತರ ಪಾಲುದಾರರನ್ನು ಒಳಗೊಂಡ ಎರಡನೇ ರಂಗ' ಮತ್ತು ಕೊನೆಯದಾಗಿ ಭಯೋತ್ಪಾದನೆಯಲ್ಲಿ ತೊಡಗಿದ ಉಡಪಂಥೀಯರು ಹೀಗೆ ಈ ಮೂರು ವಿಧದ ದಾಳಿಯನ್ನು ನಾವು ಎದುರಿಸಬೇಕಾಗಿತ್ತು.

ಚುನಾವಣೆ ಘೋಷಣೆಯ ವಿಜಯೋತ್ಸವವನ್ನು ಆಚರಿಸುವಾಗಲೇ ನಮ್ಮ ಅನೇಕ ಸಹೋದ್ಯೋಗಿಗಳು ಹಾಗೂ ಸಹಕಾರ್ಯಕರ್ತರ ಹತ್ಯೆಯ ಬೇಸರದ ಛಾಯೆಯೂ ನಮ್ಮನ್ನಾವರಿಸಿತು.

1969ರ ಚುನಾವಣೆ ಮತ್ತು ಈಗಿನ ಚುನಾವಣೆಗೆ ಒಂದು ದೊಡ್ಡ ವ್ಯತ್ಯಾಸ ಇತ್ತು. ಹಿಂದೆ ಎಡಪಂಥೀಯದಲ್ಲಿ ಒಂದಾಗಿದ್ದರು. ಈಗ ಹಾಗಿರಲಿಲ್ಲ. ನಮ್ಮ ರಂಗದಲ್ಲಿದ್ದ ಕೆಲವು ಪಾಲುದಾರರೇ ಒಂದೇ ಕಾಂಗ್ರೆಸ್ ಜತೆ ಕೈಗೂಡಿಸಿದ್ದರು ಇಲ್ಲವೇ ಕಾಂಗ್ರೆಸ್ ವಿರೋಧಿ ಧೋರಣೆಯ ಹೆಸರಿನಲ್ಲಿ ಎಂಟು ಪಕ್ಷಗಳ ಕೂಟವೊಂದನ್ನು ರಚಿಸಿಕೊಂಡಿದ್ದರು. ಆಗ ನಮ್ಮನ್ನು ಸೋಲಿಸುವುದೇ ಅವರ ಏಕೈಕ ಉದ್ದೇಶವಾಗಿತ್ತು.ಕಾಂಗ್ರೆಸ್ ಈಗಾಗಲೇ ನೈತಿಕವಾಗಿ ಸೋತಿದೆ ಎಂಬುದು ನಿಜವಾಗಿದ್ದರೂ ಈ ಬಾರಿಯ ಹೋರಾಟವಂತೂ ತೀಕ್ಷ್ಣ ವೆಂಬುದು ನಮಗೆ ಗೊತ್ತಿತ್ತು.

ಕಾಂಗ್ರೆಸ್ ಒಡೆದ ಮನೆ

ಒಳಜಗಳ ಹಾಗೂ ಅಧಿಕಾರ ಲಾಲನೆಯಿಂದಾಗಿ ಕಾಂಗ್ರೆಸ್ ಕೂಡ ಹೋರತಾಗಿತ್ತು. ಕಾಂಗ್ರೆಸ್ (ಸಂಸ್ಥಾ) ಹಾಗೂ ಆಳುವ ಕಾಂಗ್ರೆಸ್ ಎಂದು ಎರಡು ಕಾಂಗ್ರೆಸ್ ಇದ್ದವು. ಆಳುವ ಕಾಂಗ್ರೆಸಿಗೆ ನಾಯಕತ್ವ ಇಂದಿರಾ ಗಾಂಧಿಯವರದು. ರಾಜಧನ ರದ್ದತಿ ಹಾಗೂ ಬ್ಯಾಂಕ್‌ಗಳ ರಾಷ್ಟ್ರೀಕರಣದಿಂದಾಗಿ ಆಕೆ ಸ್ವಲ್ಪ ಜನಪ್ರಿಯತೆಗಳಿಸಿದ್ದರು. ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ರಾಷ್ಟ್ರದ ಪಾತ್ರವೂ ಆದಿಕಾರ ಜನಪ್ರಿಯತೆಗೆ ಕಾರಣವಾಗಿತ್ತು ಎನ್ನುವುದನ್ನು ಮರೆಯಲಾಗದು.

ನಾವು ಈ ಕ್ರಮಗಲನ್ನು ತಾತ್ವಿಕವಾಗಿ ಬೆಂಬಲಿಸಿದ್ದೆವು. ಆದರೆ, ಅದೇ ವೇಳೆಗೆ ಇಂದಿರಾಗಾಂಧಿಯಲ್ಲಿನ ಸರ್ವಾಧಿಕಾರಿ ಧೋರಣೆ ಬಹಿರಂಗಕ್ಕೆ ಬಂದಿತು. ಇಂದಿರಾ 1957ರಲ್ಲಿ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದಾಗ ಕೇರಳದ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸಲು ಪಿತೂರಿ ಹೂಡಿದ್ದನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ. ಆಕೆ ಎಲ್ಲಾ ಅಧಿಕಾರವನ್ನು ಕೇಂದ್ರೀಕರಣಗೊಲಿಸಿದರು ಹಾಗೂ ಕಾಂಗ್ರೆಸ್ ಪಕ್ಷವನ್ನೇ ವಿಭಜಿಸಿದರು. ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತದ ಕರಾಳ ಅವಧಿಯಲ್ಲಿ ಇಂದಿರಾಗಾಂಧಿ ವಹಿಸಿದ ಪಾತ್ರವೂ ನಾವು ಮರೆಯಲಾಗದಂಥದ್ದು.

ನಮ್ಮ ನಿರೀಕ್ಷೆಗೆ ವ್ಯತಿರಿಕ್ತವಾಗಿ ಭಯೋತ್ಪಾದಕ ಆಡಳಿತ ಎಗ್ಗಿಲ್ಲದೆ ಮುಂದುವರಿಯಿತು. ನಾಸ್ತವವಾಗಿ ಚುನಾವಣೆ ಘೋಷಣೆಯಾದ ಮೇಲೆ ಅದು ಇನ್ನೂ ಹೆಚ್ಚಿತು. ಕಾಂಗ್ರೆಸ್‌ನ ಇಚ್ಛೆಗೆ ವಿರುದ್ಧವಾಗಿ ಚುನಾವಣೆ ನಡೆಯಲಿದ್ದರಿಂದ ಅದು ತೀರಾ ಹತಾಶೆಗೊಂಡಿತು.

ನಮ್ಮ ಚುನಾವಣೆ ಸಭೆಗಳ ಮೇಲೆ ಆಕ್ರಮಣ ಆರಂಭವಾಯಿತು. ಅನೇಕ ಸಭೆಗಳಿಗೆ ನೀಡಿದ್ದ ಅನುಮತಿಯನ್ನು ಸರಕಾರ ವಾಪಸು ತೆಗೆದುಕೊಂಡಿತು. ನನ್ನ ಕ್ಷೇತ್ರ ಬಾರಾನಗರ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಚುನಾವಣೆ ದಿನದವರೆಗೂ ನನಗೆ ನನ್ನ ಕ್ಷೇತ್ರವನ್ನು ಪ್ರವೇಶಿಸಲು ಆಗುತ್ತಿಲ್ಲ ಎಂದರೆ ಎಂಥ ಪರಿಸ್ಥಿತಿಯಿದ್ದೀತು ಎನ್ನುವುದನ್ನು ಊಹಿಸಿಕೊಳ್ಳಿ.

ನಮ್ಮ ಅನೇಕ ಬೆಂಬಲಿಗರು ತಮ್ಮ ಮನೆಮಾರುತೊರೆದು ಬೇರೆ ಕಡೆ ಆಶ್ರಯ ಪಡೆಯಬೇಕಾಯಿತು. ಬಾರಾನಗರದಲ್ಲಿ ಸಿಪಿಐ(ಎಂ)ನ ಯಾವುದೇ ವ್ಯಕ್ತಿಗೆ ಸ್ಥಾನವಿರಲಿ... ಇದೊಂದೇ ಪ್ರತ್ಯೇಕ ಪ್ರಕರಣವೇನೂ ಆಗಿರಲಿ... ಇನ್ನೂ ಅನೇಕ ಸ್ಥಳಗಳಲ್ಲಿ ನಮಗೆ ಪ್ರಚಾ... ಮಾಡಲೂ ಅವಕಾಶ ನೀಡಲಿಲ್ಲ. ಅಷ್ಟೇ ... ಪೋಸ್ಟರ್ ಹಚ್ಚುವಂಥ ಕೆಲಸ ಮಾಡಲು ಕೂ... ಆಗಲಿಲ್ಲ.

ಮಾನವಾಗಿ ಪ್ರಚಾರ ಮಾಡುವುದಕ್ಕಿಂತ ನಮ್ಮ... ನಾವು ರಕ್ಷಿಸಿಕೊಳ್ಳುವುದು ಹೇಗೆ ಎಂಬುದೇ ಆ... ಮುಖ್ಯ ಕಾಳಜಿಯ ವಿಷಯವಾಗಿತ್ತು.

ಸರಕಾರದ ಪಾಲು

ಸಾವಿನ ರುದ್ರನರ್ತನದಲ್ಲಿ ಅಧಿಕಾರಿಗಳ... ಭಾಗವಹಿಸಿದರು. 1971 ಜನವರಿ ಒಂದ... ಮಾರ್ಚ್ 9 ರವರೆಗೆ 70ಕ್ಕೂ ಹೆಚ್ಚು ನಮ್ಮ ಸಂಗಾ... ಹಂತರಾದರು. ಸಿಪಿಐ(ಎಂ) ಅಭ್ಯರ್ಥಿಗಳಾ... ರಾಬಿನ್ ಸೇನ್, ದಿಲೀಪ್ ಮಂಜುಂದಾರ್ ಮ... ಗೋಕುಲಾನಂದ ರಾಮ್ ಅವರು ಅವರವ... ಕ್ಷೇತ್ರಗಳಲ್ಲಿ ಕಾಲಿಡುವುದನ್ನೇ ನಿಷೇಧಿಸಲಾಯಿ... ಇನ್ನೊಬ್ಬ ಅಭ್ಯರ್ಥಿ ಬಿನಯ ಕೋನಾರ್ ಇ... ಪ್ರಚಾರ ಅವದಿಯನ್ನು ಕಳೆದರು.

ಬಾಂಬ್ ಮಳೆ

1971 ಜನವರಿ 27 ರಂದು ನನ್ನ ಮೆ... ಹಲ್ಲೆಯಾಯಿತು. ಸಭೆಯೊಂದರಲ್ಲಿ ಭಾಗವಹಿಸ... ನಾನು ಬಸಿರಹಾಟ್‌ಗೆ ಹೊರಟಿದ್ದೆ. ನಾ... ಕಾರು ಬಸಿದ್ ಹಾಟ್ ಕಾಲೇ... ತಲುಪುತ್ತಿದ್ದಂತೆ ಬಾಂಬ್‌ಗಳ ಸುರಿವ... ಆಗತೊಡಗಿತು. ಎರಡು ಬಾಂಬ್‌ಗ... ಹಿಂದಿನ ಎಂಜಿನ್‌ಗೆ ತಾಗಿದವು. ನಮ್ಮ ಕಾ... ಚಲಿಸದಾಯಿತು. ಬೇರೊಂದು ಕಾರಿನಲ್ಲಿ ನಾ... ಸಭೆಯ ಸ್ಥಳಕ್ಕೆ ಹೋದೆವು. ಅಬ್ದುಲ್ ರಸೂ... ಮತ್ತಿತರ ಕೆಲವು ಮುಖಂಡರು ... ಜತೆಯಲ್ಲಿದ್ದರು.

ಮತದಾರರ ಮನೋಸ್ಥಿತಿಯನ್ನು ಅ... ಕಾಂಗ್ರೆಸ್ ಹೆಚ್ಚೆಚ್ಚು ಹತಾಶವಾಗತೊಡಗಿತು. ... ಹತಾಶೆಯಿಂದಾಗಿ ಅದು ಒಂದು ಪಿತೂರಿಯ... ರೂಪಿಸಿತು. ಕೆಲವು ಅಬ್ಯರ್ಥಿಗಳು ಮ... ಮುಖಂಡರನ್ನು ಕೊಲ್ಲುವುದು ಆ ಪಿತೂರಿ... ಉದ್ದೇಶ. ಅದರ ಅಪವಾದ ನಮ್ಮ ಮೆ... ಬರುವಂತೆ ಮಾಡುವುದು ಅವರ ಉದ್ದೇಶವಾಗಿ... ಒಂದು ರ3ಜಕೀಯ ಪಕ್ಷವಾಗಿ ನಮ್ಮ ... ಯಾವತ್ತೂ ವ್ಯಕ್ತಿಗಳ ನಾಶದಲ್ಲಿ ನಂಬಿಕೆಯಿಟ್ಟಿರ... ಎಂಬುದು ಸರ್ವವೇದ್ಯವಾಗಿದ್ದರೂ ಕಾಂಗ್ರೆಸ್ ... ರೀತಿ ಆಲೋಚಿಸಿತು.

ಹೇಮಂತ ಬೋಸ್ ಮೊದಲ ಬಲಿಪ...

ಆದರೂ ಕಾಂಗ್ರೆಸ್ ಈ ಹೇಯ ಪಿತೂರಿ ಭ... ಅನಾಹುತವನ್ನೇ ಮಾಡಿತು. ಗೌರವಾ... ಫಾರ್ವರ್ಡ್ ಬ್ಲಾಕ್ ನಾಯಕ ಹೇಮಂತ ಬೋ... ಈ ಹುನ್ನಾರದ ಮೊದಲ ಬಲಿಪಶುವಾದರು...

ಉತ್ತರ ಕಲ್ಕತ್ತಾದ ಶ್ಯಾಮ್ ಪುಕೂರ ಬಿದಿ... ಫೆಬ್ರವರಿ 20 ರಂದು ಹಾಡಹಗಲಲ್ಲೇ ಈ ಹಿ... ನೇತಾರನನ್ನು ಇರಿದು ಕೊಲ್ಲಲಾಯಿ... ಚುನಾವಣೆಗಳಲ್ಲಿ ಫಾರ್ವರ್ಡ್ ಬ್ಲಾಕ್ ... ವಿರೋದಿಯಾಗಿದ್ದರೂ ಹೇಮಂತ ಬಾಬು ... ಎರಡು ವರ್ಷದಲ್ಲಿ ನಮ್ಮ ವಿರುದ್ಧ ಒಂದೇ ಒ... ಮಾತು ಆಡಿರಲಿಲ್ಲ.

(ಮುಂದುವರಿಯುವ...

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 58

ಕರ್ನಾಟಕ ಈ ವಾರ ಒಂದು ನೋಟ

ಶೇ 15 ಅನುದಾನ ಕಡಿತ: ವಂಚನೆಯ ಆದೇಶ ಧಿಕ್ಕರಿಸಿ ಹೋರಾಟ

ಅನುದಾನ ಪಡೆಯುತ್ತಿರುವ. ಪದವಿ ಕಾಲೇಜುಗಳ ಉಪನ್ಯಾಸಕರು ಪ್ರಾಂಶುಪಾಲರು, ಸಿಬ್ಬಂದಿ ಈಗ ಮುಷ್ಕರಕ್ಕಿಳಿದಿದ್ದಾರೆ. ಫೆಬ್ರವರಿ 26 ರಂದು ಶಿಕ್ಷಣ ಸಂಸ್ಥೆಗಳ ಬಂದ್, ರ್‍ಯಾಲಿಗೆ ಕರೆ ನೀಡಿದ್ದಾರೆ. ಈ ಸಂಸ್ಥಾನದ ಆಡಳಿತ ಮಂಡಳಿ ಚಳುವಳಿಗೆ ಸೇರಿಕೊಂಡಿವೆ. ಒಂದು ಕಡೆ ಪರೀಕ್ಷೆಗಳು ಸಮೀಪಿಸುತ್ತಿರುವಾಗಲೇ ಮುಷ್ಕರ ಬಿಸಿ ತಾರಕಕ್ಕೇರುವ ಸಂಭವವಿದೆ. ಈ ಸ್ಥಿತಿಗೆ ನೂಕಿದ್ದೇ



ಸರ್ಕಾರ. ಕೊನೆಗೆ ಪಾಲಕರನ್ನು ವಿದ್ಯಾರ್ಥಿಗಳನ್ನು ಮುಷ್ಕರ ನಿರತರ ವಿರುದ್ಧ ಎತ್ತಿಕಟ್ಟುವ ಹುನ್ನಾರವೂ ಇದರಲ್ಲಿದೆ.

ಎಸ್.ಎಂ.ಕೃಷ್ಣರ ಸರ್ಕಾರ ಆದೇಶವೊಂದನ್ನು ಹೊರಡಿಸಿ ಇತ್ತೀಚೆಗೆ ಪದವಿ ಕಾಲೇಜುಗಳಿಗೆ ಶೇ 15 ರಷ್ಟು ಅನುದಾನ ಕಡಿತಗೊಳಿಸುವುದಾಗಿ ಹೇಳಿತು. ಈ ಆದೇಶ ಕಳೆದ 2000 ಶೈಕ್ಷಣಿಕ ವರ್ಷ ದಿಂದಲೇ ಪೂರ್ವಾನ್ವಯ ಎಂದಿತು. ಅದರಂತೆ ಈ ಮುಂದಿನ 2 ತಿಂಗಳ ಸಂಬಳವು ನೀಡಲಾಗದೆಂದು ತಿಳಿಸಿತು. ಈಗಾಗಲೇ ಸಾಕಷ್ಟು ಆದಾಯ ತೆರಿಗೆ, ಬೆಲೆ ಏರಿಕೆ, ವಿದ್ಯುತ್ ದರ ಏರಿಕೆಯಂತಹ ಬಾರುಕೋಲಿನ ಹೊಡೆತಕ್ಕೆ ಬೆನ್ನೊಡ್ಡಿರುವವರಿಗೆ ಈ ಎರಡು ತಿಂಗಳು ಸಂಬಳ ಇಲ್ಲವೆನ್ನುವುದು ನಿಜಕ್ಕೂ ಆಘಾತಕಾರಿ. ಮೇಲಾಗಿ ಮುಂದಿನ ವರ್ಷದ ಕಡಿತವೂ ಇದರೊಂದಿಗೆ ತಟ್ಟಲಿದೆ.

ಉನ್ನತ ಶಿಕ್ಷಣದ ಕಡಿತದ ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಬಳಸಲಾಗುತ್ತಿದೆ ಎಂದು ಸಬೂಬು ಹೇಳುತ್ತಿದೆ ಸರ್ಕಾರ. ಇದು ಅರ್ಥಹೀನ ಹಾಗೂ ಸುಳ್ಳಿನ ಕಂತೆ. ಶಿಥಿಲಗೊಂಡ ಕಟ್ಟಡಗಳು, ಶಿಕ್ಷಕರ ಕೊರತೆ, ದೀನ ಸ್ಥಿತಿಯಲ್ಲಿರುವ ಮಕ್ಕಳು, ಚಾಪೆಯೂ ಇಲ್ಲದ, ಕಪ್ಪು ಹಲಗೆಯೂ ನವೀಕರಣಗೊಳ್ಳದ, ಪಾಯಿಖಾನೆ, ಕುಡಿಯು ನೀರಿಗೂ ಗತಿಯಿಲ್ಲದ ಶಾಲೆಗಳ ಸ್ಥಿತಿಯೇ ಇದಕ್ಕೆ ಸಾಕ್ಷಿ. ಪ್ರಾಥಮಿಕ ಶಿಕ್ಷಣ ಹಾಗೂ ಉನ್ನತ ಶಿಕ್ಷಣವನ್ನು ಪರಸ್ಪರ ಮುಖಾಮುಖಿಯಾಗಿ ನಿಲ್ಲಿಸುವುದೇ ಅಸಂಬದ್ಧ.

ಆದರೆ ಶಿಕ್ಷಣಕ್ಕೆ ಅದರಲ್ಲಿಯೂ ಉನ್ನತ ಶಿಕ್ಷಣಕ್ಕೆ ಒಟ್ಟಾರೆ ಶಿಕ್ಷಣಕ್ಕೆ ಹಣ ಕಡಿತ ಮಾಡಬೇಕು ಎಂಬುದು ಕೇಂದ್ರ ಸರ್ಕಾರದ ಸ್ಪಷ್ಟ ನಿರ್ಧಾರ. ವಿಶ್ವಬ್ಯಾಂಕ್‌ನ ಅಣತಿಯಂತೆ ವಿಶ್ವವಿದ್ಯಾಲಯ ಧನ ಆಯೋಗವೂ ಸ್ವಂತ ಹಣದಲ್ಲಿಯೇ ಶಿಕ್ಷಣವೆಂಬ ಸಿದ್ಧಾಂತಕ್ಕೆ ದೇಶವನ್ನು ಉರುಳು ಹಾಕಲು ನಿರ್ಧರಿಸಿದೆ. ರಾಜ್ಯ ಸರ್ಕಾರಕ್ಕೆ ಇರುವ ಕನಿಷ್ಟ ಹೊಣೆ, ಅಂತಹ ನೀತಿಗಳನ್ನು ಪ್ರತಿರೋಧಿಸುವ ಕಿಂಚಿತ್ತೂ ಕಾಳಜಿ ಇಲ್ಲದೇ, ಮೇಲಿನ ನೀತಿಗಳನ್ನು ಶಿರಸಾವಹಿಸಿ, ಜಾರಿ ಮಾಡುವ ಈ ರಾಜ್ಯ ಸರ್ಕಾರದ ಜಾರಿ ಕ್ರಮವೇ ಇದಾಗಿದೆ. ಮೇಲಾಗಿ ಕಾಂಗ್ರೆಸ್ ಈ ನೀತಿಗಳ ಪ್ರತಿಪಾದಕರಲ್ಲವೇ?

ಹೀಗಾಗಿ ಚಳುವಳಿಗೆ ಇಳಿದಿರುವಾಗಲೂ, ಚರ್ಚೆ ನಡೆಯಲಿ ಎಂದು ಬಯಸಿದರೂ ಸೈಬರ್ ಕೃಷ್ಣರವರು ಪುನರ್ ವಿಮರ್ಶೆ ಪ್ರಶ್ನೆಯೇ ಇಲ್ಲವೆಂದು ಘೋಷಿಸಿದ್ದಾರೆ. ಆಯಾ ಶಿಕ್ಷಣ ಸಂಸ್ಥೆಗಳೇ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಿ ಎಂದು ಉಪದೇಶ ಮಾಡಿದ್ದಾರೆ. ಅದರರ್ಥ ವಿದ್ಯಾರ್ಥಿ-ಪಾಲಕರಿಂದ ವಸೂಲು ಮಾಡಿ ಎಂಬ ದಬಾವಣೆ. ಈಗಾಗಲೇ ರಾಜ್ಯ ಸರ್ಕಾರ ಶಿಕ್ಷಣದ ಶುಲ್ಕಗಳನ್ನು ವಿಪರೀತವಾಗಿ ಏರಿಸಿರುವ ಬೆನ್ನಲ್ಲೇ ಇದು ಜಾರಿಯಾದರೆ ಮತ್ತೇ ಪ್ರತಿಯೊಬ್ಬ ವಿದ್ಯಾರ್ಥಿ ಕನಿಷ್ಟವೆಂದರೂ ರೂ. 3,000/- ಅಧಿಕ ತೆರಬೇಕು. ಇದು ಹೇಗೆ ಸಾಧ್ಯ? ಅದರಲ್ಲಿಯೂ ಬಹುತೇಕ ಪಾಲಕರು ತಮ್ಮ ಬೆಳೆಗೆ ಬೆಲೆ ಇಲ್ಲದೇ, ಸಾಲದ ಶೂಲದಲ್ಲಿ ನೇತಾಡುತ್ತಿರುವಾಗ ಸಾಧ್ಯವಾಗುವುದಾದರೂ ಹೇಗೆ? ಜನರ ಬೇಗೆಗಿನ ಕಳಕಳಿ, ಸಾಮಾಜಿಕ ಹೊಣೆ ಇಲ್ಲದ ಜನ ವಿರೋಧಿ ನಿಲುಮೆ ಇದು. ವಾಜಪೇಯಿ ಸರ್ಕಾರದ ನೀತಿಗಳನ್ನು ಜಾರಿಗೊಳಿಸಲೆಂದೇನು ಕೃಷ್ಣರನ್ನು ಜನ ಕೇಳುವುದು, ಕಾಂಗ್ರೆಸ್‌ಗೆ ಅಧಿಕಾರ ನೀಡಿರುವುದು? ಕೋಲಾ ಕಂಪನಿಗೆ 250 ಕೋಟಿ, ಹೆಂಡದ ದೊರೆಗಳಿಗೆ 300 ಕೋಟಿ ನೀಡುವ ರಿಯಾಯಿತಿ ಸರ್ಕಾರ 30 ಕೋಟಿ ಅನುದಾನ ಕಡಿತ ಮಾಡುವುದೆಂದರೇನು?

ರಾಜ್ಯಾದ್ಯಂತ ಪ್ರಬಲ ಹೋರಾಟಕ್ಕೆ ಸಿದ್ಧವಾಗುತ್ತಿರುವಂತೆಯೇ ಸರ್ಕಾರವು ಹೊಸ ಆದೇಶ ಪ್ರಕಟಿಸಿದೆ. ಅದರಂತೆ ಶೇ 15 ರ ಅನುದಾನ ಕಡಿತ ಮಾಡುವ ಆಜ್ಞೆ ಹಿಂತೆಗೆದುಕೊಳ್ಳಲಾಗುವುದು. ಆದರೆ ಅನುದಾನ ಪಡೆಯುತ್ತಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಕಡಿತ ಮುಂದುವರಿಯುವುದು. ಅಲ್ಲದೇ ಅನುಮೋದಿತ ಖಾಲೀ ಇರುವ (ಸರ್ಕಾರ ಹೇಳುವಂತೆ 3000) ಅಧ್ಯಾಪಕರ ಹುದ್ದೆಗಳನ್ನು ಶಾಶ್ವತವಾಗಿ ರದ್ದು ಪಡಿಸಲಾಗುವುದು ಎಂದೂ ತುಂಬಲಾಗುವುದಿಲ್ಲ. ನಿವೃತ್ತಿ ಅಥವಾ ಮರಣದಿಂದ ಖಾಲಿಯಾದರೂ ನೇಮಕಾತಿಯ ಬಗ್ಗೆ ಸರ್ಕಾರ ನಿರ್ಧರಿಸುವುದು. ಈ ಆದೇಶ ಅತ್ಯಂತ ವಂಚನೆಯದು. ಈಗಿರುವ ಸಂಬಳ ಮೊತ್ತ ಉಳಿಸಿಕೊಂಡರೂ, ಅಂತಿಮದಲ್ಲಿ ಹೊಸ ನೇಮಕಾತಿ ಇಲ್ಲದೇ, ಶಿಕ್ಷಣದ ಅವಕಾಶ ಕುಗ್ಗಿಸುವ ಇಲ್ಲವೇ ವ್ಯಾಪಾರಕ್ಕೆ ಒತ್ತಾಯಿಸುವ ಅಂಶ ಮತ್ತು ಹಲವು ಸಮಸ್ಯೆಗಳೂ ಇನ್ನೂ ಹೆಚ್ಚಿಸಲಿದೆ. ಈ ಏಕಪಕ್ಷೀಯ ಆದೇಶವನ್ನು ಸರ್ಕಾರ ರದ್ದುಪಡಿಸಬೇಕು. ಶಿಕ್ಷಕ ಸಮುದಾಯವನ್ನು ಒಡೆಯುವ, ಹೋರಾಟದ ದಿಕ್ಕು ತಪ್ಪಿಸುವ ಹುನ್ನಾರ ಕೈಬಿಡಬೇಕು.

ಅಧ್ಯಾಪಕ-ಸಿಬ್ಬಂದಿಗಳೂ ಸಹ ಹೋರಾಟ ಮುಂದುವರಿಸುವುದಾಗಿ ಹೇಳಿದ್ದಾರೆ. ರಾಜಿಯಿಲ್ಲದೇ ಹೋರಾಟ ಮುಂದುವರಿಯಲೇಬೇಕು.

ವಿಶ್ವಬ್ಯಾಂಕ್, ಐಎಂಎಫ್‌ನ ನೀತಿಗಳ ಜಾರಿ ಪರಿಣಾಮ ಎಲ್ಲರನ್ನು ತಟ್ಟುತ್ತಿದೆ. ವಾಜಪೇಯಿ, ಕೃಷ್ಣರ ಈ ನೀತಿಗಳ ವಿರುದ್ಧ ಜನರು ಜಾಗೃತರಾಗತೊಡಗಿದ್ದಾರೆ. ಮುಖಾಮುಖಿಯಾಗಿ ಹೋರಾಡುತ್ತಿದ್ದಾರೆ. ಶಿಕ್ಷಣದ ಹಕ್ಕನ್ನೇ ನಿರ್ನಾಮ ಮಾಡುವ ಈ ಮೋಸದಾಟದ ವಿರುದ್ಧ ಇನ್ನೂ ಹೋರಾಟ ವ್ಯಾಪಕವಾಗಿ ಬೆಳೆಯಬೇಕು. ಸಂಘರ್ಷ ನಿರತ ಅಧ್ಯಾಪಕ, ಅದ್ಯಾಪಕೇತರ ಜನ ಸಮೂಹ ಇಂತಹ ಮೂಲಭೂತ ಪ್ರಶ್ನೆಗಳನ್ನು ಇತ್ಯರ್ಥಪಡಿಸುವ, ಆಳುವವರ ನೀತಿಗಳನ್ನು ಹಿಮ್ಮೆಟ್ಟಿಸುವವರೆಗೂ ಹೋರಾಡಬೇಕು. ಇತರೆ ದುಡಿಯುವ ಜನ ವಿಭಾಗಗಳು, ವಿದ್ಯಾರ್ಥಿ-ಪಾಲಕರೂ ಕೈಜೋಡಿಸಬೇಕು. ಈಗಾಗಲೇ ಅಂತಹ ಪ್ರಯತ್ನ ಆರಂಭಗೊಂಡಿರುವುದು ಉತ್ತಮ ಬೆಳವಣಿಗೆ. ಇದರಲ್ಲಿ ವಾಜಪೇಯಿ ಪರಿವಾರವೂ 'ಸಿಂಪಥಿ'ಯಿಂದ ಹೋರಾಡಲು ಬಂದಿರುವುದೇ ಸನ್ನಿವೇಶದ ಅನಿವಾರ್ಯತೆಯನ್ನು ತೋರಿಸುತ್ತಿದೆ. ಕೃಷ್ಣ ಸರ್ಕಾರವನ್ನು ವಿರೋಧಿಸುವುದಕ್ಕಷ್ಟೇ ಅಜೆಂಡಾ ಗುಪ್ತವಾಗಿ ಇರಬಹುದು, ಇರಲಾರದು. ಕೃಷ್ಣರವರ ಸರ್ಕಾರದ ಹಲವು ಸಚಿವರೂ ಈ ಕಡಿತಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಜನರ ಈ ಹೋರಾಟ ಬೆಳೆದಂತೆ ಹಲವು ಬದಲಾವಣೆ ತರಬಲ್ಲದು. ಇದರಲ್ಲಿ ವಿದ್ಯಾರ್ಥಿ ಪಾಲಕರ ಪಾತ್ರ ಗಣನೀಯ ಪ್ರಭಾವ, ಬದಲಾವಣೆ ತರುತ್ತದೆ. ಕೂಡಲೇ ಸರಕಾರ ಎಚ್ಚೆತ್ತುಕೊಂಡು ನಿರ್ಧಾರ ಕೈಬಿಡಬೇಕು.

ಎಸ್.ವೈ.ಗುರುಶಾಂತ್

ದೇವೇಗೌಡರ ಪತ್ನಿ, ಸೊಸೆಯ ಮೇಲೆ ಆಸಿಡ್: ಅತ್ಯಂತ ಹೇಯ ಕೃತ್ಯ

ಮಾಜಿ ಪ್ರಧಾನಿ ದೇವೇಗೌಡರ ಪತ್ನಿ, ಚೆನ್ನಮ್ಮನವರು ಹಾಗೂ ಸೊಸೆ ಭವಾನಿ ರೇವಣ್ಣನವರ ಮೇಲೆ ಆಸಿಡ್ ಎರಚಿ ಕೊಲ್ಲುವ ಯತ್ನ ನಡೆದಿರುವುದು ತೀವ್ರ ಖಂಡನೀಯ. ಶಿವರಾತ್ರಿಯ ಪೂಜೆಗೆಂದು ಅವರ ಊರು ಹರದನಹಳ್ಳಿಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಹಿಂತಿರುಗುವಾಗ ಈ ದುರ್ಘಟನೆ ನಡೆದಿದೆ. ಇವರಲ್ಲದೇ ರೇವಣ್ಣನವರನ್ನು ಸಹ ಕೊಲ್ಲುವ ಉದ್ದೇಶದಿಂದಲೇ ಈ ಕೃತ್ಯ ಹೆಣೆಯಲಾಗಿತ್ತು ಎಂಬ ವಿಷಯಗಳೂ ಬಯಲಾಗುತ್ತಿವೆ. ಈ ಕೃತ್ಯದ ಹೊಣೆಯನ್ನು ದೇವೇಗೌಡರ ಸಹೋದರನ ಮಗ ಲೋಕೇಶ್ ಮಾಡಿರುವುದಾಗಿ ಒಪ್ಪಿಕೊಂಡ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿದೆ. ಆದರೆ ಇದು ಅಷ್ಟೇ ಅಲ್ಲ ಎಂದ ದೇವೇಗೌಡರು ನಿರಾಕರಿಸುತ್ತಾರೆ.

ಆಸ್ತಿ ಹಂಚಿಕೆಯ ವಿವಾದವೇ ಇದಕ್ಕೆ ಮೂಲವೆಂದು ವ್ಯಾಖ್ಯಾನಿಸಲಾಗುತ್ತಿದೆ. ಆದರೆ ಈ ಘಟನೆಯ ಹಲವು ವಿವರಗಳನ್ನು ಗಮನಿಸಿದಾಗ ಇದು ಅಷ್ಟೇ ಇರಲಾರದು ಎಂಬುದು ಸ್ಪಷ್ಟ. ದೇವೇಗೌಡರೇ ಹೇಳುವಂತ ಆಸ್ತಿಹಂಚಿಕೆ 1972 ರ ಹೊತ್ತಿಗೆ ನಡೆದಿದೆ ಹಾಗೂ 1998 ರವರೆಗೂ ಸಹೋದರರು ಜೊತೆಗೆ ಇದ್ದಾರೆ. ಹಿಂದೆ ದೇವೇಗೌಡರ ಮೇಲೆ ಹೂಡಿರುವ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಲ್ಲಿ ಗೌಡರ ಬೇನಾಮಿ ಆಸ್ತಿ ಅವರ ಸಹೋದರ ಬಸವೇಗೌಡರ ಹೆಸರಲ್ಲಿದೆ ಎಂದು ಆರೋಪಿಸಿ ದೇವೇಗೌಡ ಒಂದನೇ ಹಾಗೂ ಸಹೋದರ ಎರಡನೇ ಆರೋಪಿಗಳನ್ನಾಗಿ ಮಾಡಲಾಗಿದೆ. ಹೀಗಾಗಿ ಈ ಆಸ್ತಿ ವಿವಾದ ಕೆಲವರ ಸೃಷ್ಟಿ ಅಷ್ಟೇ ಅನ್ನುತ್ತಾರೆ ದೇವೇಗೌಡರು ತಮ್ಮ ಖಾಸಗಿ ಮಾತಿನಲ್ಲಿ. ಅವರು ಗುರುತಿಸುವಂತೆ ಇದು 'ರಾಜಕೀಯ ಪಿತೂರಿ' ಹಾಸನಕ್ಕೆ ಇತ್ತೀಚೆಗೆ ಪ್ರವೇಶಿಸಿದಾಗ ಸಿಕ್ಕ ಜನತೆಯ ಭಾರೀ ಸ್ವಾಗತ, ಮತ್ತೆ ಬೆಳೆದ ರಾಜಕೀಯ ನೆಲೆಗಟ್ಟು, ಎದುರಾಳಿಗಳನ್ನು ನಡುಗಿಸಿದೆ. ಆದ್ದರಿಂದ ಈ ಎಲ್ಲಾ ಪಿತೂರಿಗಳನ್ನು ಹೊರಗೆಡಹಬೇಕಿದೆ ಎಂಬುದು.

ಈ ಎಲ್ಲಾ ಪ್ರಶ್ನೆಗಳ ಬಗ್ಗೆ ಕೂಲಂಕುಶವಾದ ತನಿಖೆ ನಡೆದು ಸತ್ಯ ಬಹಿರಂಗ ಆಗಬೇಕು. ಈ ಪಿತೂರಿ ಯಾರು, ಎಲ್ಲಿ, ಹೇಗೆ ಹೆಣೆದರು, ಇದಕ್ಕಾಗಿ ಯಾರ್‍ಯಾರನ್ನು ಬಳಸಿಕೊಂಡರು? ಮಾಜಿ ಪ್ರಧಾನಿಗಳ ಕುಟುಂಬಕ್ಕೆ ವಿಶೇಷ ಭದ್ರತೆ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಇದನ್ನು ಮೀರಿ ಈ ಘಟನೆ ಹೇಗೆ ಸಂಭವಿಸಿತು. ಆಗಿರುವ ಲೋಪವೇನು? ಅಥವಾ ಶಾಮೀಲುತನವೋ? ಇವೆಲ್ಲಾ ಗಂಭೀರವಾದ ಪ್ರಶ್ನೆಗಳು.

ರಾಜ್ಯ ಸರ್ಕಾರವೇನೋ ಸಿಓಡಿ ತಂಡವನ್ನು ಅಲ್ಲಿಗೆ ಕಳುಹಿಸಿದೆ. ನ್ಯಾಯಾಂಗ ತನಿಖೆಗೂ ಆದೇಶಿಸಿದೆ. ಇದರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿ ಸಿಬಿಐ ತನಿಖೆ ಆಗಲಿ ಎಂದು ಹಲವರು ಆಗ್ರಹಪಡಿಸಿದ್ದಾರೆ.

ಪುಟ 11 ನೋಡಿ

ಆಳುವವರ ರಾಜಕೀಯ ಇಚ್ಛಾಶಕ್ತಿ ಕೊರತೆ: ಒಣಗಿದ ಭೀಮಾನದಿ

ಭೀಮಾ ನದಿ ಒಣಗಿ ಬಿಜಾಪುರ-ಗುಲ್ಬರ್ಗಾ ಜಿಲ್ಲೆಗಳ 149 ಹಳ್ಳಿಗಳ ನೀರಿನ ಸಮಸ್ಯೆಯಾಗಿ ಗರಿಗೆದರಿ ನಿಂತಿದೆ. ನೀರಾವರಿಯೋಜನೆಗಳ ಕುರಿತು 50 ವರ್ಷಗಳಿಂದ ನಮ್ಮನ್ನಾಳಿರುವವರು ವರ್ಷದ ಬೀಮೆಯ ಕುರಿತುತೋರಿಸುತ್ತಿದ್ದ ಅಲಕ್ಷದಿಂದಾಗಿ ಹೋದ ವರ್ಷದ ಮಧ್ಯ ದಿಂದಲೇ ಭಿಮೆ ನೀರಿಲ್ಲದೆ ಒಣಗಿ ಜನ-ಜಾನುವಾರು ಮತ್ತು ಬೆಳೆಗಳಿಗೆ ಶಾಪವಾಗಿ ಪರಿಣಮಿಸಿದೆ. ಹನಿ ನೀರಿಗಾಗಿ ಬೆಳೆ ರಕ್ಷಣೆಗಾಗಿ ಭೀಮಾ ನೀರು ರಕ್ಷಣಾ ಸಮಿತಿ ನೇತೃತ್ವದಲ್ಲಿ 10-2-2001 ರಿಂದ ಭೀಮಾ ನದಿ ದಂಡೆಯ ಗ್ರಾಮದಲ್ಲಿ ನಲ್ವತ್ತು ರೈತರು ಆಮರಣ ಉಪವಾಸ ಕೈಗೊಳ್ಳುವಂತಾಗಿದೆ.

ಕೃಷ್ಣೆಯ ಉಪನದಿ ಭೀಮೆ ಪುಣೆಯ ಹತ್ತಿರ ಬೀಮಾ ಶಂಕರ ಬೆಟ್ಟದಿಂದ ಉಗಮಗೊಂಡು ಆಂಧ್ರದ ಕೃಷ್ಣ ಗ್ರಾಮದ ಹತ್ತಿರ ಕೃಷ್ಣೆಯನ್ನು ಸೇರುತ್ತದೆ. ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಭೀಮಾನದಿಯಲ್ಲಿ ಮಹಾರಾಷ್ಟ್ರದ ಪಾಲು 95 ಟಿ.ಎಂ.ಸಿ. ಆಡಿಯಾದರೆ ಕರ್ನಾಟಕದ ಪಾಲು 15 ಟಿಎಂಸಿ ಆಂಧ್ರಕ್ಕೆ 5 ಟಿಎಂಸಿ. ವೀರಪ್ಪ ಮೋಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ 1996ರಲ್ಲಿ ಭೀಮಾ ನದಿಗೆ ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು ಒಡು ನಿರ್ಮಿಸಲು ರೂ. 17 ಕೋಟಿಯ ಯೋಜನೆಗೆ ಮಂಜೂರಾತಿ ನೀಡಿದ್ದರು. ಕೇಂದ್ರಜಲ ಆಯೋಗ ಒಪ್ಪಿಗೆ ನೀಡಿದೆ. ಆದರೆ ಬುದ್ಧಿ ಹೀನ ಕರ್ನಾಟಕ ಸರ್ಕಾರ ಆಲಮಟ್ಟಿ ಯೋಜನೆಯನ್ನು ಕಡೆಗೊಳಿಸಿದಂತೆ ಈ ಒಡ್ಡು ನಿರ್ಮಾಣದ ಕುರಿತು ಗಮನ ಹರಿಸುತ್ತಿಲ್ಲ.

ಗುಲ್ಬರ್ಗಾ ಬಿಜಾಪುರ ಜಿಲ್ಲೆ ಬೀಮಾನದಿ ದಂಡೆಯ 149 ಗ್ರಾಮಗಳ ರೈತರ ಕೂಗಿಗೆ ಮಣಿದ ಸರಕಾರ ರೂ. 100 ಕೋಟಿಯ ಯೋಜನೆ ತಯಾರಿಸಿತು. ಗುಲ್ಬರ್ಗಾ ಜಿಲ್ಲೆಯ ಅಫಜಲ್ ಪುರ ತಾಲೂಕಿನ ಸೊನ್ನ ಬಳಿ ಭಿಮಾನದಿ ನೀರು ಬಳಸಲು ಹೇಗೆಯೇ ಬಂದುರುಕಟ್ಟಲು ಮಹತ್ವಾಕಾಂಕ್ಷಿ ಯೋಜನೆ ತಯಾರಿಸಿತ್ತು. ಆದರೆ ಈ ಯಾವ ಯೋಜನೆಗಳೂ ಬೆಳಕು ಕಾಣಲೇ ಇಲ್ಲ.

ಮಹಾರಾಷ್ಟ್ರ ಮಂತ್ರಿಗಳಿಂದ ಧೀಮಾರಿ

"ಭೀಮಾ ನದಿಯ ನಲ್ಕು ಬ್ಯಾರೇಜುಗಳನ್ನು ಕರ್ನಾಟಕ ಸರಕಾರ ಶೀಘ್ರ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸದವರು ಮತ್ತ್ಯಾರೂ ಅಲ್ಲ, ಮಹಾರಾಷ್ಟ್ರ ಹೈನುಗಾರಿಕೆ ಮತ್ತು ಗ್ರಾಮೀಣ ಸಚಿವರಾದ ದೇವಗತೆಯಮ. ದಿ. 12-2-2001 ರಿಂದ ಭೀಮಾ ನದಿದಂಡೆ ಚಾಕಳಕಿಯಲ್ಲಿ ಆಮರಣ ಉಪವಾಸ ಕೈಗೊಂಡ ಸ್ಥಳಕ್ಕೆ ಭೇಟಿನೀಡಿದಾಗ ತಮ್ಮ ಜೊತೆಗಿದ್ದ ಕರ್ನಾಟಕದ ಮಂತ್ರಿ ಕಾಶಪ್ಪನವರಿಗೆ ಈ ಬುದ್ಧಿವಾದದ ಮಾತು ಹೇಳಿದರು. ಮಹಾರಾಷ್ಟ್ರ ಸರಕಾರ ತಮ್ಮ ಪಾಲಿನ ಬ್ಯಾರೇಜುಗಳನ್ನು ನಿರ್ಮಿಸಿ ಕೊಂಡಿದೆಂದೂ ಹೇಳಿದರು ಮಾತ್ರವಲ್ಲ ದಿ. 9 ರಿಂದಲೇ 1.3 ಟಿಎಂಸಿ ನೀರನ್ನು ಬಿಡಲಾಗಿದೆಂದೂ ಹೇಳಿದರು. ಆದರೆ ಮಹಾರಾಷ್ಟ್ರ ಸರಕಾರ ನೀರುಬಿಟ್ಟಿದೆಎಂದು ಹೇಳುತ್ತಿರುವಾಗ ದಿ 12 ರಂದು ನೀರಾವರಿ ಮಂತ್ರಿ ಎಚ್.ಕೆ. ಪಾಟೀಲರು ಹೇಳುತ್ತಾರೆ ನೀರು ಬಿಡುವಂತೆ ಮಹಾರಾಷ್ಟ್ರ ಮಂತ್ರಿಗಳಿಗೆ ನಮ್ಮ ಮುಖ್ಯ ಮಂತ್ರಿಯವರಿಂದ ಫೋನು ಮಾಡಿಸುತ್ತೇವೆಂದು ಕಿವುಡು ಕರ್ನಾಟಕ ಸರಕಾರಕ್ಕೆ ವಿಜನಿಯಿಂದ ನೀರು ಬಿಟ್ಟ ವಿಷಯವೇ ಗೊತ್ತಿಲ್ಲ.

ಬಿಜಾಪುರ ಗುಲ್ಬರ್ಗಾ ಜಿಲ್ಲೆಗಳ 150 ರಷ್ಟು ಗ್ರಾಮಗಳಲ್ಲಿಯ ರೈತ ಪರವಾಗಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾಕ್ಷದ ಪ್ರಾಂತ ರೈತ ಸಂಘ ಹಾಗೆಯೇ ಭೀಮಾನದಿ ನೀರು ಹೋರಾಟ ಸಮಿತಿ ಕಳೆದ ಮೂರುನಾಲ್ಕು ವರ್ಷಗಳಿಂದ ಸರಕಾರದ ಗಮನ ಸೆಳೆಯುತ್ತಲೇಬಂದಿದೆ. ಪತ್ರಿಕೆಗಳೂ ಸಾಕಷ್ಟು ಪ್ರಚಾರ ಕೊಟ್ಟಿವೆ. ಆದರೆ ಸರಕಾರ ಮಾತ್ರ ಇದರತ್ತ ಗಮನಹರಿಸಿಲ್ಲ. ತಾವೇ ತಯಾರಿಸಿದ ಬಂದಾರ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಿಲ್ಲ.

ನಾವು ಭೀಮಾ ನದಿಗೆ ಹೋಗಿ ಸಮೀಕ್ಷೆ ನಡೆಸಿದಾಗ 7-8 ಅಡಿಯಷ್ಟು ಆಳಕ್ಕೆ ಭೀಮಾನದಿ ಒಣಗಿದೆ. ಮೇಲೆ ಮಹಾರಾಷ್ಟ್ರ ಸರಕಾರ ರ್‍ಯಾರೋ ಕಟ್ಟಿರುವುದರಿಂದ ಭೀಮಾನೀರನ್ನು ಸೀಮಾ ನದಿಗೆ ಹರಿಬಿಡುವ ಹುನ್ನಾರ ದಲ್ಲಿರುವುದರಿಂದ 289 ಕಿ.ಮಿ. ಉದ್ದ ಕರ್ನಾಟಕದಲ್ಲಿ ಹರಿಯುವ, ಮಹಾರಾಷ್ಟ್ರ ಕರ್ನಾಟಕದ ಮಧ್ಯೆ 83.6 ಕಿಮಿ. ಹರಿಯುವ ಭೀಮಾನದಿಗೆ ಮಳೆಗಾಲದಲ್ಲಿ ಕೂಡ ನೀರಿನ ಹರಿವು ಕುಂಠಿತಗೊಳ್ಳಬಹುದು. ಇನ್ನೂ ನಾಲ್ಕೈದು ವರ್ಷ ಈ ಭಾಗದ ರೈತರು ಸಂಕಷ್ಟವನ್ನೆದುರಿಸಬೇಕಾಗಬಹುದು.

ಕರ್ನಾಟಕ ಸರಕಾರ ತಡಮಾಡದೆ ಬಂದರುಗಳನ್ನು ನಿರ್ಮಿಸಿದರೆ ಮಾತ್ರ ಮಳೆಗಾಲದಲ್ಲಿ ಸ್ವಲ್ಪ ಮಟ್ಟಿಗೆ ನೀರು ಸಂಗ್ರಹ ಸಾಧ್ಯ.

- ಎನ್.ಕೆ. ಉಪಾಧ್ಯಾಯ

ಬಾಗೇಪಲ್ಲಿ ಮುಖಭಂಗಕ್ಕೊಳಗಾದ ಕಾಂಗ್ರೆಸ್

ರೈತ ಚಳುವಳಿಯನ್ನು ಬಗ್ಗು ಬಡಿಯುವ ತಂತ್ರ ಪಿತೂರಿ ನಿರಂತರವಾಗಿ ಬಾಗೇಪಲ್ಲಿಯಲ್ಲಿ ನಡೆಯುತ್ತಿದೆ. ಮುಖಭಂಗಕ್ಕೊಳಗಾದ ಕಾಂಗ್ರೆಸ್ ಅದರಲ್ಲೂ ಇಲ್ಲಿನ ಕಾಂಗ್ರೆಸ್ ಪಕ್ಷ ಆ ಪಿತೂರಿಯಲ್ಲಿ ಪ್ರಧಾನ ಪಾತ್ರವಹಿಸುತ್ತಿದೆ. 1980ರಿಂದ ರೈತರ ಮೇಲೆ ನಡೆದ ಗೋಲೀಬಾರ್‌ನಿಂದ ಪ್ರಾರಂಭವಾಗಿ ಇಂದಿಗೂ ನಡೆಯುತ್ತಿದೆ. 1980ರಲ್ಲಿ ಆಗಿನ ಗುಂಡೂ ರಾವ್ ಸರ್ಕಾರದ ಜನವಿರೋಧಿ ನೀತಿಯನ್ನು ವಿರೋಧಿಸಿ ಯಶಸ್ವಿ ರ‍್ಯಾಲಿಯನ್ನು ಬಗ್ಗುಬಡಿಯಲು ಗೋಲೀಬಾರ್ ನಡೆಸಿ ಇಬ್ಬರು ರೈತರನ್ನು ಸಾಯಿಸಿದ್ದೇ ಅಲ್ಲದೇ ರೈತ ಮುಖಂಡರ ಮೇಲೆ ಮೊಕದ್ದಮೆಗಳನ್ನು ಹೂಡಿ (ಕಾಂಗ್ರೆಸ್ ಮುಖಂಡರು ಮತ್ತು ಪೋಲೀಸರು) ಕೋರ್ಟಿಗೆ ಅಲೆಯುವಂತೆ ಮಾಡಿದರು. ಇಡೀ 80ರ ದಶಕ ADATS ಎಂಬ ವಿದೇಶಿ ಹಣದ ಸಂಸ್ಥೆಯೊಂದಿಗೆ ಸೇರಿ ಕಾಂಗ್ರೆಸ್ ನಿರಂತರವಾಗಿ ರೈತ ಸಂಘದ ಮತ್ತು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಸುತ್ತವೆ. ಇದು ಈಗಲೂ ಮುಂದುವರಿದಿದೆ.

ತಾ। 7-2-2001 ರಂದು ಬಾಗೇಪಲ್ಲಿಯ ತಾಲ್ಲೂಕು ಪಂಚಾಯ್ತಿ ಕಛೇರಿಯಲ್ಲಿ ನಡೆದ ದಾಂದಲೆಯನ್ನು ಕಾಂಗ್ರೆಸ್ ಪಕ್ಷ ರಾಜಕೀಯ ಗೊಳಿಸಲು ಯತ್ನಿಸಿ ವಿಫಲವಾಗಿ ಮುಖಭಂಗ ಗೊಂಡಿದೆ. ಇನ್ನೊಂದು ಕಡೆ ತಮ್ಮ ಅಧಿಕಾರದ ಮದದಿಂದ ಪೋಲೀಸರನ್ನು ಉಪಯೋಗಿಸಿ. ಅಧಿಕಾರಿಗಳು ರೈತ ಸಂಘಟನೆ ಹಾಗೂ ಸಿಪಿಐ(ಎಂ) ಮುಖಂಡರ ಮೇಲೆ ಪಿರ್ಯಾದು ಕೊಡಲು ನಿರಾಕರಿಸಿದರೂ ಬಲವಂತವಾಗಿ, ಬೆದರಿಸಿ ಪಿರ್ಯಾದು ಕೊಡಿಸಲು ಪ್ರಯತ್ನಿಸಿದೆ.

ಘಟನೆ ನಡೆಯಿತೆನ್ನಲಾದದ್ದು ಮಧ್ಯಾಹ್ನ 1.30ಕ್ಕೆ ಪರ್ಯಾದು ದಾಖಲಾದ್ದು ರಾತ್ರಿ 9 ಗಂಟೆಗೆ ಯಾರ ಹೆಸರೂ ಇಲ್ಲ. ಈ ನಡುವೆ ನಡೆದಿದ್ದೇನು?

"ಲೇ ಮಗನೇ ಪಿರ್ಯಾದು ಕೊಡದಿದ್ದರೆ....

ಅಂದು ಘಟನೆ ನಡೆದಿರುವುದು ಸುಮಾರು ಮದ್ಯಾಹ್ನ 1-30ರಲ್ಲಿ ಆದರೆ ಪೊಲೀಸ್ ಠಾಣೆಯಲ್ಲಿ ಪಿರ್ಯಾದು ದಾಖಲಾದದ್ದು ರಾತ್ರಿ 9-00 ಗಂಟೆಯಲ್ಲಿ, ಅಂದರೆ ಅದುವರೆಗೂ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕಾಧಿಕಾರಿಗಳನ್ನು ಮತ್ತು ಕಛೇರಿಯ ಸಿಬ್ಬಂದಿಯನ್ನು ಪ್ರವಾಸಿ ಮಂದಿರದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಕೂಡಿಹಾಕಿ, ಶ್ರೀರಾಮರೆಡ್ಡಿ ಮತ್ತು ತಾಲ್ಲೂಕು ಸಿ.ಪಿ.ಐ(ಎಂ) ನಾಯಕರ ಮೇಲೆ ಕಂಪ್ಲೈಟ್ ಕೊಡು ಇಲ್ಲವೆಂದರೆ, ನಿನ್ನ ಸಸ್ಪೆಂಡ್ ಮಾಡ್ತಿವಿ. ಮರ್ಯಾದೆಯಾಗಿ ಕಂಪ್ಲೇಂಟ್ ಕೊಡು ಎಂದು ಅವಾಚ್ಯಶಬ್ದಗಳಿಂದ ಬೈದಿದ್ದಾರೆ. ಹೊಡೆಯುವುದೊಂದೇ ಬಾಕಿ ಆದರೂ ಕಂಪ್ಲೇಂಟ್ ಕೊಡಲು ಅಧಿಕಾರಿ ನಿರಾಕರಿಸಿದ್ದಾರೆ. ಕಡೆಗೆ ಪೊಲೀಸರ ಕಡೆಯಿಂದ ಧಮಕಿ ಹಾಕಿಸಿ ಕಡೆಗೊಂದು ಪಿರ್ಯಾದು ಕೊಡಿಸಲು ಯಶಸ್ವಿಯಾಗಿದ್ದಾರೆ. ಪಿರ್ಯಾದಿನಲ್ಲಿ ಏನಂತಿದೆ? ಪಿರ್ಯಾದಿನಲ್ಲಿ ಸುಮಾರು ಮದ್ಯಾಹ್ನ 1-30ರ ಸಮಯದಲ್ಲಿ ಕಛೇರಿಯಲ್ಲಿ ನಾವಿಲ್ಲದ ಸಮಯದಲ್ಲಿ ಸುಮಾರು 100 ರಿಂದ 150 ಜನರ ಗುಂಪು ಕಛೇರಿಗೆ ನುಗ್ಗಿ ಚೇರು ಕುರ್ಚಿಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದಿದೆ. ಆದರೆ, ಕಂಪ್ಲೆಂಟ್‌ನಲ್ಲಿ ಯಾರದೇ ಹೆಸರಿಲ್ಲ, ಯಾವ ಪಕ್ಷಕ್ಕೆ ಸೇರಿದ್ದಾರೆ ಎನ್ನುವುದೂ ಇಲ್ಲ ಆದರೂ, ಸಿಪಿಐ(ಎಂ) ಕಾರ್ಯಕರ್ತರನ್ನೇ ಏಕೆ ಬಂಧಿಸಲಾಗಿದೆ.? ಅಂದರೆ ರೈತ ಚಳುವಳಿಯನ್ನು ಬಗ್ಗು ಬಡಿಯುವ ಕುತಂತ್ರ. ಎಫ್.ಐ.ಆರ್.ನಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಎಂಬುದಾಗಿ ನಮೂದಿಸಿದ್ದಾರೆ. ಕಂಪ್ಲೇಂಟ್‌ನಲ್ಲಿ ಪಿರ್ಯಾದಿದಾರ ಯಾವುದೇ ಹೆಸರನ್ನೂ ನಮೂದಿಸದೇ ಯಾವ ಪಕ್ಷದ ಹೆಸರನ್ನು ನಮೂದಿಸದೇ ಇರುವಾಗ ಎಫ್.ಐ.ಆರ್. ನಲ್ಲಿ ಮಾತ್ರ ಸಿಪಿಐ(ಎಂ) ಕಾರ್ಯಕರ್ತರು ಎಂದು ನಮೂದಿಸಿರುವುದಕ್ಕೆ ಕುತಂತ್ರ ಎನ್ನಬೇಕೋ ಏನನ್ನಬೇಕು?

ಜೈಲ್ ಬರೋ ಕಾರ್ಯಕ್ರಮ ಮುಗಿಸಿ ಊಟ ಮಾಡಿಕೊಂಡು ಸುಂದರಯ್ಯ ಭವನದಲ್ಲಿ ಕುಳಿತಿದ್ದ ಕಾರ್ಯದರ್ಶಿ ವೆಂಕಟಸ್ವಾಮಿ ರೆಡ್ಡಿಯವರನ್ನು ಬಂಧಿಸಿ ವ್ಯಾನಿನಲ್ಲಿ 2 ಗಂಟೆ ಕಾಲ ಕೂರಿಸಿಕೊಂಡು ಲಾಕಪ್‌ಗೆ ತಳ್ಳಿದರು. ಮುಖಂಡರನ್ನು ಅವಮಾನಗೊಳಿಸಿ ಇಡೀ ಚಳುವಳಿಯನ್ನು ಬಗ್ಗುಬಡಿಯುವ ಕುತರ್ಂತ್ರ ಇದಾಗಿತ್ತು.

ಅಂದು ರಾತ್ರಿ ಇನ್ನೊಂದು ತಂತ್ರ ಉಪಯೋಗಿಸಿದರು. ಅಂದು ಜೈಲ್ ಬರೋ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಾರ್ಯಾರು ಬಂದಿತರಾಗಿದ್ದರೋ ಅವರ ಹೆಸರು ಮತ್ತು ವಿಳಾಸ ಪೊಲೀಸರ ಹತ್ತಿರ ಇತ್ತು. ಆ ವಿಳಾಸಗಳನ್ನು ಹುಡುಕಿಕೊಂಡು ಹಲವಾರು ಊರುಗಳಿಗೆ ಹೋಗಿದ್ದೇ ಮನೆ ಮನೆಗೂ ಹೋಗಿ (ಸಿ.ಪಿ.ಐ(ಎಂ) ಕಾರ್ಯಕರ್ತರ ಮನೆಗಳಿಗೆ) ರಾತ್ರಿ ಎಬ್ಬಿಸಿ ಮಹಿಳೆ ಮಕ್ಕಳೆನ್ನದೇ ಬಾಗಿಲು ಮುರಿದು ಹುಡುಕಾಡಿ ಮನೆಯಲ್ಲಿ ಇರುವವರ ಮೇಲೆ ಬೆದರಿಕೆ ಹಾಕಿ ಬೆಳಗ್ಗೆ ನಿಮ್ಮ ಯಜಮಾನರನ್ನು ಸ್ಟೇಷನ್ನಿಗೆ ಕಳುಹಿಸಬೇಕೆಂದು ಇಲ್ಲವೆಂದರೆ ಮರ್ಯಾದೆ ಇರುವುದಿಲ್ಲ ಎಂದು ಹಿಯ್ಯಾಳಿಸಿ ಬಂದರು.

ರೊಚ್ಚಿಗೆದ್ದ ಜನತೆ

ಇದೆಲ್ಲವೂ ಜನರನ್ನು ರೊಚ್ಚಿಗೆಬ್ಬಿಸಿತು. ಜೊತೆಗೆ ನಿರಂತರ ತಮ್ಮ ಜೊತೆ ಇದ್ದು ತಮಗಾಗಿ ಹೋರಾಡುವ ನಾಯಕರನ್ನು ಲಾಕಪ್‌ಗೆ ತಳ್ಳಿರುವುದು ಇನ್ನಷ್ಟು ರೊಚ್ಚಿಗೆಬ್ಬಿಸಿ, ಯಾರ ನಿರ್ದೇಶನವೂ ಇಲ್ಲದೇ 8-2-2001 ರಂದು ಬೆಳಗ್ಗೆ 8-00 ಗಂಟೆ ಹೊತ್ತಿಗೆ ಸುಂದರಯ್ಯ ಭವನದ ಹತ್ತಿರ ಜನ ಬರಲಾರಂಬಿಸಿದರು. 11-00 ಗಂಟೆ ಹೊತ್ತಿಗೆ 3-4 ಸಾವಿರ ಜನ ಸ್ವಯಂ ನಿರ್ಧಾರದಿಂದ ಬಂದಿದ್ದರು. ಬಾಗೇಪಲ್ಲಿಯ. ಹೆಚ್.ಎನ್. ವೃತ್ತದಿಂದ ಪೋಲೀಸ್ ಟಾಣೆಯವರೆಗೆ ಮೆರವಣಿಗೆ ಮಾಡಿದರು. ಇದನ್ನು ನೋಡಿದ ಕಾಂಗ್ರೆಸ್ಸಿಗರು ಬೆಚ್ಚಿಬಿದ್ದರು. ಸಿಪಿಐ(ಎಂ) ಅನ್ನು ಮುಗಿಸಿದ್ದೇವೆ ಎಂದು ಬೀಗುತ್ತಿದ್ದ ಪುಡಾರಿ ನಾಯಕರಿಗೆ, ದಿಕ್ಕು ತೋಚದೆ ಆಯಿತು. ರಾತ್ರೋ ರಾತ್ರಿ ಇಂತಹ ಬೃಹತ್ ರ‍್ಯಾಲಿಯನ್ನು ಸಂಘಟಿಸಲು ಹೇಗೆಂದು ತಿಲಿಯಲು ಮೈ ಪರಚಿಕೊಂಡರು.

ಅಪಹಾಸ್ಯಕ್ಕೆ ಒಳಗಾದ ಕಾಂಗ್ರೆಸ್

ಕಾಂಗ್ರೆಸ್ಸಿನಲ್ಲಯೇ ಗುದ್ದಾಟ ಆರಂಭವಾಯಿತು. ಕಾಂಗ್ರೆಸ್ ಪಕ್ಷದಿಂದ ರ‍್ಯಾಲಿ ಮಾಡಬೇಕು ಎಂದು ಒಂದು ಗುಂಪು ರ‍್ಯಾಲಿ ಮಾಡಬಾರದು ಎಂದು ಒಂದು ಗುಂಪು. ಆಶ್ರಯ ಮನೆಗಳ ಹಂಚಿಕೆಯಲ್ಲಿ ಅಸಮಾದಾನಗೊಂಡ ಗುಂಪು ರ‍್ಯಾಲಿಗೆ ವಿರೋಧಿಸಿತು. ಶಾಮೀಲಾದ ಗುಂಪು ರ‍್ಯಾಲಿ ಮಾಡಬೇಕು ಎಂದಿತು. ಕಡೆಗೆ ಜಿಲ್ಲಾ ಸಚಿವರ ಆಜ್ಞೆಯಂತೆ ರ‍್ಯಾಲಿ ಮಾಡಲು ಒಪ್ಪಿಕೊಂಡು 12 ನೇ ತಾರೀಕು ಎಂದು ನಿಗದಿ ಮಾಡಿ 3 ದಿನಗಳ ಕಾರು ಪ್ರಚಾರ, ಕರಪತ್ರ ಹಂಚಿಕೆ ಇಡೀ ಬಾಗೇಪಲ್ಲಿ ಕ್ಷೇತ್ರದ ಜನತೆಗೆ ಕರೆಕೊಟ್ಟರು. ಸಿಪಿಐ(ಎಂ) ಕಾರ್ಯಕರ್ತರು ಈ ಘಟನೆಗೆ ಕಾರಣ ಎಂದು ಕ್ಷೇತ್ರಾದ್ಯಂತ ಪ್ರಚಾರ ಮಾಡಿದರು. 72 ವಾಹನಗಳನ್ನು ಜನರನ್ನು ಕರೆತರಲು ಉಪಯೋಗಿಸಿದರು. ಏನೆಲ್ಲ ಸರ್ಕಸ್ ಮಾಡಿದರೂ ಅಂದು ಸೋಮವಾರ ಸಂತೆಯ ದಿನವಾದ್ದರಿಂದ ರ‍್ಯಾಲಿಗೆ ಸೇರಿದ್ದ ಜನ ಕೇವಲ 1000 ದಿಂದ 1200 ಆಗಿತ್ತು. ಇಡೀ ಕ್ಷೇತ್ರದಾದ್ಯಂತ ಪ್ರಚಾರ ಮಾಡಿದರೂ ಕೇವಲ ಇಷ್ಟು ಸೇರಿದ್ದು ಮುಖಭಂಗ ಅನುಭವಿಸಬೇಕಾಯಿತು. 10 ಸಾವಿರ ಸೇರಿಸುತ್ತೇವೆಂದು ಬೀಗುತ್ತಿದ್ದ ಕಾಂಗ್ರೆಸ್ ಅಪಹಾಸ್ಯಕ್ಕೊಳಗಾಯಿತು. ಚಿನ್ಹೆ ನೋಡಿ ಮತ ಹಾಕುವವರು ಕಾಂಗ್ರೆಸಿಗೆ ಇರಬಹುತು ಅಥವಾ ಸಾರಾಯಿ ಹಣದ ಆಮಿಷ ಒಡ್ಡಿ ಮತ ಪಡೆಯಬಹುದು. ಆದರೆ ಈ ಘಟನೆಯನ್ನು ರಾಜಕೀಯ ದುರ್ಲಾಭ ಪಡೆಯಲು ಯತ್ನಿಸಿ ಜನ ಸ್ಪಂದಿಸದೇ ಅಪಹಾಸ್ಯಕ್ಕೊಳಗಾದರು.

ಬಾಯಿಗೆ ಬಂದದ್ದೇ ಭಾಷಣ ಅರ್ಥಹೀನ ಆಲಾಪ

ತಾಲ್ಲೂಕು ಪಂಚಾಯ್ತಿ ಕಛೇರಿಯನ್ನು ಬಹಿರಂಗ ಸಭೆಯ ವೇದಿಕೆಯನ್ನಾಗಿ ಮಾರ್ಪಡಿಸಿಕೊಂಡು ಕಾಂಗ್ರೆಸ್ ಅದನ್ನು ಗುತ್ತಿಗೆ ಪಡೆದಂತೆ ಕಛೇರಿಗೆ ಮೈಕ್ ಕಟ್ಟಿಕೊಂಡು ಬಾಷಣಗಳನ್ನು ಬೀಗಿದರು. ಸಿಪಿಐ(ಎಂ) ನಿಂದ ಉದ್ಘಾಟನೆಗೊಂಡ ಬ್ರಷ್ಟರಿಗೆ ವೇದಿಕೆಯು ಸಿಂಹಾಸನ ಕೊಟ್ಟು ಅಪಹಾಸ್ಯಕ್ಕೊಳಗಾಯಿತು. ಕೆಪಿಸಿಸಿ ಸದಸ್ಯ ಡಿ.ಜೆ. ನಾಗರಾಜರೆಡ್ಡಿ ಎಂಬ 24 ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿರುವ ನಾಯಕರು ಶ್ರೀರಾಮರೆಡ್ಡಿಯವರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿ 60 ಲಕ್ಷ ರೂ.ಗಳ ಅವ್ಯವಹಾರವೊಂದು ತಾಲ್ಲೂಕು ಪಂಚಾಯ್ತಿ ಕಛೇರಿಯಲ್ಲಿ ನಡೆದಿದ್ದು (ಶ್ರೀರಾಮರೆಡ್ಡಿ ಶಾಸಕರಾಗಿದ್ದ ಅವದಿಯಲ್ಲಿ) ಅದನ್ನು ಮುಚ್ಚಿಹಾಕುವ ಪ್ರಯತ್ನ ಇದೆಂದು ಆಪಾದಿಸಿದರು. ಗೊತ್ತು ಗುರಿಯಿಲ್ಲದ, ಆಧಾರವಿಲ್ಲದ ಆಪಾದನೆಗಳು ಅಪಹಾಸ್ಯಕ್ಕೆ ಒಳಗಾದವು. ಹಿಂದೆಯೂ ತಾ.ಪಂ. ಕಾಂಗ್ರೆಸ್ಸ್ ಕೈಯಲ್ಲೇ ಇದ್ದದ್ದು ಮರಳು ಕಳ್ಳತನ ಮಾಡುವವರು ಕಛೇರಿಗಳ ಹತ್ತಿರ ಕಾದುಕೊಂಡು ಬರುವ ಪಲಾನುಭವಿಗಳಿಂದ ಲಂಚ ಪಡೆದು ಜಿವನ ಸಾಗಿಸುವವರು ಎಲ್ಲರೂ ಭಾಷಣ ಮಾಡಿದ್ದೆ.

ಹೀಗೆ ಬಾಯಿಬಂದದ್ದೇ ಭಾಷಣ ತಳಬುಡವಿಲ್ಲದ ಮಾತುಗಳೇ ಹೀಗೆ ರೈತರ ವ್ಯಪಕ ಪ್ರತಿಭಟನೆಯನ್ನು ಸಹಿಸದ, ಭ್ರಷ್ಟ ಕಾಂಗ್ರೆಸ್, ರೈತ ಸಂಘವನ್ನು ಸಿಪಿಐ(ಎಂ)ನ್ನು ಮುಗಿಸುತ್ತೇವೆಂದು ಕೂಗಾಡಿ, ಸಭೆಗೂ ಹೆಚ್ಚು ಜನ ಸೇರದೇ ಮುಖಭಂಗಕ್ಕೊಳಗಾಬೇಕಾಯಿತು. ಇದರಿಂದಲಾದರೂ ಕಾಂಗ್ರೆಸ್ ಪಾಠ ಕಲಿಯಬಲ್ಲುದೇ? ಕು.... ಪ್ರಚಾರ ನಿಲ್ಲಿಸುವುದೇ? ರೈತರನ್ನು ಉಳಿಸಲು ವಿನಾಶಕಾರಿ ಆಮದು-ರಫ್ತು ನೀತಿ ವಿರುದ್ಧ ಹೋರಾಡಬಲ್ಲದೇ? ರೈತ್ರ ಕೂಲಿಕಾರರಿಗೆ ಬದುಕಿನ ಚಿಂತೆ ಕಾಂಗ್ರೆಸ್ ನವರಿಗೆ.

ವರದಿ: **ಭಾಸ್ಕರ ರೆಡ್ಡಿ**

ಘಟನೆಗೆ ಸಂಬಂಧಿಸಿದ ಆರೋಪಿಗಳನ್ನು ಪೊಲೀಸರು ಬಂದಿಸಿರುವುದು ಒಂದು ವಿಚಿತ್ರ ೭.೦೦ ಗಂಟೆಗೆಲ್ಲಾ ಜೈಲ್ ಬರೋ ಕಾರ್ಯಕ್ರಮ ಮುಗಿಸಿಕೊಂಡು ಮನೆಗಳಿಗೆ ಹಿಂದಿರುಗಲು ಬಸ್ಸುಗಳಲ್ಲಿ ಕುಳಿತಿದ್ದ ರೈತ ಸಂಘದ ಮುಖಂಡರನ್ನು ಬಸ್ ಸ್ಟ್ಯಾಂಡಿನಲ್ಲಿ ಕುತ್ತಿಗೆ ಪಟ್ಟಿ ಹಿಡಿದುಕೊಂಡು ಕಳ್ಳಕಾಕರರನ್ನು ಎತ್ತಿಹಾಕಿದ ಹಾಗೆ ಜೀಪಿನೊಳಗೆ ಹಾಕಿಕೊಂಡರು. ಜೊತೆಗೆ ಆರೋಪಿಗಳನ್ನು ಗುರುತು ಹಿಡಿಯಲು ಇನ್ನೊಂದು ಮಾರ್ಗವೆಂದರೆ, ಕೆಂಪು ಅಂಗಿ ಯಾರು ಹಾಕಿಕೊಂಡಿದ್ದಾರೆ ಅವರನ್ನೆಲ್ಲಾ ಜೀಪಿನಲ್ಲಿ ತಂದಾಕುವುದು. ರಾಶ್ಚೆರುವು ಗ್ರಾಮದ ಯುವಕನೊಬ್ಬ ಜೀನವಕ್ಕೊಸ್ಕರ ಬೆಂಗಳೂರು ಸೇರಿದ್ದ ಆತ ಅಂದು ಬೆಂಗಳೂರಿನಿಂದ ಊರಿಗೆ ಹೋಗಲು ಬಂದು ಬಸ್ಸಿನಲ್ಲಿ ಕುಳಿತಿದ್ದ. ಆತನ ತಪ್ಪೇನಂದರೆ, ಆತ ಕೆಂಪು ಶರ್ಟ ತೊಟ್ಟಿದ್ದ ಪೊಲೀಸರು ನೋಡಿದ್ದೆ ನನ್ನ ಮಗನೇ ಬಾರೋ ಎಂದು ಕುತ್ತಿಗೆ ಪಟ್ಟಿ ಹಿಡಿದುಕೊಂಡು ಜರಜರನೆ ಎಳೆದುಕೊಂಡು ಕೋಣನ ಹೊಡೆಯುವ ಹಾಗೆ ಬಾರಿಸುತ್ತ ಜೀಪಿನೊಳಗೆ ಎತ್ತಿಹಾಕಿದರು. ನನಗೆ ಏನೂ ಗೊತ್ತಿಲ್ಲ ಎಂದು ಅಂಗಲಾಚಿದರೂ ಬಿಡಲಿಲ್ಲ. ಆತನ ನೆಂಟ ಆತ ನಮ್ಮವ ಸ್ವಾಮಿ ಆತನಿಗೆ ಏನೂ ಗೆತ್ತಿಲ್ಲ ಎಂದು ಅಂಗಲಾಚಿದ್ದಕ್ಕೆ ಆತನನ್ನು ಕೂಡಾ ಜೀಪಿನೊಳಗೆ ತೂರಿಸಿದರು.

ಮಗಳಿಗೆ ಮದುವೆ ಹುಡುಗನನ್ನ ನೋಡಲು ಬಂದಿದ್ದ ಕೋಲಂಪಲ್ಲಿ ನಾರಾಯಣಪ್ಪ, ಪಾಪ ಈ ಬಗ್ಗೆ ಏನೂ ಗೊತ್ತಿಲ್ಲದ ಅಮಾಯಕ ಕೆಂಪು ಅಂಗಿ ತೊಟ್ಟಿದ್ದ ತಪ್ಪಗೆ ಜೀಪು ಹತ್ತಿಸಿದರು.

ಕಥೆ — ಮುದುಕಿಯ ಗುಡಿಸಲು

1950ರ ದಶಕದಲ್ಲಿ ಮಂಗಳೂರಿನಿಂದ ಶ್ರೀ ಎಂ. ಆರ್. ಭಟ್ ಅವರು ಒಂದಾಣೆ ಮಾಲೆ' ಎಂಬ ಕಿರುಪುಸ್ತಿಕೆಗಳನ್ನು ಪ್ರಕಟಿಸುತ್ತಿದ್ದರು. "ಬಾಳುವೆಯನ್ನು ಪುನೀತಗೊಳಿಸುವ, ಸದ್ವಿಚಾರಗಳನ್ನು ಪ್ರಚೋದಿಸಲು ಸಹಾಯಕವಾಗುವ, ಉದ್ಬೋಧಕ ಕಥಾನಕಗಳು" ಎಂಬ ಪ್ರಣಾಳಿಕೆಯಲ್ಲಿ ಬಂದ 'ಒಂದಾಣೆ'ಯ ಈ ನೂರಕ್ಕೂ ಹೆಚ್ಚು ಪುಸ್ತಿಕೆಗಳು ಕರಾವಳಿಯಲ್ಲಿ ಮನೆಮಾತಾಗಿದ್ದವು. ವಾಚನಾಭಿರುಚಿಯನ್ನು ಉದ್ದೀಪಿಸುವ ಕೆಲಸವನ್ನು ನಿಶ್ವಾರ್ಥದಿಂದ ಅತ್ಯಂತ ಸರಳ ರೀತಿಯಲ್ಲಿ ಕೈಗೊಂಡ ಎಂ.ಆರ್. ಭಟ್ ಅವರ ಚಾರಿತ್ರಿಕ ಮಹತ್ವದ ಈ ಮಾಲಿಕೆಯ ಪುಸ್ತಕದಿಂದ ಆಯ್ದ ಕಿರುಗತೆ.

ದೇಶದ ಒಡೆಯ ಮಹಾರಾಜ! ಅವನು ಬೆರಳೆತ್ತಿದರೆ ಲಕ್ಷ ಜನ ಏಳುವರು ; ಬೆರಳೊತ್ತಿದರೆ ಲಕ್ಷ ಜನ ಕೆಳಗೆ ಬೀಳುವರು! ಮಹಾರಾಜನಿಗೆ ಒಮ್ಮೆ ಒಂದು ಹೊಸ ಅರಮನೆ ಕಟ್ಟಿಸುವ ಮನಸ್ಸಾಯಿತು. ಒಳ್ಳೆಯ ಸ್ಥಳವನ್ನಾರಿಸಿಕೊಂಡು, ಅರಮನೆಯ ಕೆಲಸ ಆರಂಭಿಸಲ್ಪಟ್ಟಿತು. ಅರಮನೆ ಕಟ್ಟಿ ಮುಗಿಯಿತು. ಈ ನೂತನ ಮಹಲಿನ ಸೊಬಗನ್ನು ಸಾವಿರಾರು ಜನರು ದೂರದಿಂದ ನೋಡಿ ಹೋಗುವರು.

ಅರಮನೆಯ ಮುಂದೆ, ಅನತಿ ದೂರದಲ್ಲಿ, ಓರ್ವಳು ಬಡ ಮುದುಕಿಯ ಗುಡಿಸಲು ಇತ್ತು. ಆ ಅರಮನೆಗಾಗಿ ರಾಜನು ಸ್ಥಳವನ್ನಾರಿಸಿಕೊಳ್ಳುವ ಎಷ್ಟೊ ವರ್ಷಗಳ ಹಿಂದಿನಿಂದ ಆ ಮುದುಕಿಯು ಆ ಹರಕು ಗುಡಿಸಿಲಿನಲ್ಲಿ ವಾಸವಾಗಿದ್ದಳು. ಒಮ್ಮೊಮ್ಮೆ ಬಲವಾದ ಗಾಳಿ ಬೀಸಿತೆಂದರೆ, ಆ ಗುಡಿಸಿಲಿನಿಂದ ಹೊರಟ ಹೊಗೆಯು ಅರಮನೆಯ ಕಡೆಗೂ ಬೀಸುತ್ತಿತ್ತು. ಅರಮನೆಯವರು ಮೂಗು ಮುಚ್ಚುತ್ತಿದ್ದರು.

ರಾಜನು ನೋಡಿದನು. ರಮಣೀಯವಾಗಿ ಕಂಗೊಳಿಸುವ ಪ್ರದೇಶದಲ್ಲಿ ಶೃಂಗಾರಿಸಲ್ಪಟ್ಟ ಅರಮನೆಯ ಮುಂದೆ, ಆ ಹೊಲಸು ಗುಡಿಸಲು!

ಆ ಗುಡಿಸಲನ್ನು ಕಿತ್ತು ಒಯ್ಯಬೇಕೆಂದು ರಾಜಾಜ್ಞೆ ತಿಳಿಸಿದರು. ಆದರೆ, ಮುದುಕಿಯು ಬೆದರಲಿಲ್ಲ. 'ಇಲ್ಲಿಂದ ಏಳಲಾರೆ' ಎಂದಳು. ರಾಜನು ಇದನ್ನು ಕೇಳುತ್ತಲೇ ಕೋಪದಿಂದ ಕಿಡಿಕಿಡಿಯಾದನು. ಏನಿದು, ಈ ಕೃಶ-ವೃದ್ಧ-ಜಂತುವಿನ ದರ್ಪ! "ಅವಳನ್ನು ಎಳೆದು ಕರೆತನ್ನಿರಿ!" ರಾಜನು ಗುಡುಗುಡಿಸಿದನು.

ದೂತರು, ಮುದುಕಿಯನ್ನು ರಾಜನ ಮುಂದೆ ಒಯ್ದು ಒಪ್ಪಿಸಿದರು. ರಾಜನು ಕೇಳಿದನು. "ಮುದುಕಿಯೇ, ನೀನು ನಿನ್ನ ಹೊಲಸು ಗುಡಿಸಲನ್ನು ಕಿತ್ತು ತೆಗೆಯಲಾರೆಯಾ! ನಾನೇ ತೆಗೆಸಬೇಕೇ? ನಿತ್ಯವೂ ನಾನು ಅದನ್ನು ನೋಡಿ ನೋಡಿ ಮೂಗುಮುರಿದುಕೊಳ್ಳುತ್ತಿರುವೆನಲ್ಲ!"

ಮುದುಕಿಯು ಶಾಂತಳಾಗಿ ಉತ್ತರವಿತ್ತಳು :



"ಪ್ರಭೂ! ಕೋಪಿಸಿಕೊಳ್ಳಬೇಡ. ನೀನು ಸರ್ವಶಕ್ತನು. ಆದರೆ, ಒಂದು ವಿಷಯವನ್ನು ಹೇಳುತ್ತೇನೆ, ದರಿದ್ರೆಯಾದ ನಾನು, ಕೊಳಕಿನಲ್ಲೇ ವಾಸಿಸುತ್ತಿರುವ ನಾನು, ನಿತ್ಯವೂ ನಿನ್ನ ಸುಂದರ - ವೈಭವವೇನಲ್ಲ! ನನ್ನ ಬಡ ಗುಡಿಸಲನ್ನು ನೋಡಿ ನೀನೂ ಸೈರಿಸಲೊಲ್ಲೆಯೇಕೆ?

ಮಹಾರಾಜನು ಆ ಮಾತಿನಿಂದ ಸ್ತಂಭೀಭೂತನಾದನು. ಅವನು ಇಂದು ಒಂದು ಹೊಸ ತತ್ವವನ್ನು ಕಂಡುಕೊಂಡನು! ಲಜ್ಜಿತನಾಗಿ ತಲೆಬಾಗಿ, ಮುದುಕಿಗೆ ಯಥೇಚ್ಛ ಧನವನ್ನು ಕೊಟ್ಟು ಸನ್ಮಾನಿಸಿ, ಮರ್ಯಾದಾಪೂರ್ವಕವಾಗಿ ಬೀಳ್ಕೊಟ್ಟನು.

ಮಸೀದಿ ಧ್ವಂಸ ಮೊಕದ್ದಮೆ ಕುಟಿಲೋಪಾಯ

ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಅಡ್ವಾಣಿ, ಜೋಷಿ, ಉಮಾಭಾರತಿ ಮತ್ತು ಇತರರು ಸೇರಿದಂತೆ ಒಟ್ಟು 8 ಮಂದಿಯ ಮೇಲೆ ಆಪಾದನಾ ಪತ್ರದ ದಾಖಲು ಮಾಡುವ ವಿಶೇಷ ಸಿಬಿಐ ನ್ಯಾಯಾಲಯದ ನಿರ್ಧಾರವನ್ನು

ಆದರೆ ಈ 'ನ್ಯೂನತೆ'ಯನ್ನು 'ಸರಿಪಡಿಸ' ಬಹುದು ಎಂದೂ ಹೈಕೋರ್ಟ್ ಸ್ಪಷ್ಟಪಡಿಸಿದೆ ಎಂಬುದನ್ನು ಗಮನಿಸಬೇಕು. ಅಂದರೆ ಈಗ ಸರಕಾರ ಮಾಡಬೇಕಾದ್ದಿಷ್ಟೆ. ಎರಡನೇ ಎಫ್.ಐ.ಆರ್. ಗೆ ಸಂಬಂಧಪಟ್ಟಂತೆ ಮುಖ್ಯ ನ್ಯಾಯಾಧೀಶರ ಅನುಮತಿ ಪಡೆದು ಅದರ ಆಧಾರದಲ್ಲಿ ಹೊಸ ಅಧಿಸೂಚನೆ ಹೊರಡಿಸುವುದು.

ಅಲಹಾಬಾದ್ ಹೈಕೋರ್ಟ್ ಲಕ್ನೌಪೀಠ ರದ್ದು ಮಾಡಿದ ಸುದ್ದಿ ಕೇಳಿ ಬಿಜೆಪಿಗೆ ಭಾವೋದ್ರೇಕ ಉಂಟಾಗಿದೆ. ಬಿಜೆಪಿ ಮುಖಂಡರ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿಯ ಪ್ರತಿಕ್ರಿಯೆ ನೋಡಿದರೆ ಈ ಕಾವಿ ಪಡೆಗಳ ಕೈಯಲ್ಲಿ ಅಧಿಕಾರದ ಸೂತ್ರ ಇರುವವರೆಗೆ ದೇಶದ ಕಾನೂನು ತನ್ನ ಕೆಲಸ

ಲಕ್ನೌ ಪೀಠ ಎತ್ತಿರುವುದು ಒಂದೇ ವಿಷಯ - ಅದೂ ತಾಂತ್ರಿಕ ವಿಷಯ. ಅದೇನೆಂದರೆ ಸರ್ಕಾರ ಒಂದು ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸುವ ಮೊದಲು ಪ್ರತಿಬಾರಿಯೂ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಅನುಮತಿ ಪಡೆದಿರಬೇಕು ಎಂದು.

ಮಾಡಲು ಬಿಡುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕಾವಿಪಡೆಗಳು ದೇಶದ ಗಣತಂತ್ರ ಸಂವಿಧಾನವನ್ನು ಯಾವುದೇ ಮುಲಾಜಿಲ್ಲದೆ ಉಲ್ಲಂಘಿಸುವ ವಿಷಯದಲ್ಲಂತೂ ಇದು ಇನ್ನಷ್ಟು ಸ್ಪಷ್ಟ.

ಅಲಹಾಬಾದ್ ಹೈಕೋರ್ಟ್‌ನ ಲಕ್ನೌಪೀಠದ ಆದೇಶ ಈ ಮೂರು ಕೇಂದ್ರಮಂತ್ರಿಗಳು ಮತ್ತು ಇತರ ಐವರು ವಿ.ಹೆಚ್.ಪಿ., ಭಜರಂಗದಳ ಮುಖಂಡರು ಬಾಬ್ರಿಮಸೀದಿ ಧ್ವಂಸದ ಕ್ರಿಮಿನಲ್ ಪಿತೂರಿಯಲ್ಲಿ ಶಾಮೀಲಾಗಿಲ್ಲ ಎಂಬುದನ್ನು ಸಾರಿದಂತಾಗಿದೆ ಎಂದು ಬಿಜೆಪಿ ಮುಖಂಡರು ಅರ್ಥೈಸುತ್ತಿದ್ದಾರೆ. ಆದರೆ ನಿಜಸಂಗತಿ ತದ್ವಿರುದ್ಧವಾಗಿದೆ. ಲಕ್ನೌ ಪೀಠ ಎತ್ತಿರುವುದು ಒಂದೇ ವಿಷಯ - ಅದೂ ತಾಂತ್ರಿಕ ವಿಷಯ. ಅದೇನೆಂದರೆ ಸರ್ಕಾರ ಒಂದು ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸುವ ಮೊದಲು ಪ್ರತಿಬಾರಿಯೂ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಅನುಮತಿ ಪಡೆದಿರಬೇಕು ಎಂದು.


ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಎರಡು ಎಫ್.ಐ.ಆರ್. ಗಳನ್ನು ಸಲ್ಲಿಸಲಾಯಿತು. ಮೊಕದ್ದಮೆಯಲ್ಲಿ ಹೆಸರು ನಿರ್ದಿಷ್ಟಪಡಿಸಿದ ಕರಸೇವಕರ ಮೇಲೆ, ಎರಡನೆಯದ್ದು ಹೆಸರಿಸಿದ ಎಂಟು ಮುಖಂಡರ ಮೇಲೆ. ಮೊದಲ ಎಫ್.ಐ.ಆರ್.ಗೆ ಅನುಮತಿ ಪಡೆಯಲಾಗಿತ್ತು. ಎರಡನೆಯದಕ್ಕೆ ಪಡೆದಿರಲಿಲ್ಲ. ಸಿಬಿಐ ಆಪಾದನಾ ಪತ್ರ ಸಲ್ಲಿಸಿದ್ದು ಎರಡೂ ಎಫ್.ಐ.ಆರ್. ಗಳನ್ನು ಒಟ್ಟಾಗಿ ತನಿಖೆ ನಡೆಸಿದ ಆಧಾರದಲ್ಲಿಯಾದ್ದರಿಂದ ಬಹುಶಃ ಮತ್ತೆ ಇದಕ್ಕೆ ಅನುಮತಿ ಬೇಕಿಲ್ಲ ಎಂದು ಅನುಮತಿ ಪಡೆದಿರಲಿಕ್ಕಿಲ್ಲ. ಆದರೆ ಈ ರೀತಿಯ ಅನುಮತಿ ತಾಂತ್ರಿಕವಾಗಿ ಅಗತ್ಯ ಎಂದು ಲಕ್ನೌ ಪೀಠ ತೀರ್ಪಿತ್ತಿದೆ. ಇದನ್ನು ಮಾಡಿಲ್ಲವಾದ್ದರಿಂದ ಆಪಾದಿತರ ವಿಚಾರಣೆ ತಾಂತ್ರಿಕವಾಗಿ ಸಾಧ್ಯವಿಲ್ಲ ಎಂದು ಹೇಳಿದಂತಾಗಿದೆ.

ಆದರೆ ಈ 'ನ್ಯೂನತೆ'ಯನ್ನು 'ಸರಿಪಡಿಸ' ಬಹುದು ಎಂದೂ ಹೈಕೋರ್ಟ್ ಸ್ಪಷ್ಟಪಡಿಸಿದೆ ಎಂಬುದನ್ನು ಗಮನಿಸಬೇಕು. ಅಂದರೆ ಈಗ ಸರಕಾರ ಮಾಡಬೇಕಾದ್ದಿಷ್ಟೆ. ಎರಡನೇ ಎಫ್.ಐ.ಆರ್. ಗೆ ಸಂಬಂಧಪಟ್ಟಂತೆ ಮುಖ್ಯ ನ್ಯಾಯಾಧೀಶರ ಅನುಮತಿ ಪಡೆದು ಅದರ ಆಧಾರದಲ್ಲಿ ಹೊಸ ಅಧಿಸೂಚನೆ ಹೊರಡಿಸುವುದು. ಒಬ್ಬ ಕಾನೂನು ಪರಿಣತರು ಗಮನಿಸಿರುವಂತೆ ಹೈಕೋರ್ಟಿನ ಈ ನಿರ್ಣಯದಲ್ಲಿ ಇಂತಹ ಒಂದು ನೈತಿಕ ಬಲವಿದೆ.

ಕಪಟ ತಂತ್ರ ಆರಂಭವಾಗುವುದು ಇಲ್ಲಿಯೇ

ದೇಶದ ಕಾನೂನಿನ ಬಗ್ಗೆ ತುಸುವಾದರೂ ಗೌರವವಿದ್ದಿದ್ದರೆ ಉತ್ತರ ಪ್ರದೇಶ ಸರಕಾರ ಹೈಕೋರ್ಟ್ ಸೂಚಿಸಿದ ದಾರಿ ಹಿಡಿಯಬೇಕಾಗಿತ್ತು. ಆದರೆ ಬಾಬ್ರಿ ಮಸೀದಿ ಧ್ವಂಸವನ್ನು ಸಮರ್ಥಿಸುವ, ನಮ್ಮ ಗಣತಂತ್ರ ಸಂವಿಧಾನದ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಆಶಯಗಳನ್ನು ಹೀಗಳೆಯುವ ಆರ್.ಎಸ್.ಎಸ್.-ಬಿಜೆಪಿಯ ಮನೋಭಾವಕ್ಕೆ ಅನುಗುಣವಾಗಿ ಉತ್ತರ ಪ್ರದೇಶ ಸರಕಾರ ಬಾಬ್ರಿ ಮಸೀದಿ ಧ್ವಂಸದ ಕ್ರಿಮಿನಲ್ ಪಿತೂರಿಯಲ್ಲಿ ಚಾರ್ಜ್‌ಶೀಟ್ ಆದ ಈ ವ್ಯಕ್ತಿಗಳು ತಪ್ಪಿಸಿಕೊಳ್ಳುವ ಕಳ್ಳದಾರಿ ಮಾಡಿಕೊಡಲು ಪ್ರಯತ್ನಿಸುತ್ತಿದೆ.

ಲಕ್ನೌಪೀಠದ ಈ ಎಂಟು ಮಂದಿಯ ಮೇಲಿನ ಚಾರ್ಜ್ ಶೀಟ್‌ನಲ್ಲಿ ಏನೂ ತಪ್ಪು ತೋರಿಸಿಲ್ಲ ಅಥವಾ ಈ ಎಂಟು ಮಂದಿ ಶಾಮೀಲಾಗಿದ್ದಾರೋ ಇಲ್ಲವೋ ಎಂಬ ಬಗ್ಗೆ ಯಾವುದೇ ತೀರ್ಪು ನೀಡಿಲ್ಲ ಎಂಬುದನ್ನು ಗಮನಿಸಬೇಕು.



ಆದ್ದರಿಂದ ತಾನು ಹೈಕೋರ್ಟ್ ನಿರ್ಣಯವನ್ನು ಶಿರಸಾವಹಿಸುತ್ತೇನೆ ಎಂದು ಉತ್ತರ ಪ್ರದೇಶ ಸರಕಾರದ ಆಡಂಬರದ ಘೋಷಣೆ ಮೂರ್ಖತನದ ಪರಮಾವಧಿಯಷ್ಟೇ! ಅಂದರೆ ಅದು ಒಂದು ತಾಂತ್ರಿಕ ದೋಷವನ್ನು ಸರಿಪಡಿಸಲು ಏನೂ ಮಾಡುವುದಿಲ್ಲ. ಅದನ್ನೇ ಬಳಸಿ ಕ್ರಿಮಿನಲ್‌ಗಳು ತಪ್ಪಿಸಿಕೊಳ್ಳಲು, ಅವಕಾಶ ನೀಡಿ ಅವರನ್ನು ರಕ್ಷಿಸುತ್ತದೆ ಎಂದರ್ಥ. ಮೊದಲ ಎಫ್.ಐ.ಆರ್. ನ ಮೊಕದ್ದಮೆ ಮುಂದುವರೆಯುತ್ತದೆ ಎಂದು ನ್ಯಾಯಾಲಯ ಹೇಳಿದೆ. ಅಂದರೆ ಬಾಬ್ರಿ ಮಸೀದಿ

ಆದ್ದರಿಂದ ತಾನು ಹೈಕೋರ್ಟ್ ನಿರ್ಣಯವನ್ನು ಶಿರಸಾವಹಿಸುತ್ತೇನೆ ಎಂದು ಉತ್ತರ ಪ್ರದೇಶ ಸರಕಾರದ ಆಡಂಬರದ ಘೋಷಣೆ ಮೂರ್ಖತನದ ಪರಮಾವಧಿಯಷ್ಟೇ!

ಧ್ವಂಸ ಒಂದು ಅಪರಾಧ ಎಂದು ಹೈಕೋರ್ಟ್ ಕೂಡಾ ಪರಿಗಣಿಸುತ್ತದೆ ಎಂದಂತಾಯಿತು. ಉತ್ತರ ಪ್ರದೇಶ ಸರಕಾರ ನ್ಯಾಯಾಲಯ ಸೂಚಿಸಿದ ದಾರಿ ಹಿಡಿಯದಿದ್ದರೆ ಅದರರ್ಥ ಬಾಬ್ರಿ ಮಸೀದಿ ಧ್ವಂಸದ ಕೃತ್ಯ 'ಅಪರಾಧಿಗಳಿಲ್ಲದ ಅಪರಾಧ' ಎಂದಂತಾಗುವುದಿಲ್ಲವೇ?

ಅಲ್ಲದೆ ಸಿಬಿಐ ಈ ಎಂಟು ಮಂದಿಯ ಮೇಲೆ ಹೊಸದಾಗಿ ಚಾರ್ಜ್‌ಶೀಟ್ ಹಾಕಬೇಕು ಎನ್ನುವುದೂ ಹೆಚ್ಚೆಂದರೆ ಒಂದು ವಿಳಂಬ ತಂತ್ರವಷ್ಟೆ. ಕಾನೂನು ಮತ್ತು ವಿಧಿ-ವಿಧಾನಗಳ ಬಗ್ಗೆ ವಾದ-ವಿವಾದ ಇದನ್ನು ಇನ್ನಷ್ಟು ವಿಳಂಬಗೊಳಿಸುತ್ತದೆ. ಮತ್ತು ಇದರ ಅಗತ್ಯವೂ ಇಲ್ಲ. ಏಕೆಂದರೆ ಈ ಎರಡೂ ಮೊಕದ್ದಮೆಗಳಲ್ಲಿ ಮೊದಲ ಎಫ್‌ಐಆರ್‌ನ ಆಧಾರದ ಚಾರ್ಜ್‌ಶೀಟ್ ಈಗಲೂ ಅನ್ವಯವಾಗುತ್ತದೆ.

ನ್ಯಾಯವನ್ನು ನಿರಾಕರಿಸುವ ಇಂತಹ ಕಳ್ಳತಂತ್ರಗಳನ್ನು ಭಾರತದ ಜನತೆ ಸಹಿಸುವುದಿಲ್ಲ. ಬಾಬ್ರಿ ಮಸೀದಿ ಧ್ವಂಸದ ಕ್ರಿಮಿನಲ್ ಕೃತ್ಯ ಎಸಗಿರುವವರನ್ನು ಶಿಕ್ಷಿಸಲೇಬೇಕು. ಉತ್ತರ ಪ್ರದೇಶ ಸರ್ಕಾರ ಮುಖ್ಯ ನ್ಯಾಯಾಧೀಶರ ಅನುಮತಿ ಪಡೆದು ಕೂಡಲೇ ಹೊಸ ಅಧಿಸೂಚನೆ ಹೊರಡಿಸಬೇಕು. ಆಗಲೇ ಈ ಅಪರಾಧ ಎಸಗಿ ಎಂಟು ವರ್ಷಗಳಾಗಿವೆ. ನ್ಯಾಯ ದೊರಕಿಸುವಲ್ಲಿ ಇನ್ನೂ ವಿಳಂಬವೆಂದರೆ ದೇಶದ ಕಾನೂನನ್ನು ಕಾವಿ ಪಡೆಗಳು ಉದ್ದೇಶಪೂರ್ವಕವಾಗಿ ಬುಡಮೇಲು ಮಾಡುತ್ತಿವೆ ಎಂದೇ ಅರ್ಥ.

ಈ ಹಿನ್ನೆಲೆಯಲ್ಲಿ ಸಂವಿಧಾನದ ಪರಾಮರ್ಶೆ ಸಮಿತಿಯ ಕಾರ್ಯಾವಧಿಯನ್ನು ವಿಸ್ತರಿಸಿದ್ದನ್ನು ಗಮನಿಸಬೇಕು. ಸಮಸ್ತ ವಿರೋಧ ಪಕ್ಷಗಳ ಆಕ್ಷೇಪಗಳನ್ನು ಬದಿಗೊತ್ತಿ ಈ ಸಮಿತಿಯನ್ನು ಸಂವಿಧಾನ ಬಾಹಿರವಾಗಿ ನೇಮಿಸಲಾಗಿತ್ತು.

ಅಂದರೆ ಭಾರತದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ಅತ್ಯಂತ ಉನ್ಮತ್ತ ಅಸಹಿಷ್ಣು ಮತೀಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ತಮ್ಮ ದುಷ್ಟ ಅಜೆಂಡಾದ ಈಡೇರಿಕೆಗೆ ಆರ್.ಎಸ್.ಎಸ್. ಮತ್ತು ಅದರ ಬಾಲಂಗೋಚಿಗಳು ದೇಶದ ಕಾನೂನನ್ನು ಕೂಡಾ ಬುಡಮೇಲು ಮಾಡಲು ಹೇಸುವುದಿಲ್ಲ ಎಂಬುದು ಸ್ಪಷ್ಟ.

ಈ ಪಿತೂರಿ ಯಶಸ್ವಿಯಾಗಲು ಭಾರತದ ಜನತೆ ಬಿಡುವುದಿಲ್ಲ, ಬಿಡಲು ಸಾಧ್ಯವಿಲ್ಲ. ಈ ಪಿತೂರಿಯನ್ನು ಖಂಡಿತಾ ಸೋಲಿಸಬೇಕು.

ಮಾರುತಿ ಮಾರಾಟ : ವಿದೇಶಿ ಕಂಪನಿಗಳಿಗೆ ಉಡುಗೊರೆ

ಮಾರುತಿ ಕಾರೆಂದರೆ ಭಾರತದ ಮಧ್ಯಮ ವರ್ಗದ ಜನಕ್ಕೆ ಪಂಚಪ್ರಾಣ. ತಮ್ಮ ಕೈಗೆಟುಕುವ ದರದಲ್ಲಿ ಪುಟ್ಟ ಸಂಸಾರದ ಸಂಚಾರಕ್ಕಾಗಿ ಮಾರುತಿ ಈ ಕಾರು ಮಧ್ಯಮವರ್ಗದ ಜನರಿಗೆ ಪ್ರಿಯವಾದುದು.

ಮಾರುತಿ ಕಾರು ದೇಶದಲ್ಲಿ ಅತ್ಯಂತ ಹೆಚ್ಚು ಬೇಡಿಕೆ ಉಳ್ಳ ಕಾರು. ಈ ಕಾರನ್ನು ತಯಾರಿಸುವ ಮಾರುತಿ ಉದ್ಯೋಗ್ ಲಿಮಿಟೆಡ್ ಮೊದಲು ಸಂಪೂರ್ಣ ಸರಕಾರಿ ಸ್ವಾಮ್ಯಕ್ಕೆ ಒಳಪಟ್ಟಿತ್ತು. ಜಪಾನಿನ ಸುಜುಕಿ ಮೋಟಾರ್ ಸಂಸ್ಥೆಯೊಂದಿಗೆ ತಂತ್ರಜ್ಞಾನ ಸಹಕಾರಕ್ಕೆ ಮಾತ್ರ ಒಪ್ಪಂದವಾಗಿತ್ತು. ಅಲ್ಲಿಯವರೆಗೆ ಭಾರತದ ಖಾಸಗಿ ಕ್ಷೇತ್ರದಲ್ಲಿ ಮೇಲುಗೈ ಪಡೆದಿದ್ದ ಬಿರ್ಲಾ ಕಂಪನಿಯ ಅಂಬಾಸಿಡಾರ್, ಮಹೇಂದ್ರ ಕಂಪೆನಿಯ 'ಫಿಯೆಟ್' ಮೊದಲಾದ ಕಂಪನಿಗಳನ್ನು ಹಿಂದಕ್ಕೆ ಸರಿಸಿ ಮೇಲುಗೈ ಪಡೆದ 'ಮಾರುತಿ ಉದ್ಯೋಗ್' ವಿದೇಶಿ ಉದ್ಯೋಗ ಪತಿಗಳ ಕಣ್ಣನ್ನು ಕುಕ್ಕಿತು. ಅಂತೆಯೇ ತಂತ್ರಜ್ಞಾನ ಒದಗಿಸಿದ ಸುಜುಕಿ ಮೋಟಾರ್ಸ್ ಕಾರ್ಪೋರೇಶನ್ ಈ ಸಂಸ್ಥೆಯನ್ನು ಕೊಳ್ಳಲು ಹೊಂಚು ಹಾಕಿತು.

1989ರಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ವಿ.ಪಿ.ಸಿ.ಗ್ ಸರಕಾರದ ಸಂದರ್ಭದಲ್ಲಿ ಕಂಪೆನಿಯ ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಪ್ರಸ್ತಾಪ ಬಂದಿತ್ತು. ಎಡ ಪಕ್ಷಗಳ ಬೆಂಬಲದಿಂದ ಅಧಿಕಾರ ನಡೆಸುತ್ತಿದ್ದ ವಿ.ಪಿ.ಸಿಂಗ್ ಸರಕಾರ ಎಡ ಪಕ್ಷಗಳ ಪ್ರತಿರೋಧಕ್ಕೆ ಮಣಿಯಬೇಕಾಯಿತು. ಖಾಸಗಿಕರಣಗೊಳ್ಳುವ ಪ್ರಕ್ರಿಯೆ ನಿಂತಿತು.

1991ರಲ್ಲಿ ಆರ್ಥಿಕ ಸುಧಾರಣೆಯನ್ನು ತೀವ್ರ ಗತಿಯಲ್ಲಿ ಅನುಷ್ಠಾನಕ್ಕೆ ತಂದ ನರಸಿಂಹರಾವ್ ಕಾಂಗ್ರೆಸ್ ಸರಕಾರ, ತೀವ್ರವಿರೋಧದ ನಡುವೆಯೂ 1992ರಲ್ಲಿ ಸುಜುಕಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಶೇ. 50 ರಷ್ಟು ಶೇರುಗಳನ್ನು ತನ್ನಲ್ಲಿ ಇಟ್ಟುಕೊಂಡು, ಉಳಿದ ಶೇ. 50 ಶೇರುಗಳನ್ನು ಹೊಂದಿದ ಸುಜುಕಿ ಮೋಟಾರ್ ಕಾರ್ಪೋರೇಶನ್ ನೊಂದಿಗೆ ಪಾಲುದಾರನಾಯಿತು. ಜಂಟಿ ಉದ್ಯಮವಾಗಿ ಪರಿವರ್ತನೆಯಾಯಿತು. ಇದೀಗ ವಾಜಪೇಯಿ ನೇತೃತ್ವದ ಬಿಜೆಪಿ ಸಮ್ಮಿಶ್ರ ಸರಕಾರ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ತನ್ನಲ್ಲಿದ್ದ ಶೇರುಗಳನ್ನು ಹಣಕಾಸು ಸಂಸ್ಥೆಗಳಿಗೆ ಮಾರಾಟ ಮಾಡಲು ನಿರ್ಧರಿಸಿದೆ. ಹಾಗೆ ಮಾಡುವುದರ ಮೂಲಕ ಸುಜುಕಿ ಕಂಪೆನಿ ಅಥವಾ ಇನ್ನಾವುದೇ ಕಂಪೆನಿಗಳು ಆ ಶೇರುಗಳನ್ನು ಕೊಳ್ಳಬಹುದಾಗಿದೆ.

ವಿಪರ್ಯಾಸವೆಂದರೆ, ಬೇರೆ ದೇಶಗಳಲ್ಲಿ ಜಂಟಿ ಉದ್ಯಮಗಳಲ್ಲಿ ಅಲ್ಲಿನ ಸರಕಾರಗಳು ತಮ್ಮ ಪಾಲನ್ನು ಹಂತ ಹಂತವಾಗಿ ಜಾಸ್ತಿಮಾಡುತ್ತಾ ಹೋದರೆ, ನಮ್ಮದೇಶದಲ್ಲಿ ಅದನ್ನು ಕಡಿಮೆ ಮಾಡುತ್ತಿದ್ದಾರೆ. ದಕ್ಷಿಣ ಕೋರಿಯದಲ್ಲಿರುವ ಡೇವು ಮೋಟಾರ್ಸ್ ಮತ್ತು **ಹುಯಾಂಡಿ** (ಸ್ಯಾಂಟ್ರೋ ಕಾರು ತಯಾರಕರು) ಕಂಪೆನಿಗಳಲ್ಲಿ ಅಲ್ಲಿನ ಸರಕಾರ ತನ್ನ ಪಾಲನ್ನು ಜಾಸ್ತಿ ಮಾಡಿಕೊಳ್ಳುವುದರ ಮೂಲಕ ಆ ಕಂಪೆನಿಗಳು ಸರಕಾರದ ಹಿಡಿತದಲ್ಲಿದೆ.

ಮುಂದಾಲೋಚನೆ ಇಲ್ಲದೆ ಆರ್ಥಿಕ ಸುಧಾರಣೆಯನ್ನು ಜಾರಿಗೆ ತಂದ ಬಿಜೆಪಿ ಸರ್ಕಾರ, ಹಣಕಾಸು ಖೋತಾವನ್ನು ಸರಿದೂಗಿಸಲು ತನ್ನ ಪಾಲಿನ ಶೇರುಗಳನ್ನು ಮಾರಾಟ ಮಾಡುತ್ತಲಿದೆ. ಸರಕಾರದ ಈ ಕ್ರಿಯೆ 'ದೈನಂದಿನ ಅಗತ್ಯಗಳಿಗೆ ಕುಟುಂಬದ ಚಿನ್ನವನ್ನು ಮಾರಿದಂತೆ' ಆಗಿದೆ.

ಇತ್ತೀಚಿಗಷ್ಟೇ ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳ ಶೇರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿ ಖಾಸಗಿ ಮಾಲಿಕರ ಹೊಟ್ಟೆಯನ್ನು ತುಂಬಿಸುತ್ತಿರುವ ಬಿಜೆಪಿ ಸರಕಾರ ಮಾರುತಿ ಉದ್ಯೋಗದ ಶೇರುಗಳನ್ನು ಮಾರಾಟ ಮಾಡುವ ನಿರ್ಧಾರದ ಮೂಲಕ 'ಸ್ವದೇಶಿ' ಹೆಸರಿನಲ್ಲಿ ವಿದೇಶಿ ಕಂಪೆನಿಗೆ ಉಡುಗೊರೆ ನೀಡುತ್ತಿದೆ. ಏಕೆಂದರೆ, 1992ರಲ್ಲಿ ನಡೆದ ಒಪ್ಪಂದ ಪ್ರಕಾರ, ಶೇ. 50ರಷ್ಟು ಶೇರುಗಳನ್ನು ಹೊಂದಿರುವ ಭಾರತ ಸರಕಾರವಾಗಲೀ ಸುಜುಕಿ ಕಂಪನಿಯಾಗಲೀ ಪರಸ್ಪರ ಒಪ್ಪಿಗೆ ನೀಡದೆ ತನ್ನ ಶೇರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವಂತಿಲ್ಲ. ಅಂದರೆ ಭಾರತ ಸರಕಾರ ತೆಗೆದುಕೊಂಡಿರುವ 'ಕ್ಯಾಬಿನೆಟ್ ನಿರ್ಧಾರ' ಸುಜುಕಿ ಕಂಪೆನಿಯೊಂದಿಗೆ ಮಾತುಕತೆ ನಡೆಸಿದ ನಂತರವೇ ತೆಗೆದುಕೊಂಡ 'ಪ್ರಜಾ ಪ್ರಭುತ್ವ' ನಿರ್ಧಾರವಾಗಿದೆ. ಆದ್ದರಿಂದ ಈ ನಿರ್ಧಾರ ಸುಜುಕಿ ಮೋಟಾರ್ಸ್ ಪರವಾಗಿದೆಯೊ ಅಥವಾ ಭಾರತ ಸರಕಾರದ ಪರವಾಗಿದೆಯೋ ಎಂಬುದನ್ನು ಜನರೇ ನಿರ್ಧರಿಸಬೇಕಾಗಿದೆ.

ಭಾರತದ ಜನರು, ಭಾರತೀಯ ಹಣದಿಂದ ಖರೀದಿಸಿದ ಮಾರುತಿ ಕಾರಿನ ಲಾಭ ಜಪಾನಿನ ಕಂಪೆನಿಗೆ ಹೋಗಬೇಕೇ?

1996ರಲ್ಲಿ ವಾಜಪೇಯಿ ನೇತೃತ್ವದ ಬಿಜೆಪಿ ಸರಕಾರ 13 ದಿನಗಳ ಅಧಿಕಾರದ ಅವಧಿಯಲ್ಲಿ ಎನ್ರಾನ್ ಯೋಜನೆಯ ಬಗ್ಗೆ ತರಾತುರಿಯಲ್ಲಿ ತೆಗೆದುಕೊಂಡ ನಿರ್ಧಾರ ಯಾರ ಪರವಾಗಿತ್ತು ಎಂಬುದನ್ನು ಮಹಾರಾಷ್ಟ್ರದ ಜನತೆ ನೇರವಾಗಿ ಅನುಭವಿಸುತ್ತಿದ್ದಾರೆ.

- ಬಾಲಕೃಷ್ಣ ಶೆಟ್ಟಿ

ಕೃಷಿಯ ಬಿಕ್ಕಟ್ಟು ಮತ್ತು ಕರ್ನಾಟಕದ ರಾಜಕೀಯ

ಜಿ.ಎನ್. ನಾಗರಾಜ್

ಕರ್ನಾಟಕದ ದಿನಪತ್ರಿಕೆಗಳಲ್ಲಿ 5-6 ತಿಂಗಳುಗಳಿಂದ ನಿರಂತರವಾಗಿ ಪ್ರತಿದಿನವು ರೈತರು ಸುದ್ದಿಯಲ್ಲಿದ್ದಾರೆ. ಒಂದು ಕಡೆ ರೈತರು ರಸ್ತೆಗೆ ಬಂದು ಆಲೂಗಡ್ಡೆ, ಉಳ್ಳಾಗಡ್ಡೆ(ಈರುಳ್ಳಿ)ಗಳನ್ನು ರಸ್ತೆಗೆ ಸುರಿದು ಸತ್ಯಾಗ್ರಹ ಮಾಡಿದರು ಎಂದಿದ್ದರೆ ಮತ್ತೊಂದು ಕಡೆ ಬೆಂಗಳೂರು ಸಮೀಪದ ಸುರಧೇನುಪುರವೆಂಬ ಹಳ್ಳಿಯಲ್ಲಿ ಹೂಕೋಸು ಬೆಳೆದ ರೈತನ ಆತ್ಮಹತ್ಯೆ ಎಂಬ ಸುದ್ದಿ. ವಿದ್ಯುತ್ ಕಛೇರಿಗೆ ರೈತರು ನುಗ್ಗಿ ಪೀಠೋಪಕರಣ ಧ್ವಂಸ ಮಾಡಿದರು ಎಂಬುದು ಮತ್ತೊಂದು ದಿಕ್ಕಿನಿಂದ. ಹೀಗೆ ರೈತರ ಚಳುವಳಿಯ ಸಂಕಷ್ಟದ ಸುದ್ದಿಯ ನಡುವೆ ಬೆಲೆ ಕುಸಿತದ ಬಗ್ಗೆ ಮುಖ್ಯಮಂತ್ರಿಯವರ ಹೇಳಿಕೆ ಮತ್ತೊಂದು ಪಕ್ಷದ ಹೇಳಿಕೆ. ಅದಕ್ಕೆ ಉತ್ತರ, ಪ್ರತ್ಯುತ್ತರಗಳು ನಡೆದಿವೆ. ರಾಜಕೀಯ ಪಕ್ಷಗಳೆಲ್ಲವೂ ಇಂದು ದಿಢೀರನೆ ರೈತನ ಬಗ್ಗೆ, ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಮಾತನಾಡಲಾರಂಭಿಸಿವೆ. ಕೇವಲ ಕೆಲವೇ ತಿಂಗಳ ಹಿಂದೆ ರೈತ ಸಂಘಗಳು ರಾಜ್ಯದಲ್ಲಿ ಹಲವು ಕಡೆ ರ್ಯಾಲಿಗಳನ್ನು ಸಂಘಟಿಸಿ ಸಮ್ಮೇಳನ, ಸಮಾವೇಶಗಳನ್ನು ನಡೆಸಿ ರೈತರ ಸಂಕಷ್ಟದ ಬಗ್ಗೆ ಬೊಬ್ಬೆಯಿಡುತ್ತಿದ್ದಾಗ ಎಲ್ಲಾ ಮಾಡಿ ಗುಮ್ಮನೆಗುಸಕರಂತೆ ಮೂಕವಾಗಿದ್ದ ಆಳಿದ, ಆಳುತ್ತಿರುವ ರಾಜಕೀಯ ಪಕ್ಷಗಳು ಈಗ ಒಮ್ಮೆಲೇ ಮಾತು ಬಂದವರಂತೆ ಬಾಯಿ ಬಿಡಲಾರಂಭಿಸಿರುವುದು ಏಕೆ? ಅವರ ಬಾಯಿಗಳಿಂದ ಉದುರುತ್ತಿರುವ ಅಣಿಮುತ್ತುಗಳಾದರೂ ಏನು?

ರೈತ ಚಳುವಳಿಯ ಮೊದಲ ಹಂತ

ಈಗಾಗಲೇ 'ಐಕ್ಯರಂಗ' ದ ಹಿಂದಿನ ಸಂಚಿಕೆಗಳಲ್ಲಿ ಕರಾವಳಿ, ಮಲೆನಾಡಿನ ರೈತರು ಅಡಿಕೆ, ತೆಂಗು, ಸಾಂಬಾರ ಪದಾರ್ಥಗಳು, ಕಾಫಿ ಇವುಗಳ ಬೆಲೆ ಕುಸಿತದಿಂದ ಉತ್ತರ ಕರ್ನಾಟಕದವರು ತೊಗರಿ, ಹತ್ತಿ, ಜೋಳ, ಸಜ್ಜೆಗಳ ಬೆಲೆ ಕುಸಿತದಿಂದ, ದಕ್ಷಿಣ ಕರ್ನಾಟಕದ ರೈತರು ತರಕಾರಿ, ಹಣ್ಣು, ಹಾಲು ಮೊದಲಾದ ಬೆಲೆ ಕುಸಿತದಿಂದ ಕರ್ನಾಟಕದ ಎಲ್ಲಾ ಭಾಗಗಳ ರೈತರೂ ಭತ್ತ, ಶೇಂಗಾ(ಕಡಲೆಕಾಯಿ), ಸೂರ್ಯಕಾಂತಿ ಮೊದಲಾದವುಗಳ ಬೆಲೆ ಕುಸಿತದಿಂದ ಹೇಗೆ ಕಂಗಾಲಾಗಿದ್ದಾರೆ ಎಂಬ ಬಗ್ಗೆ ವಿವರವಾದ ವರದಿಗಳನ್ನು ಓದಿದ್ದೀರಿ. ಈ ಬೆಲೆ ಕುಸಿತದ ಪರಿಣಾಮ ರೈತರಲ್ಲಿ ಹುಟ್ಟಿಸುತ್ತಿದ್ದ ಆತಂಕ, ಸಂಕಟಗಳಿಗೆ ಧ್ವನಿ ನೀಡಿದವರು ರಾಜ್ಯದ ರೈತ ಚಳುವಳಿಕಾರರು. ಸೆಪ್ಟೆಂಬರ್‌ನಲ್ಲಿ ಗುಲ್ಬರ್ಗಾದಲ್ಲಿ ನಡೆದ ಪ್ರಾಂತ ರೈತ ಸಂಘದ ಸಮ್ಮೇಳನದಿಂದ ಆರಂಭವಾಗಿ ಕರ್ನಾಟಕ ರಾಜ್ಯ ರೈತ ಸಂಘದ ಬೀಜ ಪಂಚಾಯತ್ ಮತ್ತು ಬಹಿರಂಗ ಸಭೆ, ನಂಜುಂಡಸ್ವಾಮಿಯವರ ಸಂಘಟಿಸಿದ ಬಹಿರಂಗ ಸಭೆ ಇವುಗಳಲ್ಲಿ ಕೃಷಿ ಇಂದು ಅನುಭವಿಸುತ್ತಿರುವ ಬಿಕ್ಕಟ್ಟಿನ ಪ್ರಶ್ನೆ. ಅವುಗಳಿಗೆ ಕಾರಣಗಳು ಹಾಗೂ ಕಾರಣರಾದವರು ಕರ್ನಾಟಕದ ಜನತೆಯ ಮಾನಸಿಕ ಪ್ರಪಂಚದಲ್ಲಿ ಮುನ್ನೆಲೆಗೆ ಬಂದವು.

ಎರಡನೇ ಹಂತ: ಸ್ವಯಂಸ್ಫೂರ್ತಿಯ ಹೋರಾಟಗಳೂ ಪ್ರಾಂತ ರೈತ ಸಂಘವೂ

ಮುಂದಿನ ದಿನಗಳಲ್ಲಿ ರೈತರ ಅತೃಪ್ತಿಯ ಪ್ರಕಟಣೆ ಮತ್ತಷ್ಟು ತೀವ್ರವಾಗಿ,ನೇರವಾಗಿ ಮಾರುಕಟ್ಟೆಗಳಲ್ಲಿಯೇ ಆರಂಭವಾಯಿತು. ಮಾರುಕಟ್ಟೆಗೆ ತಮ್ಮ ಬೆಳೆಗಳನ್ನು ಒಯ್ದ ರೈತರು ತಮಗೆ ಸಿಕ್ಕ ಬೆಲೆಗಳನ್ನು ನೋಡಿ ಆಘಾತಕ್ಕೀಡಾಗಿ



ಕೃಪೆ: ಪ್ರಜಾವಾಣಿ

ಅಲ್ಲಿಂದಲೇ ನೇರವಾಗಿ ರಸ್ತೆಗೆ ಬಂದು ಚಳುವಳಿಗಳನ್ನು ಆರಂಭಿಸಿದರು. ಇಂದು ಹುಬ್ಬಳ್ಳಿ, ನಾಳೆ ಹಾಸನ, ಮತ್ತೊಂದು ದಿನ ಗಂಗಾವತಿ, ಇನ್ನೊಂದು ದಿನ ಕೊಪ್ಪಳ, ರಾಯಚೂರು, ಬಳ್ಳಾರಿ, ಬೆಂಗಳೂರು ಹೀಗೆ ರೈತರ ಕೋಪ ಪ್ರಕಟಗೊಳ್ಳುತ್ತಾ ಹೋಯಿತು. ಕರ್ನಾಟಕ ಪ್ರಾಂತ ರೈತ ಸಂಘ ಈ ಬೆಲೆ ಕುಸಿತಗಳಲ್ಲಿ ಮಧ್ಯಪ್ರವೇಶ ಮಾಡಿ ರಾಯಚೂರು - ಕೊಪ್ಪಳ ಬಂದ್‌ಗೆ ಕರೆ ನೀಡಿತು. ತೊಗರಿ ಬೆಲೆಯ ಬಗ್ಗೆ ಗುಲ್ಬರ್ಗಾದಲ್ಲಿ ನಿರಂತರವಾಗಿ ಚಳುವಳಿ ಪ್ರಚಾರ ಆರಂಭಿಸಿತು. ಗುಲ್ಬರ್ಗಾ ಬಂದ್ ಆಚರಿಸಲಾಯಿತು. ಈ ಬಂದ್ ಕರೆಗಳಿಗೆ ರೈತರು ಮಾತ್ರವೇ ಅಲ್ಲದೆ ವ್ಯಾಪಾರಿ ವರ್ಗ, ಜನಸಾಮಾನ್ಯರೂ ಸಹಕರಿಸಿ ಯಶಸ್ಸು ಪಡೆದವು. ಈಗ ರೈತರ ಕೋಪತಾಪ ಅಸಮಾಧಾನಗಳು ರಾಜ್ಯ ಸರ್ಕಾರಕ್ಕೆ ತಾಕತೊಡಗಿತು. ಭತ್ತ, ಮೆಕ್ಕೆಜೋಳ, ತೊಗರಿಗಳ ಖರೀದಿ ಮಾಡುತ್ತೇವೆಂಬ ಹೇಳಿಕೆಗಳು ಬರಲಾರಂಭಿಸಿದವು.

ಕರ್ನಾಟಕ ಪ್ರಾಂತ ರೈತ ಸಂಘ ಮಂಗಳೂರುಹಾಗೂ ರಾಯಚೂರಿನಲ್ಲಿ ಆಯಾ ಪ್ರದೇಶದ ಬೆಳೆಗಳ ಬೆಲೆ ಕುಸಿತದ ಬಗ್ಗೆ ರಾಜ್ಯ ಮಟ್ಟದ ಸಮಾವೇಶಗಳನ್ನು ಸಂಘಟಿಸಿತು. ಈ ಸಮಾವೇಶಗಳಲ್ಲಿ ರಾಜ್ಯ ರೈತ ಸಂಘ, ಜನತಾದಳ(ಎಸ್) ಮುಂತಾದ ಸಂಘಟನೆಗಳೂ ಭಾಗವಹಿಸಿದವು. ಜಾಗತೀಕರಣ, ವಿಶ್ವ ವ್ಯಾಪಾರಸಂಸ್ಥೆ, ಹೊಸ ಆರ್ಥಿಕ ನೀತಿಗಳ ವಿರುದ್ಧ ಒಕ್ಕೊರಲಿನ ಧ್ವನಿ ಮೊಳಗಿತು. ಈ ಮಧ್ಯೆ ಕರ್ನಾಟಕ ರಾಜ್ಯದ ನಾಲ್ಕು ಕೃಷಿಕ ಸಂಘಟನೆಗಳು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಅಖಿಲ ಭಾರತ ಕಿಸಾನ್ ಸಭಾ ಕರ್ನಾಟಕ ಘಟಕಗಳು ದೆಹಲಿ ಚಲೋ ನಡೆಸಿದವು. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಹತ್ತಾರು ಸಾವಿರ ರೈತರು ದೆಹಲಿ ಚಲೋದಲ್ಲಿ ಪಾಲ್ಗೊಂಡರು. ಪ್ರಥಮ ಬಾರಿಗೆ ಕೆಂಬಾವುಟದ ಸಂಘಗಳು ಕರ್ನಾಟಕದ ರಾಜ್ಯ ರೈತ ಸಂಘವೂ ದೆಹಲಿ ರ್ಯಾಲಿಯಲ್ಲಿ ಜೊತೆಗೂಡಿ ಹೆಜ್ಜೆ ಹಾಕಿದವು. ರೈತ ಸಂಘಗಳ ಐಕ್ಯತೆ ಮತ್ತಷ್ಟು ದೃಢವಾಯಿತು.

ಅದೇ ಸಮಯದಲ್ಲಿ ಕರ್ನಾಟಕದಲ್ಲಿ ವಿದ್ಯುತ್ ದರ ಏರಿಕೆ, ಪಂಪ್‌ಸೆಟ್‌ಗಳಿಂದ ಹಳೆ ಬಾಕಿ ಹೆಸರಿನಲ್ಲಿ 10 ರಿಂದ 45 ಸಾವಿರಗಳವರೆಗೆ ಬಿಲ್ ನೀಡಿಕೆ, ವಿದ್ಯುತ್ ಸಂಪರ್ಕ ಕಡಿತದ ಬೆದರಿಕೆಗಳು ಆರಂಭವಾದವು. ವಿದ್ಯುತ್ ಖಾಸಗೀಕರಣ ನೀತಿ ಹಾಗೂ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದರದ ಬಗ್ಗೆ ರೈತರು ವಿವಿಧ ಕಡೆಗಳಲ್ಲಿ ತಾಲ್ಲೂಕು ಮಟ್ಟದ ವಿಶಾಲ ಹೋರಾಟ ಸಮಿತಿಗಳನ್ನು ರಚಿಸಿಕೊಳ್ಳಲು ಕರ್ನಾಟಕ ಪ್ರಾಂತ ರೈತ ಸಂಘ ನೆರವಾಯಿತು. ಒಂದು ವಾರ ಕಾಲದ ರಾಜ್ಯ ಮಟ್ಟದ ಧರಣಿ ಸತ್ಯಾಗ್ರಹವೂ ನಡೆಯಿತು.

ಮೂರನೇ ಹಂತ: ಫೆ 5-7 ರ ಚಳುವಳಿ

ದೆಹಲಿಯಲ್ಲಿ ಸಂಘಟಿಸಿದ್ದ ಎಡಪಂಥೀಯ ರೈತ-ಕೂಲಿಕಾರ ಸಂಘಗಳ ಸಮಾವೇಶ ದೇಶಾದ್ಯಂತ ರೈತ ಚಳುವಳಿಯನ್ನು ನಡೆಸಲು ಕರೆ ನೀಡಿತು. ಗುಜರಾತ್ ಭೂಕಂಪದ ಮಹಾ ದುರಂತದಿಂದಾಗಿ ದೇಶದ ಇತರ ಭಾಗಗಳಲ್ಲಿ ಚಳುವಳಿಯನ್ನು ಮುಂದೂಡಿದರೂ ಕರ್ನಾಟಕದಲ್ಲಿ ರೈತರ ಬದುಕಿನಲ್ಲಿ ಸಂಭವಿಸುತ್ತಿದ್ದ ಭೂಕಂಪ ರೈತ ಚಳುವಳಿಯನ್ನು ನಡೆಸಲು ಪ್ರೇರೇಪಿಸಿತು.

ಫೆ 5, 6 ರ ರಸ್ತಾರೋಕೋಗಳಲ್ಲಿ ರೈತರು ರಾಜ್ಯದ 18 ಜಿಲ್ಲೆಗಳ 120 ಕಡೆಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಕಡೆಗಳಲ್ಲಿ ಬೆಳಗಿನಿಂದ ಸಂಜೆಯವರೆಗೂ ರಸ್ತಾರೋಖೋ ನಡೆದಿದೆ. ವಿದ್ಯುತ್ ಬಳಕೆದಾರ ರೈತರಂತೂ ಸಾಮೂಹಿಕವಾಗಿ ಸಾವಿರಾರು ಗಟ್ಟಳೆ ಭಾಗವಹಿಸಿದ್ದಾರೆ.

ಕೃಷಿಯ ಉತ್ಪಾದನೆಗಳ ಬೆಲೆ ಕುಸಿತದ ಬಗ್ಗೆ; 18 ಜಿಲ್ಲೆಗಳಲ್ಲಿ- ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆದಿದೆ. ದ.ಕ., ಕೋಲಾರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಪಿಕೆಟಿಂಗ್‌ಗಳಲ್ಲಿ ಭಾಗವಹಿಸಿ ದ್ದಾರೆ. ಕೃಷಿಯ ಒಂದು ಮುಖ್ಯ ವಿಭಾಗವಾದ ಕೃಷಿಕೂಲಿಕಾರರು ಇದೇನಾಗುತ್ತಿದೆ? ಈ ಬೆಲೆ ಕುಸಿತದಿಂದ ತಮ್ಮ ಮೇಲಾಗುವ ಪರಿಣಾಮ ಏನು? ತಮಗೆ ಅನಾನುಕೂಲವೋ, ಅನುಕೂಲವೋ? ಎಂಬ ಗೊಂದಲದಲ್ಲಿದ್ದರು. ಆದರೆ ರೈತ ಸಂಘಗಳ ಜೊತೆ ಕೃಷಿಕೂಲಿಕಾರರ ಸಂಘವೂ ಹೋರಾಟಕ್ಕಿಳಿದಿದ್ದು. ಕೃಷಿ ಕೂಲಿಕಾರರಿಗೆ ಹೊಸ ಆರ್ಥಿಕ ನೀತಿಗಳಿಂದ ಹಾಗೂ ಆಮದು ನೀತಿಯಿಂದ ಆಗುವ ಹಾನಿಯೇನು ಎಂದು ವಿವರಿಸಿದ್ದರಿಂದ ಕರ್ನಾಟಕದ ಕೆಲವು ಭಾಗಗಳಲ್ಲಿ ಕೃಷಿ ಕೂಲಿಕಾರರು ಸ್ವತಂತ್ರವಾಗಿ ಮತ್ತು ಇತರ ಸಂಘಟನೆಗಳೊಂದಿಗೆ ಹೋರಾಟಕ್ಕಿಳಿದರು. ರಸ್ತಾರೋಖೋ, ಪಿಕೆಟಿಂಗ್‌ಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದರು.

ಹಾಗೆಯೇ ಇತರ ಜನಸಮುದಾಯಗಳಲ್ಲಿ ಕೃಷಿಯ ಮೇಲೆ ಕೃಷಿ ವಾಣಿಜ್ಯ - ವ್ಯವಹಾರ, ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ತೊಡಗಿರುವ ವರ್ಗಗಳು ಕೃಷಿ ವಸ್ತುಗಳ ಆಮದಿನಿಂದ ರೈತರಷ್ಟೇ ಗಾಬರಿಗೊಂಡಿದ್ದಾರೆ. ಹಿಂದಿನ ನಾಲ್ಕಾರು ತಿಂಗಳುಗಳಲ್ಲಿ ರೈತರು ಸ್ವಯಂಸ್ಫೂರ್ತಿಯಿಂದ ಹೋರಾಟಕ್ಕಿಳಿದಾಗ ಅದಕ್ಕೆ ಬೆಂಬಲ ನೀಡಿದ್ದಾರೆ. ಹೋರಾಟಕ್ಕಿಳಿಯುವಂತೆ ಪ್ರೇರೇಪಿಸಿದ್ದಾರೆ. ಬಂದ್‌ಗಳನ್ನು ಯಶಸ್ವಿ ಮಾಡಲು ಸಹಕರಿಸಿದ್ದಾರೆ. ಹಲವು ಕಡೆಗಳಲ್ಲಿ ಉದಾಹರಣೆಗೆ ತೊಗರಿಮಿಲ್ ಮಾಲೀಕರಂತೆ ತಾವೂ ಚಳುವಳಿಯ ಕೆಲವು ಹಂತಗಳಲ್ಲಿ ಭಾಗವಹಿಸಿದ್ದಾರೆ.

ಆದರೆ ಇತರ ಜನಸಮುದಾಯಗಳು - ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಮಧ್ಯಮವರ್ಗದ ಜನರು ಪತ್ರಿಕೆಗಳು, ಮಾಧ್ಯಮಗಳ ಮೂಲಕ ರೈತರ ಸಂಕಷ್ಟಗಳ ಬಗ್ಗೆ, ಆತ್ಮಹತ್ಯೆಯ ಬಗ್ಗೆ ತಿಳಿದುಕೊಂಡಿದ್ದರು. ಆದರೆ ಸಿಐಟಿಯು ರೈತರ ಚಳುವಳಿಗೆಬೆಂಬಲ ನೀಡಿ ಪಿಕೆಟಿಂಗ್‌ಗಳಲ್ಲಿ ಭಾಗವಹಿಸುವ ಘೋಷಣೆ ನೀಡಿದ್ದರಿಂದ ರಾಜ್ಯದ ಹಲವು ಕಾರ್ಮಿಕ ಶಿಕ್ಷಣ ಕೇಂದ್ರಗಳಲ್ಲಿ ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು, ಯುವಜನರು ಪಿಕೆಟಿಂಗ್‌ನಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು.

ಆರು ಜಿಲ್ಲೆಗಳಲ್ಲಿ ಯಶಸ್ವಿ ಬಂದ್

ಈ ಮೂಲಕವಾಗಿ ಕರ್ನಾಟಕದ ಜನತೆಯ ಮುಂದೆ ಕೃಷಿ ಬಿಕ್ಕಟ್ಟನ್ನು ಪ್ರಮುಖ ಪ್ರಶ್ನೆಯನ್ನಾಗಿಸಿದರು. ಗುಲ್ಬರ್ಗಾದಲ್ಲಿ ರಸ್ತಾರೋಖೋ ಸಂದರ್ಭದಲ್ಲಿ ಹಲ್ಲೆಗೊಳಗಾದ, ಬಂಧಿಸಲಾದ ಯುವಕರ ಕೈಗೆ ಕೋಳ ತೊಡಿಸಿದ್ದನ್ನು ಪ್ರತಿಭಟಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಕಾಂ. ಮಾರುತಿ ಮಾನ್ಪಡೆ ಗುಲ್ಬರ್ಗಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಪ್ಪ ತಡಕಲ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಕೆ.ನೀಲಾ, ಜಿಲ್ಲಾ ಅಧ್ಯಕ್ಷೆ ಗಂಗಮ್ಮ ಬಿರಾದಾರ್ ಇವರುಗಳ ಮೇಲೆ ಹಲ್ಲೆಯಾಯಿತು. ವಿರೂಪಾಕ್ಷ ತಡಕಲ್ ತಲೆಗೆ ತೀವ್ರ ಪೆಟ್ಟಾಯಿತು. ಪ್ರಜಾಪ್ರಭುತ್ವ ಚಳುವಳಿಯ ಮೇಲಿನ ಈ ಹಲ್ಲೆಯನ್ನು ಪ್ರತಿಭಟಿಸಲು ಕೇವಲ 5 ದಿನಗಳ ಅಂತರದಲ್ಲಿ ಕೊಟ್ಟ ಬಂದ್ ಕರೆ 5 ಜಿಲ್ಲೆಗಳಲ್ಲಿ ಯಶಸ್ವಿಯಾಯಿತು. ಪ್ರತಿಭಟನೆಗಳು ರಾಜ್ಯದ ಎಲ್ಲೆಡೆ ನಡೆದವು.

ಇದು ರಾಜ್ಯದ ಪ್ರಜಾಪ್ರಭುತ್ವ ಚಳುವಳಿಯ ಇತಿಹಾಸದಲ್ಲಿಯೇ ಪ್ರಮುಖ ಘಟನೆ. ಬಂದ್ ಹಾಗೂ ಪ್ರತಿಭಟನೆಯ ಯಶಸ್ಸಿಗೆ ಪ್ರಮುಖ ಕಾರಣ ಇಂದು ರೈತರು ಮಾತ್ರವೇ ಅಲ್ಲದೇ ಇತರ ಜನಗಳ ಮನಸ್ಸಿನಲ್ಲಿಯೂ ಮೂಡಿದ ಆತಂಕ, ಸೌಹಾರ್ದ ಮನೋಭಾವನೆ.

ಎಲ್ಲ ಜನವಿಭಾಗಗಳು ಹೊಸ ಆರ್ಥಿಕ ನೀತಿಯ ವಿವಿಧ ಪರಿಣಾಮಗಳಿಂದ ತೊಂದರೆಗೆ ಒಳಗಾಗಿರುವುದು ಹಾಗೂ ಈಗಾಗಲೇ ಹೋರಾಟಗಳಲ್ಲಿ ತೊಡಗಿರುವುದು ರೈತರ ಸಂಕಷ್ಟವನ್ನು ತಮ್ಮದೇ ಸಂಕಷ್ಟವೆಂದು ಅನೇಕ ಜನ ಸಮುದಾಯಗಳು ಭಾವಿಸಲು ನೆರವಾಯಿತು ಮತ್ತು ಸೌಹಾರ್ದತೆಯ ಭಾವನೆಯನ್ನು ಬಲಪಡಿಸಿತು.

ರಾಜಕೀಯ ಪಕ್ಷಗಳು ಬಾಯಿ ಬಿಡಲೇಬೇಕಾಯಿತು.

ಹೀಗೆ ಕರ್ನಾಟಕದಾದ್ಯಂತ ಹೆಚ್ಚು ಹೆಚ್ಚು ರೈತರು ಚಳುವಳಿಗೆ ಪ್ರತಿಸ್ಪಂದಿಸುತ್ತಿರುವುದು, ಇತರ ದುಡಿಯುವ ಜನಸಮೂಹಗಳು ಮಾತ್ರವೇ ಅಲ್ಲದೆ ಬಂಡವಾಳಶಾಹಿ ವರ್ಗದ ಕೆಲ ಭಾಗಗಳೂ ಕೂಡ ಪ್ರೇರೇಪಣೆ ನೀಡಿದ್ದು ನಿದ್ದೆ ಮಾಡುತ್ತಿದ್ದ ಆಳುವ ಪಕ್ಷಗಳು-ಆಳಿದ ಪಕ್ಷಗಳು ಎಚ್ಚರಗೊಳ್ಳುವಂತಾಯಿತು.

ಒಂದು ರಾಜಕೀಯ ಪಕ್ಷವೂ ಆದ ಕರ್ನಾಟಕ ರಾಜ್ಯ ರೈತ ಸಂಘ ಹೊಸ ಆರ್ಥಿಕ ನೀತಿಗಳು ಹಾಗೂ ವಿಶ್ವ ವ್ಯಾಪಾರ ಸಂಸ್ಥೆಯ ಆರಂಭದ ದಿನಗಳಿಂದಲೂ ಅದರ ವಿರುದ್ಧ ದನಿ ಎತ್ತಿದ್ದು ಮಾತ್ರವಲ್ಲದೆ ರೈತ ಚಳುವಳಿಯಲ್ಲಿ ತೊಡಗಿದವರಾಗಿ ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಎಡಪಂಥೀಯ ರೈತ ಚಳುವಳಿಯ ದೆಹಲಿ ರ್ಯಾಲಿಯಲ್ಲಿ ಭಾಗವಹಿಸಿದ್ದು ಫೆ. 5-7 ರ ಚಳುವಳಿಯಲ್ಲಿ ಕೈ ಜೋಡಿಸಿದ್ದು ಕರ್ನಾಟಕದ ಕೃಷಿ ಬಿಕ್ಕಟ್ಟಿಗೆ ತೋರಿದ ಸಕಾರಾತ್ಮಕ ಹಾಗೂ ಗುಣಾತ್ಮಕ ಪ್ರತಿಕ್ರಿಯೆ.

ಜಾತ್ಯಾತೀತ ಜನತಾದಳ, ಜನತಾದಳದ ಭಾಗವಾಗಿ ರಾಜ್ಯದಲ್ಲಿ ಅಧಿಕಾರ ಮಾಡುತ್ತಿದ್ದಾಗ

ಕಂಗಾಲಾದ ಬಳ್ಳಾರಿ ರೈತರಿಂದ ಮೆಕ್ಕೆಜೋಳಕ್ಕೆ ಬೆಂಕಿ



ಪುಟ 10 ಕ್ಕೆ

ರೈತರ ಬದುಕು ಬೀದಿಗೆ ಸಮರಧೀರರು ಜೈಲಿಗೆ

ರೈತ ಚಳುವಳಿಯನ್ನು ದಮನಗೊಳಿಸಲು ಮುಂದಾದ ರಾಜ್ಯ ಸರ್ಕಾರದ ದಬ್ಬಾಳಿಕೆ ವಿರೋಧಿಸಿ, ಹೂಡಿರುವ ಸುಳ್ಳು ಮೊಕದ್ದಮೆ ಹಿಂತೆಗೆಯಲು ಹಾಗೂ ಬಂಧಿತರನ್ನು ಬಿಡುಗಡೆಗೊಳಿಸಲು ಆಗ್ರಹಿಸಿ ವಿವಿಧ ರೈತ ಸಂಘಗಳು ಕೂಲಿಕಾರರ ಕಾರ್ಮಿಕರು ವಿದ್ಯಾರ್ಥಿ-ಯುವಜನ, ಮಹಿಲಾ ಸಂಘಟನೆಗಳು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ಕರೆನೀಡಿದ್ದಾರು.

ಬೀದಿರ್, ಗುಲ್ಬರ್ಗಾ, ಬಿಜಾಪುರ, ರಾಯಚೂರು, ಬಳ್ಳಾರಿ, ಜಿಲ್ಲೆಗಳು ಬಂದ್ ನಡೆಸಿ ಅಪೂರ್ವ ರಿತಿಯಲ್ಲಿ ಪ್ರತಿಕ್ರಿಯಿಸಿದರೆ, ಉಳಿದೆಡೆ ಪ್ರಬಲ ಪ್ರತಿಭಟನೆ ನಡೆದಿದೆ.

ಬಳ್ಳಾರಿ ಜಿಲ್ಲಾಧಿಕಾರಿಗಳು ಪತ್ರಿಕೆಯ ಮೂಲಕ "ಬಂದ್ ಆಚರಿಸಬಾರದೆಂದು" ಮನವಿ ಮಾಡಿದರೂ, ಇವರಮನವಿಯನ್ನು ಧಿಕ್ಕರಿಸಿದ ಬಳ್ಳಾರಿ ನಗರದ ಜನತೆ ಬಂದ್‌ನ್ನು ಯಶಸ್ವಿಗೊಳಿಸಿದರು.

ಗುಲ್ಬರ್ಗಾದಲ್ಲಿ ಪ್ರಾಂತ ರೈತ ಸಂಘ ಹಾಗೂ ಜನವಾದಿ ಮಹಿಳಾ ಸಂಘದ ಡಿವೈಎಫ್‌ಐ ಮುಖಂಡರ ಮೇಲೆ ನಡೆದ ಪೊಲೀಸ್ ದೌರ್ಜನ್ಯದ ವಿರುದ್ಧ ಹಾಗೂ ಮೆಕ್ಕೆ ಜೋಳ ಬೆಳೆದ ರೈತರ ಮಾಲನ್ನು ಖರೀದಿಸದೇ ಖರೀದಿ ಕೇಂದ್ರಗಳನ್ನು ತೆರೆಯದೆ-ರೈತರನ್ನು ಸಂಕಷ್ಟಕ್ಕೀಡುಮಾಡಿರುವುದರ ವಿರುದ್ಧ, ಬಳ್ಳಾರಿ ಜಿಲ್ಲಾ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಬಳ್ಳಾರಿಜಿಲ್ಲಾ ರೈತ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಬಳ್ಳಾರಿ ಜಿಲ್ಲಾ ರೈತ ಹೋರಾಟ ಸಮಿತಿಗಳು 'ಬಳ್ಳಾರಿ' ಬಂದ್ ಗೆ ಕರೆ ನೀಡಿದ್ದವು. ಈ ಕರೆಗೆ ಸಿ.ಪಿ.ಐ(ಎಂ), ಸಿ.ಪಿಐ, ಜನತಾದಳ(ಎಸ್) ಜನತಾದಳ(ಯು) ಬೆಂಬಲಿಸಿದ್ದಲ್ಲದೆ. ಜನವಾದಿ ಮಹಿಳಾ ಸಂಘ, ಬ್ಯಾಂಕ್ ನೌಕರರ ಸಂಘ, ಎಸ್.ಎಫ್.ಐ. ಡಿವೈಎಫ್‌ಐ, ಸಿಐಟಿಯು, ಆಟೋಚಾಲಕರ ಸಂಘ ಹಾಗೂ ಇನ್ನಿತರೆ ವ್ಯಕ್ತಿಗಳು ಬೆಂಬಲ ವ್ಯಕ್ತಪಡಿಸಿದ್ದರು.

ಬಂದ್ ಪೂರ್ವಬಾವಿಯಾಗಿ ಎಲ್ಲಾ ಸಂಘಗಳು ತಮ್ಮ ಬೆಂಬಲವನ್ನು ಪತ್ರಿಕಾ ಹೇಳಿಕೆ ಕೊಡುವುದಲ್ಲದೆ. ಎಲ್ಲಾ ಸಂಘಗಳು ಪಕ್ಷಗಳು ಜಂಟಿಯಾಗಿ ಪತ್ರಿಕಾಗೋಷ್ಠಿ ನಡೆಸಿ ಬಂದ್ ಯಶಸ್ವಿಗೊಳಿಸಲು ಕಾರ್ಯಕ್ರಮ ರೂಪಿಸಿಕೊಳ್ಳಲಾಯ್ತು. ದಿನಾಂಕ 12.2.2001 ರಂದು



ಬಿಕೋ ಎನ್ನುತ್ತಿರುವ ಬಳ್ಳಾರಿ ಬಸ್ ನಿಲ್ದಾಣ

ಎ.ಪಿ.ಎಂ.ಸಿ. ಆವರಣದಲ್ಲಿ ತಮ್ಮ ಮೆಕ್ಕೆ ಜೋಳದೊಂದಿಗೆ ಇದ್ದ ರೈತರು, ಹಾಗೂ ಎಲ್ಲಾ ಸಂಘ ಸಂಸ್ಥೆಗಳು ಸೇರಿ ಮೆಕ್ಕೆ ಜೋಳದೊಂದಿಗೆ ಬೃಹತ್ ಪ್ರದರ್ಶನ ನಡೆಸಲಾಯ್ತು.

ಅತ್ತ, ತಮ್ಮ ಮಾಲು ಇಂದು, ನಾಳೆ, ಖರೀದಿಯಾಗಬಹುದೆಂದು ನಂಬಿದ್ದ ರೈತರು ಲೆಕ್ಕ ಹಾಕುತ್ತಲೇ 30 ದಿನಗಳನ್ನು ಕಳೆದಿದ್ದರು. ಸಂಬಂಧಿಸಿದ ಅಧಿಕಾರಿಗಳೊಟ್ಟಿಗೆ ಜಿಲ್ಲಾಧಿಕಾರಿಗಳನ್ನು ಸೇರಿದಂತೆ ಪ್ರತಿದಿನ ಜಗಳಕಾದರು. ಅಧಿಕಾರಿಗಳು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ರೈತರನ್ನು ಓಡಾಡಿಸಿದರು. ಸರಿಯಾದ ಕಾವಲುಗಾರರಿಲ್ಲದ ಎಪಿಎಂಸಿ ಆವರಣ ರೈತರು ತಮ್ಮ ಮಾಲಿಗೆ ತಾವೇ ಕಾವಲುಗಾರರು. ತಿಂಗಳುಗಟ್ಟಲೇ ದುಡಿಮೆ ಇಲ್ಲದೆ ಸರಿಯಾದ ಊಟವಿಲ್ಲದೆ ಸೊಳ್ಳೆಗಳ ಕಡಿತಕ್ಕೆ ಅನೇಕ ರೈತರು ಖಾಯಿಲೆಯಿಂದ ನರಳವುದೂ ಪ್ರಾರಂಭವಾಯ್ತು. ಇಷ್ಟೆಲ್ಲಾ ಕಂಗಾಲಾದ ರೈತರನ್ನು ಯಾರು ರಕ್ಷಿಸುವರು?

ಇತ್ತ ಪ್ರಾಂತ ರೈತ ಸಂಘ, ಹೋರಾಟಸಮಿತಿ, ಸಂಬಂಧಿಸಿದ ಅಧಿಕಾರಿಗಳಿಗೆ ಮನವಿಯ ಮೇಲೆ ಮನವಿ, ಪತ್ರಿಕಾ ಹೇಳಿಕೆಗಳು ಕೊಟ್ಟು ಕೊಟ್ಟು ಸಾಕಾಯ್ತು. ಅಧಿಕಾರಿಗಳು "ಮನವಿಗೆ ಮಣಿಯದ ಮಾನ್ಯಾರಯ್ಯ" ನಾವು ಎಂದು ನಿರೂಪಿಸಿಕೊಂಡರು. ಒತ್ತಾಯಿಸಿದಾಗ ಸುಳ್ಳುಕಾರಣಗಳನ್ನು ಮುಂದಿಟ್ಟರು. ದಿನವಿಡೀ ದುಡಿಯುವ ರೈತನ ಸಂಕಷ್ಟಗಳು ಗದ್ದಲಮಾಡುತ್ತಿದ್ದರೂ ಬಳ್ಳಾರಿಯ ಮೂರು ಮಂತ್ರಿಮಣಿಗಳು ತಮ್ಮ ಕಿವಿ, ಕಣ್ಣು, ಬಾಯಿಯನ್ನು ಮುಚ್ಚಿ ಕುಳಿತರು. ತಾಳುವುದೆಂದರೆ ಎಲ್ಲಿಯವರೆಗೆ?

ನೊಂದ ರೈತನೊಬ್ಬ ಹೇಳುತ್ತಾನೆ

"ಡಿ.ಸಿ. ಕೇಳಿದ್ರೆ ಎಫ್.ಸಿ; ಎಫ್.ಸಿ. ಕೇಳಿದೆ, ವೇರ್‌ಹೌಸ್; ವೇರ್ ಹೌಸ್ ಕೇಳಿದ್ರೆ ಡಿ.ಸಿ. ಈ ಮೂವರ ಹಾಲೆ ಸುತ್ತಾಡಿ ಸುಡುಗಾಡು ಬದುಕಾತ್ರಿ" ಎಂದ.

ಸಿಟ್ಟುಗೊಂಡ ರೈತರು ಸುಡುವ ಬಿಸಿಲಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿನಡೆಸಿದರು. ನಂತರ ಬೃಹತ್ ಪ್ರತಿಭಟನಾಮೆರವಣಿಗೆಯ ಮೂಲಕ ಹೊತ್ತು ತಂದ ಮೆಕ್ಕೆ ಜೋಳವನ್ನು ನಗರದ ಪ್ರಮುಖ ಕೇಂದ್ರವಾದ ರಾಯಲ್ ಸರ್ಕಲ್‌ನಲ್ಲಿ

ಸುರುವಿ, ಪೆಟ್ರೋಲ್‌ಹಾಕಿ, ಪ್ರಾಂತ ರೈತ ಸಂಘದ ಅಧ್ಯಕ್ಷ ವಿ.ಎಸ್. ಶಿವಶಂಕರ್‌ರವರ ಮೂಲಕ ಬೆಂಕಿಹಚ್ಚಿಸಲಾಯ್ತು. ಗುಲ್ಬರ್ಗಾ ರೈತರ ಮೇಲಿನ ಪೊಲೀಸ್ ದೌರ್ಜನ್ಯ ಹಾಗೂ ಕೇಂದ್ರ ರಾಜ್ಯ ಸರಕಾರಗಳ ಆರ್ಥಿಕ ನೀತಿಗಳ ವಿರುದ್ಧ ಮೆಕ್ಕೆಜೋಳ ಖರೀದಿಯಲ್ಲಿ ನಾಟಕವಾಡುತ್ತಿರುವ ಅಧಿಕಾರಿಗಳ ವಿರುದ್ಧ ಘೋಷಣೆಗಳು ಮೊಳಗಿದವು.

ಮಂತ್ರಿ ಮಣಿಗಳಿಗೆ ಏನಾಯ್ತು ಏನೋ ಇದ್ದಕ್ಕಿದ್ದಂತೆ ಎಚ್ಚರವಾದಾಗ ಅವರಕಣ್ಣಿಗೆ ಬಿದ್ದದ್ದು ರೈತರ ಸಂಕಟಗಳಲ್ಲಿ ಹೋರಾಟಗಾರರು, ತಕತಕ ಕುದಿಯಿತ ಅವರ ರಾಜಕೀಯ ಸಂಕಟ. ತಮ್ಮನ ಸಂಕಟವನ್ನು ತಣ್ಣಗಾಗಿಸಲು ಹೆಸರು ಸೂಚಿಸದ ಕೆಲವು ಪೊಲೀಸರಲ್ಲಿ "ಹೇಗಾದರೂ ಮಾಡಿ ಪ್ರಾಂತ ರೈತ ಸಂಘದ ಮುಖಂಡರನ್ನು ಬಂದಿಸಿ ಥಳಿಸಿ" ಎಂದು ಹೇಳಿದ್ದರಂತೆ. ನಂತರ ಗೊತ್ತಾಯ್ತು) ಇದರಲ್ಲಿ ದಿವಾಕರಬಾಬುರವರದೇ ಹೆಚ್ಚಿನ ಮುತುವರ್ಜಿ.

ಸಂಜೆವರೆಗೂ ಧರಣಿನಡೆಸಿದ ರೈತರು ನಗರದ ಎಲ್ಲಾ ಪ್ರಮುಖ ಬೀದಿಗಳಿದರು. ಪ್ರಾಂತರೈತಸಂಘ, ಕೃಷಿಕೂಲಿಕಾರರ ಸಂಘ, ರೈತ ಹೋರಾಟ ಸಮಿತಿ. ರಾಜಕೀಯ ಪಕ್ಷಗಳು ವಿವಿಧ ಸಂಘಗಳ ಮುಖಂಡರು ಎಲ್ಲರೂ ಸೇರಿ ಎಲ್ಲಾ ಅಂಗಡಿ, ವಾಣಿಜ್ಯ, ಮಾಲಿಕರಿಗೆ ಕರಪತ್ರ ಕೊಡುವ ಮೂಲಕ ಬಂದ್‌ಗೆ ಸಹಕರಿಸುವಂತೆ ಮನವಿ ಮಾಡಿಕೊಳ್ಳಲಾಯ್ತು, ಹಾಗೂ ಆಟೋ ಟೇಪ್ ಮೂಲಕ ಬೃಹತ್ ಪ್ರಚಾರವನ್ನು ನಡೆಸಲಾಯ್ತು.

ಫೆ. 13 ರಂದು ಬೆಳಿಗ್ಗೆ ರೈತ ಕೂಲಿಕಾರ ಸಂಘದ ಕಾರ್ಯಕರ್ತರು ನಗರ ಪ್ರಮುಖ ಬೀದಿಗಳಲ್ಲಿ ಬಂದ್ ಯಶಸ್ವಿಗೊಳಿಸುವಂತೆ ಘೋಷಣೆಗಳನ್ನು ಕೂಗುತ್ತಾ ಗುಂಪು ಗುಂಪಾಗಿ ಸಂಚರಿಸಲಾಯ್ತು. ಅರ್ಧ ದಿನವೇ ವಾಹನ ಸಂಚಾರ ಬಂದ್ ಎಂದು ಘೋಷಿಸಿದ್ದರೂ ಕೆ.ಎಸ್. ಆರ್.ಟಿ.ಸಿ. ವಾಹನಗಳು ಚಾಲನೆಯಲ್ಲಿದ್ದವು. ಘೋಷಣೆಗಳನ್ನು ಕೂಗುತ್ತಾ ಬಂದ ಎಲ್ಲಾ ಗುಂಪುಗಳನ್ನು ನಗರದ ಗಾಂಧಿ ಭವನದತ್ತ ಸೇರಿದವು. ಈ ಸಂದರ್ಭದಲ್ಲಿ ಯಾರೋ ರಸ್ತೆಸಾರಿಗೆ ಸಂಸ್ಥೆ ಹಾಗೂ ದಿವಾಕರ ಟ್ರಾವೆಲ್ಸ್ ಬಸ್ಸುಗಳ ಮೇಲೆ ಕಲ್ಲು ತೂರಾಟ ನಡೆಸಿದ್ದು ಗಾಜುಗಳನ್ನು ಒಡೆದುಕೊಂಡ ಬಸ್ಸುಗಳು ಅಲ್ಲೇ ಜಕಂಗೊಂಡವು. ಸ್ವಲ್ಪ ಸಮಯದ ನಂತರ ವಾಹನ ಸಂಚಾರ ಸ್ಥಗಿತಗೊಂಡಿತು. ಬಂದ್ **ಅಂಗವಾಗಿ** ವಾಹನ ಸಂಚಾರ ಸ್ಥಗಿತಗೊಳಿಸುವ ಸಂಬಂಧವಾಗಿ ಪೊಲೀಸರಿಗೂ, ಮುಖಂಡರಿಗೂ ಮಾತಿನ ಚಕಮಕಿಯಾಗಿ ಸ್ವಲ್ಪ ಸಮಯ ಉದ್ರಿಕ್ತ ವಾತಾವರಣ ಉಂಟಾಯ್ತು.

ಗಾಂಧಿಭವನದಿಂದ ಬೃಹತ್ ಮೆರವಣಿಗೆಯನ್ನು ನಡೆಸಲಾಯ್ತು ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನಃ ಗಾಂಧಿ ಭವನದತ್ತ ಸಮಾವೇಶಗೊಂಡಿತು. ನೆರದ ಜನತೆಯನ್ನು ಉದ್ದೇಶಿಸಿ ವಿವಿಧ ಪಕ್ಷಗಳ ಹಾಗೂ ಸಂಘಟನೆಗಳ ಮುಖಂಡರು ಮಾತನಾಡಿದರು. ಸಿ.ಪಿ.ಐ(ಎಂ)ನ ಮುಖಂಡ ರಾದ ಕಾಂ|| ಪ್ರಸನ್ನಕುಮಾರ್ ಪ್ರಾಂತ ರೈತ ಸಂಘದ ಮುಖಂಡರಾದ ಕಾಂ|| ಯು. ಬಸವರಾಜು ಎ.ಎಸ್. ಶಿವಶಂಕರ್, ಹಾಗೂ ಕೃಷಿಕೂಲಿಕಾರ ಸಂಘದ ಮುಖಂಡರಾದ ಪಿ.ಆರ್. ವೆಂಕಟೇಶ್, ಸಿಐಟಿಯು ಮುಖಂಡರಾದ ಹಾವೇಶ್ವರಗೌಡ ಮತ್ತು ಬ್ಯಾಂಕ್ ನೌಕರ ಸಂಘದ ಮುಖಂಡರಾದ ಲೋಕೇಂದ್ರರಾವ್ ರೈತ ಹೋರಾಟ ಸಮಿತಿ ಮುಖಂಡರಾದ ದೊಡ್ಡ ಬಸಪ್ಪ ಹಾಗೂ ಎಸ್.ಎಫ್.ಐನ ಮುಖಂಡರಾದ ಮಂಜುನಾಥರವರು ಮಾತನಾಡಿದರು. ಕೆ.ಪಿ.ಆರ್.ಎಸ್.ನ ಕೆ. ಗಾದಿಲಿಂಗಪ್ಪನವರು ಸ್ವಾಗತವನ್ನು ಮಾಡಿದರು. ಎಲ್ಲಾ ಮುಖಂಡರು ಬಂದ್‌ಗೆ ಬೆಂಬಲ ನೀಡಿದ ಬಳ್ಳಾರಿ ನಾಗರೀಕರನ್ನು ಅಭಿನಂದಿಸಿದರು.

ಬಂದ್ ಅಂಗವಾಗಿ ವಾಹನಸಂಚಾರ ಸ್ಥಗಿತಗೊಂಡಿತ್ತು. ಶಾಲಾಕಾಲೇಜುಗಳು , ಅಂಗಡಿಗಳು, ಸರಕಾರಿ ಕಛೇರಿಗಳು, ಸಿನೆಮಾ ಥಿಯೇಟರ್‌ಗಳು ಬ್ಯಾಂಕ್‌ಗಳು ಮುಚ್ಚಿ ಬಳ್ಳಾರಿ ಸಂಪೂರ್ಣ ಬಂದ್ ಯಶಸ್ವಿಯಾಯಿತು.

ಸಿರುಗುಪ್ಪ : 200 ಜನರ ರಸ್ತೆ ತಡೆ ಎರಡುವರೆ ತಾಸು ನಡೆದಿದ್ದು ಪ್ರಾಂತ ರೈತ ಸಂಘ, ಸಿಐಟಿಯು ಕೃಷಿಕೂಲಿಕಾರರ ಸಂಘದ ನೇತೃತ್ವ, ನಂತರ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆ ನಡೆಸಲಾಗಿದೆ. ಅಡಿವೆಪ್ಪ, ಇ.ಆರ್. ಯಲ್ಲಪ್ಪ, ಸುರೇಶ್ ಹಾಗೂ ತಿಮ್ಮಪ್ಪ ಮಾತನಾಡಿದರು.

ಹೊಸಪೇಟೆ : 150 ಜನರು ಭಾಗವಹಿಸಿದ್ದು ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯ್ತು. ಎಸ್.ಎಫ್.ಐ, ಡಿವೈಎಫ್‌ಐ, ಹಾಗೂ ಸಿಐಟಿಯು ಸಂಘಟನೆಗಳು ಮತ್ತು ಅಂಗನವಾಡಿ ನೌಕರರ ಸಂಘ ಪಾಲ್ಗೊಂಡಿದ್ದವು. ನಂತರ ಸಭೆ ನಡೆಸಲಾಯ್ತು. ಡಿ. ವೆಂಕಟವರ್ಮ, ನಾಗರತ್ನ, ಕರುಣಾನಿಧಿ, ಕೆ. ರಮೇಶ್ ಪಾಲ್ಗೊಂಡು ಮಾತನಾಡಿದರು..

ಬೀದಿ ಬೀದಿಗಳಲ್ಲಿ ಸಿಡಿದ ಪ್ರತಿಭಟನೆಯ ವರದಿಗಳು

ಹಗರಿಬೊಮ್ಮನ ಹಳ್ಳಿ : ತಹಸೀಲ್ದಾರರ ಕಛೇರಿ ಎದುರು ಪ್ರತಿಭಟನಾ ಧರಣಿಯನ್ನು ನಡೆಸಲಾಯ್ತು. 100 ಹೆಚ್ಚು ರೈತರು ಪಾಲ್ಗೊಂಡಿದ್ದರು. ಪ್ರತಿಭಟನೆಗೆ ಜನತಾದಳ(ಯು) ಮುಖಂಡರು ಮತ್ತು ಎಪಿಎಂಸಿ ಹಾಗೂ ಆರ್‌ಎಸ್‌ಎಸ್‌ನ ಅಧ್ಯಕ್ಷರುಗಳು



ಗುಲ್ಬರ್ಗಾ ಪೋಲೀಸರ ದಬ್ಬಾಳಿಕೆಯೊಂದಿಗೆ ಸೆರೆವಾಸ ಅನುಭವಿಸಿದ ವಿರೂಪಾಕ್ಷ ತಡಕಲ್ ಮತ್ತು ಮಹಿಳಾ ಸಂಘಟನೆಯ ಗಂಗಮ್ಮ ಬಿರಾದಾರ

ಬೆಂಬಲವ್ಯಕ್ತಪಡಿಸಿ ಧರಣಿಯಲ್ಲಿ ಪಾಲ್ಗೊಂಡಿದ್ದರು. ತಹಸೀಲ್ದಾರರಿಗೆ ಮನವಿಯನ್ನು ಸಲ್ಲಿಸಿ ಬಂದಿತ ಮುಖಂಡರನ್ನು ಬೇಗನೇ ಬಿಡಬೇಕು. ಕೇಸುಗಳನ್ನು ಹಿಂತೆಗೆಯಬೇಕು. ಗುಲ್ಬರ್ಗಾ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸಬೇಕೆಂದು ಆಗ್ರಹಿಸಲಾಯ್ತು. ಸಭೆಯುನ್ನು ಉದ್ದೇಶಿಸಿ ಡಿವೈಎಫ್‌ಐ ಗಣೇಶ್, ಪ್ರಾಂತ ರೈತ ಸಂಘದ ಜಗನ್ನಾಥ ಮತ್ತು ಅಡಿವೆಪ್ಪ, ಇವರುಗಳು ಮಾತನಾಡಿದರು. ಡಿಎಸ್.ಎಸ್‌ನವರೂ ಬೆಂಬಲ ವ್ಯಕ್ತಪಡಿಸಿದರು.

ಸಂಡೂರು : ತೋರಣಗಲ್ಲಿನಲ್ಲಿ 1 ತಾಸು ರಸ್ತೆ ತಡೆ ನಡೆಸಿದ್ದು 150 ಜನರು ಭಾಗವಹಿಸಿದ್ದರು. ನಂತರ ಕಾರ್ಯಾಲಯದ ಮುಂದೆ ಧರಣಿ ನಡೆಸಲಾಯ್ತು. ಉಪತಹಸಿಲ್ದಾರರಿಗೆ ಮನವಿ ನೀಡಲಾಯ್ತು. ಮನವಿಯಲ್ಲಿ ಗುಲ್ಬರ್ಗಾ ಪೊಲೀಸ್ ದೌರ್ಜನ್ಯವನ್ನು ಖಂಡಿಸಲಾಯ್ತು. ಬಂಧಿತ ಮುಂಖಂಡರನ್ನು ಕೂಡಲೇ ಬಿಡಬೇಕು. ಕೇಸುಗಳನ್ನು ವಜಾಗೊಳಿಸಬೇಕು ಮತ್ತು ಪೊಲೀಸ್ ಅಧಿಕಾರಿಗಳನ್ನು ಕೆಲಸದಿಂದ ವಜಾಮಾಡಬೇಕೆಂದು ಆಗ್ರಹಿಸಲಾಗಿತ್ತು. ನಂತರ ಸಭೆ ನಡೆಸಲಾಯ್ತು. ಸಭೆಯನ್ನು ಉದ್ದೇಶಿಸಿ ಪ್ರಾಂತರೈತ ಸಂಘದ ಅಧ್ಯಕ್ಷ ರಾಮನಗೌಡ ಡಿವೈಎಫ್‌ಐ ಮುಖಂಡ ದೇವಣ್ಣ, ಎಸ್.ಎಫ್.ಐನ ಹಣ್ಮುಗಪ್ಪ ಹಾಗೂ ದೊಡ್ಡಯ್ಯಸ್ವಾಮಿ, ಶಿವಕುಮಾರ, ಪಂಪಾವತಿ ಮಾತನಾಡಿದರು.

ವರದಿ : ಪಿ.ಆರ್. ವೆಂಕಟೇಶ್



ರೈತರ ಮೇಲಿನ ಪೊಲೀಸ್ ದೌರ್ಜನ್ಯ ವಿರೋಧಿಸಿ ಫೆ. 13 ರಂದು ಬೆಂಗಳೂರಿನಲ್ಲಿ ನಡೆದ ಪ್ರದರ್ಶನ

ಪುಟ 9 ನ್ನು ನೋಡಿ

ಎಲ್ಲೆಲ್ಲೂ ಪಿಕೆಟಿಂಗ್, ಬಂಧನ.....

ಫೆಬ್ರವರಿ 5-7 ರವರೆಗೆ ನಡೆದ ರೈತ-ಕೂಲಿಕಾರರ ಚಳುವಳಿಯ ವರದಿಗಳು (ಕಳೆದ ಸಂಚಿಕೆಯಿಂದ)

ಚಿಂತಾಮಣಿಯಲ್ಲಿ ವಿದ್ಯುತ್ ಕಛೇರಿಗೆ ನುಗ್ಗಿದ ರೈತರು, ಕುಷ್ಟಗಿಯಲ್ಲಿ ಇಡೀ ದಿನ ರಸ್ತಾ ರೋಖೋ-ಜಪ್ತಿ ಮಾಡಿದ್ದ ಸಾಮಾನು ರೈತರಿಗೆ ಮರುಹಂಚಿಕೆ, ಅಧಿಕಾರಿಗಳಿಗಾಗಿ ಎಚ್ಚರಿಕೆ, ಹಾನಗಲ್‌ನಲ್ಲಿ ಧರಣಿ, ದ.ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಬಂಧನಕ್ಕೊಳಗಾದ ಸಾವಿರಾರು ಚಳುವಳಿಕಾರರು, ತಾವರಗೇರಾದಲ್ಲಿ.....

ಚಿಂತಾಮಣಿ : ಸುಮಾರು 12 ಸಾವಿರ ಕರ ಪತ್ರಗಳೊಂದಿಗೆ 2 ದಿನ ವಾಹನ ಪ್ರಚಾರದಲ್ಲಿ ಸುಮಾರು 85 ರಿಂದ 90 ಹಳ್ಳಿಗಳಲ್ಲಿ ಪ್ರಚಾರ ಮಾಡಲಾಯಿತು.

ರಸ್ತೆ ತಡೆ ಕಾರ್ಯಕ್ರಮ : ತಾಲೂಕಿನ 5 ಸ್ಥಳಗಳಲ್ಲಿ ರಸ್ತೆ ತಡೆ ಮಾಡುವಂತೆ ತೀರ್ಮಾನಿಸಿ ತಯಾರಿ ನಡೆಸಿ ಪ್ರಚಾರ ಮಾಡಲಾಯಿತು. ನಾವು ತಯಾರಿ ನಡೆಸಿದ 5 ಸ್ಥಳಗಳಲ್ಲದೆ ಇನ್ನು ಹೆಚ್ಚಿಗೆ 3 ಸ್ಥಳಗಳಲ್ಲಿ ರಸ್ತೆ ತಡೆ ಮಾಡುವುದಕ್ಕೆ ಸಾಧ್ಯವಾಗಿದೆ.

ಫೆಬ್ರವರಿ 7ರ ಪಿಕೆಟಿಂಗ್ ಮತ್ತು ಜೈಲ್ ಬರೋ ಕಾರ್ಯಕ್ರಮದಲ್ಲಿ ಸುಮಾರು 300 ರಿಂದ 350 ರೈತರು ಪಾಲ್ಗೊಂಡಿದ್ದರು. ಎಲ್ಲಾ ರೈತರು ಅಂದು ಬೆಳಗ್ಗೆ 11 ಘಂಟೆಗೆ ಪ್ರವಾಸಿ ಮಂದಿರದ ಮುಂದೆ ಜಮಾಯಿಸಿ ನಂತರ ಘೋಷಣೆಗಳನ್ನು ಕೂಗುತ್ತಾ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ವಿದ್ಯುತ್ ಕಛೇರಿಯನ್ನು ಮುತ್ತಿಗೆ ಹಾಕಲಾಯಿತು.

ಪ್ರತಿಭಟನಾಕಾರರು ವಿದ್ಯುತ್ ಕಛೇರಿಗೆ ಹೋಗುವಷ್ಟರಲ್ಲಿ ಕಛೇರಿ ಸಿಬ್ಬಂದಿ ಪೂರ್ತಿ ಕಛೇರಿಗೆ ಬೀಗ ಹಾಕಿ ಕಾರ್ಯ ಕಲಾಪಗಳನ್ನು ನಿಲ್ಲಿಸಿ ಹೊರ ಹೋಗಿದ್ದುದನ್ನು ಕಂಡು ರೈತರು ರೊಚ್ಚಿಗೆದ್ದಿದ್ದಾರೆ. ಕಛೇರಿಯ ಒಳನುಗ್ಗಿದ್ದ ಪೊಲೀಸ್ ಸಿಬ್ಬಂದಿಗಳು ದೌರ್ಜನ್ಯದಿಂದ ವರ್ತಿಸಿದ್ದರಿಂದ ರೈತರಿಗೂ ಮತ್ತು ಪೊಲೀಸರಿಗೂ ಮಾತಿನ ಚಕಮಕಿನಡೆಯಿತು. ಪೊಲೀಸರು ರೈತರನ್ನು ಬಂದಿಸಲು ಮುಂದಾದಾಗ ರೈತರೆಲ್ಲಾ ಉತ್ಸಾಹದಿಂದ "ಎಲ್ಲಿಗಪ್ಪಾ ಎಲ್ಲಿಗೆ ಎಸ್.ಎಂ. ಕೃಷ್ಣ ಜೈಲಿಗೆ'' ಎಂಬ ಘೋಷಣೆಗಳೊಂದಿಗೆ ರೈತರು ಹೊರಟರು. ನಂತರ ಅಲ್ಲಿ ಸೇರಿದ್ದ ರೈತರನ್ನು ಉದ್ದೇಶಿಸಿ ಮಾತನಾಡಿದ ಜಿ.ಸಿ. ಬಯ್ಯಾರೆಡ್ಡಿ, ಅಶ್ವಥರೆಡ್ಡಿ ಮಾತನಾಡಿದ್ದಾರೆ.

ಹಾನಗಲ್: ತಾಲೂಕಿನಲ್ಲಿ ಫೆ. 5 ರಂದು 3-4 ಹಳ್ಳಿಗಳಲ್ಲಿ ರಸ್ತೆ ತಡೆಗಳು ನಡೆದಿವೆ. ಫೆ. 6 ರಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಕೃಷಿಕೂಲಿಕಾರರ ಸಂಘದ ಮುಖಂಡರು, 250 ಕ್ಕೂ ಹೆಚ್ಚು ಜನರು ತಾಲೂಕು ಆಫೀಸಿನ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ತಾಲೂಕು ಆಫೀಸಿನಲ್ಲಿ ಸಹ ತಹಶೀಲ್ದಾರರು ಮತ್ತು ಇತರ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದರು. ಸಾಲ ವಸೂಲಿ, ವಿದ್ಯುತ್ ಕಡಿತ, ಹಸಿರು ಕಾರ್ಡು ಇತ್ಯಾದಿ ಕುರಿತು ನ್ಯಾಯ ಕೊಡಿಸುವಂತೆ ಒತ್ತಾಯಿಸಿದರು.

ದಿ. 7 ರಂದು ಅಂದಾಜು 200 ಜನ ರೈತರು ಮೆರವಣಿಗೆ, ಬಹಿರಂಗ ಸಭೆ ನಡೆಸಿ ತಾಲೂಕು ಆಫೀಸು ಮುತ್ತಿಗೆ ಹಾಕಿ ದಸ್ತಗಿರಿಗೊಳಗಾದರು.

ರಾಣೆಬನ್ನೂರಿನಲ್ಲಿ ಫೆ 6 ರಂದು ರಾಣೆಬೆನ್ನೂರು ಮತ್ತು ತುಮ್ಮಿಕಟ್ಟೆಯ ನೇತಾರರು, 50-60 ಜನರು ನಗರದಲ್ಲಿ ಮೆರವಣಿಗೆ ನಡೆಸಿ, ತಹಶೀಲ್ದಾರರ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ರೈತ ಹೋರಾಟಕ್ಕೆ ಬೆಂಬಲ ವ್ಯಕ್ತ ಮಾಡಿ ಮನವಿ ಸಲ್ಲಿಸಿದರು.

ರೋಣ ತಾಲೂಕಿನಲ್ಲಿ ಫೆ 5 ರಂದು 4 ಹಳ್ಳಿಗಳಲ್ಲಿ ರಸ್ತೆ ತಡೆಗಳು ಯಶಸ್ವಿಯಾಗಿ ನಡೆದಿವೆ. ಫೆ6 ರಂದು ಹುಬ್ಬಳ್ಳಿಯಲ್ಲಿ(ಗಜೇಂದ್ರಗಡ, ಬೆಳವಳಿಕೆ ಇತ್ಯಾದಿ) ಅಂಚೆ ಕಛೇರಿ, ದೂರವಾಣಿ ಕಚೇರಿಗಳನ್ನು ಬಂದ್ ಮಾಡಲಾಗಿದೆ. ಫೆ 7 ರಂದು ರೋಣದಲ್ಲಿ ಸುಮಾರು 300 ಜನ ರೈತರು, ವಿದ್ಯಾರ್ಥಿಗಳು(ಎಸ್‌ಎಫ್‌ಐ), ಯುವಜನರು (ಡಿವೈಎಫ್‌ಐ) ಸಮಾವೇಶಗೊಂಡು ಮೆರವಣಿಗೆ, ಬಹಿರಂಗ ಸಭೆ ಮತ್ತು ತಾಲೂಕು ಕಛೇರಿ ಮುತ್ತಿಗೆ ಹಾಕಿದರು. ಫೆ 12 ರಂದು ತಹಶೀಲ್ದಾರರು 2 ರೈತ ಸಂಘಟನೆಯ ಮುಖಂಡರನ್ನು ವಿವಿಧ ಇಲಾಖೆಯ ಅಧಿಕಾರಿಗಳ ಜೊತೆ ಸಮಸ್ಯೆಗಳನ್ನು(ಸ್ಥಳೀಯ) ಬಗೆಹರಿಸಲು ಸಭೆ ಕರೆದಿದ್ದಾರೆ.

ಧಾರವಾಡದಲ್ಲಿ ಕೆ.ಆರ್.ಆರ್.ಎಸ್‌ನ 100 ಜನ ರೈತರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮತ ಪ್ರದರ್ಶನ ಮಾಡಿದ್ದಾರೆ. ಮನವಿ ಕೊಟ್ಟಿದ್ದಾರೆ. ಸಿಐಟಿಯು/ ಎಐಟಿಯುಸಿ/ ಎಐಐಇಎ ಮುಂತಾದ ಸಂಘಟನೆಗಳು ಸೌಹಾರ್ದ ಬೆಂಬಲ ನೀಡಿವೆ.

ಗದಗದಲ್ಲಿ ಎಸ್‌ಎಫ್‌ಐ/ ಡಿವೈಎಫ್‌ಐ ನವರು ತಮ್ಮ ಬೇಡಿಕೆಗಳೂ ಸೇರಿದಂತೆ ರೈತರ ಬೇಡಿಕೆಗಳನ್ನು ಬೆಂಬಲಿಸಿ ಮೆರವಣಿಗೆ, ಜಿಲ್ಲಾಧಿಕಾರಿಗಳ ಕಛೇರಿ ಪಿಕೆಟಿಂಗ್ ನಡೆಸಿದ್ದಾರೆ.

ಕುಂದಾಪುರ; ಫೆಬ್ರವರಿ 7 ರಂದು ಕುಂದಾಪರದಲ್ಲಿ ರೈತ ಕೃಷಿ ಕೂಲಿಗಾರರು, ಸಾಮೂಹಿಕ ರಸ್ತೆ ತಡೆ ನಡೆಸಿ 1250 ಕ್ಕೂ ಹೆಚ್ಚು ಮಂದಿ ಬಂಧನಕ್ಕೊಳಗಾದರು. ಸಿಐಟಿಯು ಕಾರ್ಯಕರ್ತರು ಬೆಂಬಲವಾಗಿ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಕಾರ್ಮಿಕರು, ವಿದ್ಯಾಥಿ, ಯುವಜನರು ಬೆಂಬಲವಾಗಿ ಭಾಗವಹಿಸಿದ್ದರು.

ಕೇಂದ್ರ ಸರ್ಕಾರದ ಜನವಿರೋಧಿ ನೀತಿ ಹಾಗೂ ವಿನಾಶಕಾರಿ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ರಸ್ತೆ ತಡೆ ಮಾಡಿ ಬಂಧನಕ್ಕೊಳಗಾದರು.

ಪಿಕೆಟಿಂಗ್ ಕಾರ್ಯಕ್ರಮದ ನೇತೃತ್ವವನ್ನು ರೈತ ಸಂಘದ ದ.ಕ ಮತ್ತು ಉಡುಪಿ ಜಿಲ್ಲಾ ಸಮಿತಿಯ ಅಧ್ಯಕ್ಷರು, ರೈತ ಸಂಘದ ತಾಲೂಕು ಅಧ್ಯಕ್ಷರಾದ ಗೋವಿಂದ ಶೆಟ್ಟಿಗಾರ ಮತ್ತು ಕಾರ್ಯದರ್ಶಿಯವರಾದ ಯು.ದಾಸ ಭಂಡಾರಿಯವರು ಹಾಗೂ ಕೆ.ಶಂಕರ್, ವಿ.ನರಸಿಂಹ, ಮಹಾಬಲ ಒಡೇರಹೋಬಳಿ, ಚಂದ್ರಶೇಖರ ಡಿ., ಎಚ್.ನರಸಿಂಹರವರು ವಹಿಸಿದ್ದರು.

ರಾಯಚೂರು ಜಿಲ್ಲೆಯಲ್ಲಿ ಚಳುವಳಿ ವ್ಯಾಪಕವಾಗಿ ನಡೆದಿದೆ. ಗಂಗಾವತಿಯಲ್ಲಿ 5 ಕಡೆ, **ಕುಷ್ಟಗಿ**-3, ದೇವದುರ್ಗ-1, ಲಿಂಗಸನೂರು-1 ಮತ್ತಿತರ ತಾಲೂಕುಗಳ ಒಟ್ಟು 12 ಕಡೆ ರಸ್ತೆ ತಡೆ ನಡೆದಿದೆ. 7 ರಂದು ಕುಷ್ಟಗಿಯಲ್ಲಿ ಸುಮಾರು 1000 ರೈತರು, ಪಂಪ್‌ಸೆಟ್ ಬಳಕೆದಾರರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 4 ತಾಸು ಬಂದ್ ಮಾಡಿದ್ದಾರೆ. ನಂತರ ಕೃಷಿ, ಕೆಪಿಟಿಸಿಎಲ್ ಕಛೇರಿಗೆ ಮುತ್ತಿಗೆ ಹಾಕಿ ಕೆಲವು ಬೇಡಿಕೆ ಈಡೇರಿಸಿಕೊಳ್ಳಲು ಸಾಧ್ಯವಾಗಿದೆ. ಸಾಲಕ್ಕೆಂದು ವಶಪಡಿಸಿಕೊಂಡಿದ್ದ ಭೂ ಅಭಿವೃದ್ಧಿ ಬ್ಯಾಂಕ್‌ಗೆ ಮುತ್ತಿಗೆಹಾಕಿ ಸಾಮಾನು ವಾಪಸು ಪಡೆಯಲಾಗಿದೆ. ತಾವರಗೇರಾದಲ್ಲಿ ಸುಮಾರು 300 ರಷ್ಟು ರೈತರು ಮೆರವಣಿಗೆ, ಪಿಕೆಟಿಂಗ್ ನಡೆಸಿದ್ದಾರೆ. **ಗಂಗಾವತಿ**ಯಲ್ಲಿ 5 ಕಡೆ ರಸ್ತೆ ನಡೆ ನೆಸಿ ಸುಮಾರು 400 ರೈತ-ಕೂಲಿಕಾರರು ಪ್ರತಿಭಟನೆ ನಡೆಸಿದ್ದಾರೆ. 7 ರಂದು 300 ಜನರು ಪಿಕೆಟಿಂಗ್ ನಡೆಸಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದ ಅದರಲ್ಲಿಯೂ ವಿದ್ಯಾರ್ಥಿನಿಯರೇ ಅಧಿಕವಿದ್ದುದು ವಿಶೇಷವಾಗಿದೆ. ಸಿಐಟಿಯು ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ತಾಲ್ಲೂಕು ಆಫೀಸ್-4 ತಾಸು ಪಿಕೆಟಿಂಗ್ ಆಗಿ ಬಂಧನಕ್ಕೊಳಗಾಗಿದ್ದಾರೆ. **ರಾಯಚೂರಿನಲ್ಲಿ** ಪಿಕೆಟಿಂಗ್ ನಡೆದಿದೆ. ಅಂಗನವಾಡಿ, ಗ್ರಾಮ ಪಂಚಾಯತ್ ನೌಕರರೂ ಸಹ ಪಾಲ್ಗೊಂಡಿದ್ದಾರೆ. **ದೇವದುರ್ಗದಲ್ಲಿ** ನೂರಾರು ರೈತ-ಕೂಲಿಕಾರರ ಮೆರವಣಿಗೆ ಪಿಕೆಟಿಂಗ್ ನಡೆದಿದೆ. ಸಿಂಧನೂರಿನಲ್ಲಿ ಮೆರವಣಿಗೆ ಆಗಿದೆ.



ತಾವರಗೇರಾ ರೈತರಿಂದ ರಸ್ತೆ ತಡೆ ಚಳುವಳಿ

5 ಮತ್ತು 6 ರಂದು ಎರಡು ದಿವಸ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿಕೂಲಿಕಾರರ ಸಂಘ ಜಂಟಿ ಹೋರಾಟ ಸಮಿತಿ ತಾವರೆಗೇರಾ ಹೋಬಳಿ ಶಾಖೆ ಸಂಘಟನೆಗಳು ತಾವರಗೇರಾದಲ್ಲಿ ರಸ್ತಾರೋಖೋ ಕಾರ್ಯಕ್ರಮ ನಡೆಸಿದವು.



ರೈತ ಕೃಷಿ ಕೂಲಿಕಾರರ ಸಂಘಟನೆಗೆ ಸೇರಿದ ಸುಮಾರು 300ಕ್ಕೂ ಅಧಿಕ ಜನರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು. ರೈತರು ಬೆಳೆದ ಬೆಳೆಗಳಿಗೆ ಬೆಂಬಲಿತ ಬೆಲೆ ಇಲ್ಲದ್ದನ್ನು ಹಾಗೂ ವಿದ್ಯುತ್ ಬೆಲೆ ಹೆಚ್ಚಳ ವಿರೋಧಿಸಿ ಮತ್ತು ರೈತರ ಪಂಪ್ ಸೆಟ್‌ಗಳಿಗೆ ಮಿಟರ್ ಅಳವಡಿಕೆಯನ್ನು ವಿರೋಧಿಸಿ ಹಾಗೂ ಕೇಂದ್ರ ಸರಕಾರ ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿ ಮತ್ತು ಆಮದು ನೀತಿಯನ್ನು ಈ ರಸ್ತಾರೋಖೋ ನಡೆಸಿದ ದಿನದಂದು ಖಂಡಿಸಲಾಯಿತು.

ತಾವರಗೇರಾ ಹೋಬಳಿ ವ್ಯಾಪ್ತಿಯಲ್ಲಿ ಬರುವ ಲಿಂಗದ ಹಳ್ಳಿ ಸಂಗನಾಳ, ಗಂಗನಾಳ, ವಿರಪಾಪೂರ ನಾರಿನಾಳ, ವಿಠಲಾಪೂರ, ಮುದ್ದಲ ಗುಂದಿ ಹಾಗೂ ಇನ್ನಿತರ ಹಳ್ಳಿಗಳಿಂದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕೂಲಿಕಾರರ ಜತೆ ಸೇರಿ ಹೋರಾಟ ಮಾಡಿದರು. ಸೋಮವಾರ ಬೆಳಿಗ್ಗೆ 8.30ಕ್ಕೆ ಶುರುವಾದ ರಸ್ತಾರೋಖೋ ಕಾರ್ಯಕ್ರಮವನ್ನು 4.00 ಗಂಟೆಗೆ ಹಿಂತೆಗೆದುಕೊಳ್ಳಲಾಯಿತು. ಸುಮಾರು 200ಕ್ಕೂ ಹೆಚ್ಚು ಲಾರಿ ಹಾಗೂ ಬಸ್ಸುಗಳು ನಿಂತಿದ್ದವು. ಕೊನೆಗೆ ಬಹಿರಂಗ ಸಭೆಯನ್ನು ಉದ್ದೇಶಿಸಿ ಕೃಷಿಕೂಲಿಕಾರರ ಸಂಘದ ಅಧ್ಯಕ್ಷರಾದ ಡಿ. ಶಂಕ್ರಪ್ಪ ಮಾತನಾಡಿದರು.

ತಾವರಗೇರಾ ಹೋಬಳಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ರುದ್ರಪ್ಪ ಅಕ್ಕಿ ಇವರು ಹೋರಾಟದ ನೇತೃತ್ವ ವಹಿಸಿದ್ದರು.

ಕೊನೆಯಲ್ಲಿ ಹೋರಾಟ ಹಿಂತೆಗೆದುಕೊಳ್ಳುವ ಮೊದಲು ಕ.ಪ್ರಾ.ರೈ.ಸಂಘದ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ಆರ್.ಕೆ. ದೇಸಾಯಿ ಹಾಗೂ ಕುಷ್ಟಗಿ ತಾಲೂಕಾ ಕೃ.ಕೂ.ಸಂ. ಉಪಾಧ್ಯಕ್ಷನಾದ ಷಣ್ಮುಕಪ್ಪ ಇವರು ಹಾಗೂ ಇನ್ನಿತರೆ ರೈತರು ತಾವರಗೇರಿಗೆ ಆಗಮಿಸಿ ರಸ್ತಾರೋಖೋ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರೈತರು ಹಾಗೂ ಕೃಷಿ ಕೂಲಿಕಾರರನ್ನುದ್ದೇಶಿಸಿ ಮಾತನಾಡಿದರು.

ಬಾಳಪ್ಪ ಪೂಜಾರ ಸಂಗನಾಳ ಮತ್ತು ಚಂದ್ರಶೇಖರ ಗುರಿಕಾರ ಹಾಗೂ ಲಕ್ಷ್ಮಣ ಸಿಂಗ್ ಗಂಡಸಲ ದಲಿತ ಸಂಘರ್ಷ ಸಮಿತಿ ರಾಜ್ಯ ಖಜಾಂಚಿಯವರಾದ ಆನಂದ ಭಂಡಾರಿ ಕ್ರಾಂತಿ ಗೀತೆಗಳನ್ನು ಹಾಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ 1000 ಜನರ ಮೆರವಣಿಗೆ ನಡೆದು ರಸ್ತೆ ತಡೆ ನಡೆಸಿ ಬಂಧನಕ್ಕೊಳಗಾಗಿದ್ದಾರೆ. ಇದರಲ್ಲಿ ರೈತ ಪ್ರಾಂತ ರೈತ ಸಂಘ, ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ ಸಂಘಟನೆಗಳು ಭಾಗವಹಿಸಿವೆ. ಕಾಂ. ಶ್ರೀಯಾನ್, ಮಾಧವ್, ರಾಮಚಂದ್ರ ಉಚ್ಚಿಲ್, ಬಾಲಕೃಷ್ಣ ಶೆಟ್ಟಿ ಮುಂತಾದವರು ನೇತೃತ್ವ ವಹಿಸಿದ್ದಾರೆ.

ಉಡುಪಿಯಲ್ಲಿ ತಾಲ್ಲೂಕು ಕಛೇರಿ ಪಿಕೆಟಿಂಗ್ ನಡೆದು 400 ಜನ ಬಂಧನಕ್ಕೊಳಗಾಗಿದ್ದಾರೆ. ಬೆಳ್ತಂಗಡಿ 350, ಸುಳ್ಯ-1200 ಜನ ಅಂಚೆ ಕಛೇರಿ ಪಿಕೆಟಿಂಗ್ ಮಾಡಿ ಬಂಧಿತರಾಗಿದ್ದಾರೆ. ಒಟ್ಟು ಜಿಲ್ಲೆಯಲ್ಲಿ 3100 ಕ್ಕೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ.

ಕೋಲಾರ ಜಿಲ್ಲೆ: ಬಾಗೇಪಲ್ಲಿಯಲ್ಲಿ ಪ್ರಚಾರ ವ್ಯಾಪಕ ನಡೆದು ಸುಮಾರು 1000 ರೈತರು ರಾಷ್ಟ್ರೀಯ ಹೆದ್ದಾರಿಯನ್ನು ಪಿಕೆಟಿಂಗ್ ಮಾಡಿ ಬಂಧನಕ್ಕೆ ಒಳಗಾಗಿದ್ದಾರೆ. ಕಾಂ. ಶ್ರೀರಾಮರೆಡ್ಡಿ, ವೆಂಕಟಸ್ವಾಮಿ ರೆಡ್ಡಿ, ಚಳುವಳಿಕಾರರನ್ನುದ್ದೇಶಿಸಿ ಮಾತನಾಡಿದ್ದಾರೆ. ಡಿವೈಎಫ್‌ಐ, ಎಸ್‌ಎಫ್‌ಐ ರೈತ, ಕೂಲಿಕಾರ ಸಂಘಗಳು ಭಾಗವಹಿಸಿದ್ದವು.

ಬಂಗಾರಪೇಟೆ: 200 ಜನರ ಮೆರವಣಿಗೆ ನಡೆದಿದೆ. ಪಿಕೆಟಿಂಗ್‌ನಲ್ಲಿ ಯುವಜನ, ಕಾರ್ಮಿಕರು, ರೈತರು ಪಾಲ್ಗೊಂಡಿದ್ದಾರೆ. ಮಾಲೂರಿನಲ್ಲಿ 6 ರಂದು ಬಸ್ ಸ್ಟಾಂಡ್ ಬಳಿ ರಸ್ತೆ ತಡೆ ನಡೆದಿದೆ. ಶಿಡ್ಲಘಟ್ಟದಲ್ಲಿ 200 ಜನ ರೈತರು ಪಿಕೆಟಿಂಗ್ ನಡೆಸಿ, 120 ಜನರ ಬಂಧನವಾಗಿದೆ. ಮೆರವಣಿಗೆಯ ನೇತೃತ್ವವನ್ನು ಕೆ.ಎಂ.ವೆಂಕಟೇಶ್, ರಹಮತ್ ಮುಂತಾದವರು ವಹಿಸಿದ್ದಾರೆ. ಕೋಲಾರದಲ್ಲಿ ನಡೆದ ಪಿಕೆಟಿಂಗ್‌ನಲ್ಲಿ 60 ಜನರ ಬಂಧನವಾಗಿದೆ. ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ ಸಂಘಟನೆಗಳು ಭಾಗವಹಿಸಿವೆ.

ಬಿಜಾಪುರದಲ್ಲಿ ರೈತ ಹೋರಾಟ

ಫೆಬ್ರವರಿ 5,6 ರಂದು ಧರಣಿ ರಸ್ತೆತಡೆ ಹಾಗೆಯೇ 7 ರಂದು ಪಿಕೆಟಿಂಗ್, ಜೈಲ ಭರೋ ಕಾರ್ಯಕ್ರಮ ಬಿಜಾಪುರ ಜಿಲ್ಲೆಯ ಯೋಳಕಿ ಕ್ರಾಸ್ ಗೊಳಸಂಗಿ ರಾಷ್ಟ್ರೀಯ ಹೆದ್ದಾರಿ ಶಿವಣಗಿ, ಬಿಜ್ಜರಗಿ ಮೊದಲಾಗಿ ಹಲವಾರು ಕಡೆ ರಸ್ತೆ ರೋಖೋ ಧರಣಿ ನಡೆಸಲಾಯಿತು. ಪ್ರಾಂತ ರೈತ ಸಂಘ ರಾಜ್ಯ ರೈತ ಸಂಘದವರು ಭಾಗವಹಿಸಿದ್ದರು.

ದಿ. 7 ರಂದು ಬಿಜಾಪುರದಲ್ಲಿ ಬೃಹತ್ ಮೆರವಣಿಗೆ, ಪಿಕೆಟಿಂಗ್ ಬಂದನ ನಡೆಯಿತು.

ಬಿಜಾಪುರದಲ್ಲಿ ಬೃಹತ್ ಮೆರವಣಿಗೆ, ಪಿಕೆಟಿಂಗ್, ಬಂಧನ

ಜೋಳದ ಬೆಲೆ ಕುಸಿತದಿಂದ ಕಂಗಾಲಾಗಿರುವ ಬಿಜಾಪುರ ಜಿಲ್ಲೆಯ ರೈತರು ರ್‍ಯಾಲಿಯ ಕರೆಗೆ ಉತ್ಸಾಹದಿಂದ ಸ್ಪಂದಿಸಿದ್ದಾರೆ. ಕ.ಪ್ರಾಂ. ರೈತ ಸಂಘದ ನೇತೃತ್ವದಲ್ಲಿ ರಾಜ್ಯ ರೈತ ಸಂಘ, ಎ.ಐ.ಕೆ.ಎಸ್. ಸಂಘಟನೆಗಳ ಪ್ರತಿನಿಧಿಗಳ ಸಭೆ ಮೂರು ಸಲ ಸೇರಿ ಕಾರ್ಯಕ್ರಮ ರೂಪಿಸಿತು. ಬಿಜಾಪುರ, ಇಂಡಿ, ಸಿಂದಗಿ, ಬಸವನ ಬಾಗೇವಾಡಿಗಳಲ್ಲಿ ಜೀಪ್ ಜಾಥಾ, ಪ್ರಚಾರ ನಡೆಸಲಾಯಿತು. ಪರಿಣಾಮವಾಗಿ ಹಣ ಸಂಗ್ರಹವಾಯಿತು. ಹೊಸ ಪ್ರದೇಶಗಳಲ್ಲಿ ಹೆಚ್ಚು ಜನ ಸ್ಪಂದಿಸಿದರು.

ವಿಜಾಪುರ: ರೈತರ ಬೇಡಿಕೆಗಳ ಸಲುವಾಗಿ ಬಿಜಾಪುರದಲ್ಲಿ ಈ ನಾಲ್ಕು ರೈತರ ಸಂಘಟನೆಗಳ ಬೃಹತ್ ಮತಪ್ರದರ್ಶನದ ಬಗ್ಗೆ ಪೋಸ್ಟ್ ಆಫೀಸ್ ಪಿಕೆಟಿಂಗ್ ರೈತ ಸಂಘದ ಪಿಕೆಟಿಂಗ್ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ನೂರಾರು ರೈತರು ಮಾತ್ರವಲ್ಲದೆ ಮಹಿಳೆಯರು ಗ್ರಾಮ ಪಂಚಾಯತ್ ನೌಕರರು ವಿದ್ಯಾರ್ಥಿ ಯುವಜನತೆಯು ಭಾಗವಹಿಸಿದ್ದು ಎಪಿಎಂಸಿ ರೈತಸಂಘದ ಆಫೀಸ್‌ನಿಂದ ಹೊರಟ ಮೆರವಣಿಗೆ ಸಿದ್ದೇಶ್ವರ ಗುಡಿ ಗಾಂಧಿ ಚೌಕ್ ಮೂಲಕ ಪೋಸ್ಟ್ ಆಫೀಸ್ ಪಿಕೆಟಿಂಗ್ ನಡೆಸಿ ಅಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸ್ವಾತಂತ್ರ ಹೋರಾಟಗಾರರಾದ ಎನ್.ಕೆ.ಉಪಾಧ್ಯಾಯ, ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಭೀಮಸಿ ಕಲಾದಗಿ, ರಾಜ್ಯ ರೈತ ಸಂಘದ ಅಧ್ಯಕ್ಷ ಬಿ.ಎಸ್.ಜೋಗುರ, ಕಾರ್ಯದರ್ಶಿ ಚಂದ್ರಶೇಖರ ಜಮಾನ, ದುಡಿಯುವ ಜನರ ಹೋರಾಟ ಸಮಿತಿಯ ಅಧ್ಯಕ್ಷರಾದ ಮನ್ನುಸಾಬ ಕಲಾದಗಿ ಹಾಗೂ ರಾಜ್ಯ ರೈತ ಸಂಘದ ಶಿವರಾಜ ಬಿರಾದಾರ ಮೊದಲಾದವರು ಮಾತನಾಡಿದರು.

ಹೈಟೆಕ್ ಆಡಳಿತದಲ್ಲಿ ಹಸುಳೆಗಳ ಅತ್ಯಾಚಾರ

ರಾಜಕೀಯ ಕೊಲೆಗಳು, ವನಿತೆಯರ ಮಾರಾಟ, ಹೆಣ್ಣು ಮಕ್ಕಳಿಗೆ ಹಿಂಸೆ, ಇವುಗಳಿಗೆ ಈಗ ಕುಪ್ರಸಿದ್ಧ ರಾಜ್ಯವಾಗಿದೆ ಆಂಧ್ರ ಪ್ರದೇಶ. ಇದರ ಜೊತೆಯಲ್ಲಿಯೇ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ನಿರಾಕರಿಸುವುದರಲ್ಲಿಯೂ ರಾಜ್ಯ ಬಹಳ ಮುಂದಿದೆ.



ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದ್‌ನ ವಿಷಯವನ್ನು ಕೈಗೆತ್ತಿಕೊಂಡರೆ ಅಲ್ಲಿಯ 50 ಲಕ್ಷ ಜನಸಂಖ್ಯೆಯಲ್ಲಿ ಅನಕ್ಷರಸ್ಥರ ಸಂಖ್ಯೆ 10 ಲಕ್ಷ, ಇದರಲ್ಲಿ ಶೇ. 90 ರಷ್ಟು ಮುಸ್ಲಿಂ ಮಹಿಳೆಯರಾಗಿದ್ದಾರೆ. ಇತರ ಜಿಲ್ಲೆಗಳ ವಿಷಯವನ್ನು ಹೇಳದಿರುವುದು ಉತ್ತಮ. ಚಂದ್ರಬಾಬು ನಾಯ್ಡು ರಾಜ್ಯದ ಮುಖ್ಯಮಂತ್ರಿಯಾದ ನಂತರ ಹೆಣ್ಣುಮಕ್ಕಳ ಮೇಲೆ ಹಲ್ಲೆ ಶೇ. 30ರಷ್ಟು ಹೆಚ್ಚಿದೆ. ಇದರ ಹಿಂದಿರುವ ಪ್ರಧಾನ ವ್ಯಕ್ತಿಗಳು ತೆಲುಗು ದೇಶಂ ಮುಖಂಡರು ಹಾಗೂ ಇವರ ಹಿಂಬಾಲಕ ಸಿಬ್ಬಂದಿ ಪಡೆಯ ಗೂಂಡಾಗಳಾಗಿದ್ದಾರೆ.

ಇತ್ತೀಚೆಗೆ ಆಂಧ್ರದಲ್ಲಿ ಗಿರಿಜನ ಮಹಿಳಾ ವಿದ್ಯಾಲಯದಲ್ಲಿ ನಡೆದ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲಿನ ಅತ್ಯಾಚಾರ ದೊಡ್ಡ ಸುದ್ದಿಯಾಗಿತ್ತು. ವಿಶಾಖಪಟ್ಟಣಂ ಜಿಲ್ಲೆಯ ದಮ್ಮಿಗೂಂಡ ಗಿರಿಜನ ಬಾಲಕಿಯರ ವಿದ್ಯಾಲಯ, ಗೋದಾವರಿ ಜಿಲ್ಲೆಯ ಅಮೀನಾಬಾದ್ ಬಾಲಕಿಯರ ವಿದ್ಯಾಲಯದಲ್ಲಿ ನಡೆದ ಘಟನೆಗಳು ತಲ್ಲಣಗೊಳಿಸುವ ಸುದ್ದಿಯಾಗಿದೆ.

ರಾಜ್ಯ ಸರ್ಕಾರದ ನೇರ ಒಡೆತನ ಹಾಗೂ ಮೇಲ್ವಿಚಾರಣೆಯಲ್ಲಿರುವ ಗಿರಿಜನ ಬಾಲಕಿಯರಿಗಾಗಿ ಮಾತ್ರ ಮೀಸಲಾಗಿದ್ದವು ಮೇಲೆ ಕಾಣಿಸಿರುವ ಎರಡು ಶಾಲೆಗಳು. ಒಳ್ಳೆಯ ಆಹಾರ, ಉತ್ತಮ ಶಿಸ್ತಿಗೆ ಈ ವಿದ್ಯಾಲಯಗಳು ಹೆಸರಾಗಿದ್ದವು. ಇವು ವಸತಿ ಶಾಲೆಗಳಾಗಿದ್ದು ರಜಾ ಸಮಯದಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ತಂದೆ-ತಾಯಿಗಳನ್ನು ಭೇಟಿಯಾಗುವ ಅವಕಾಶವಿತ್ತು. ಬೇರೆ ಹೊರಗಿನ ಯಾವುದೇ ವ್ಯಕ್ತಿಗಳಿಗೆ ಈ ವಸತಿ ಶಾಲೆಗಳ ಒಳಗೆ ಪ್ರವೇಶ ವಿರಲಿಲ್ಲ. ಆದರೆ ಈ ಸರಸ್ವತಿ ಮಂದಿರ ಎಂದು ಹೇಳಿಕೊಳ್ಳುವ ಶಾಲೆಯಲ್ಲಿ ನಡೆದ ಘಟನೆಗಳ ಬಗ್ಗೆ ಇತ್ತೀಚೆಗೆ ಬಹಿರಂಗವಾದ ವಿವರಗಳ ಪ್ರಕಾರ ಈ ಸರಸ್ವತಿ ಮಂದಿರಗಳೊಳಗೆ ರಹಸ್ಯವಾಗಿ ನಡೆದ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲಿನ ಅತ್ಯಾಚಾರದಿಂದಾಗಿ ಬಾಲಕಿಯರು ಗರ್ಭಧರಿಸಿದ ವಿಷಯ ಬಹಿರಂಗವಾದಾಗ ಆಂಧ್ರದ ಹೃದಯವೇ ತಲ್ಲಣಗೊಂಡಿತು. ಈ ಮುಂಚೆ ಈ ವಿದ್ಯಾಲಯಗಳಲ್ಲಿ ಮಹಿಳಾ ಉಪಾಧ್ಯಾಯರನ್ನು ಮಾತ್ರ ನೇಮಿಸಿಕೊಳ್ಳಲಾಗುತ್ತಿತ್ತು. ಆದರೆ ಚಂದ್ರಬಾಬು ನಾಯ್ಡು ಅಧಿಕಾರಕ್ಕೆ ಬಂದ ನಂತರ ಅವರ ಪಕ್ಷದ ಚೋಟಾ ನಾಯಕನೊಬ್ಬನ ಇಚ್ಛೆ ಪ್ರಕಾರ ಶಾಲೆಯಲ್ಲಿರುವ ಎಲ್ಲಾ ಮಹಿಳಾ ಉಪಾಧ್ಯಾಯಿನಿಯರಿಗೆ ಬದಲಾಗಿ ಪುರುಷ ಉಪಾಧ್ಯಾಯರನ್ನು ನೇಮಿಸಲಾಯಿತು. ಈ ನಂತರ ಈ ವಿದ್ಯಾಲಯಗಳಲ್ಲಿ ಇದ್ದ ನಿಯಮ, ಶಿಸ್ತು, ವ್ಯವಸ್ಥೆಗಳನ್ನು ಗಾಳಿಗೆ ತೂರಲಾಯಿತು. ಈ ಎರಡೂ ವಿದ್ಯಾಲಯಗಳು ಕಾಮಕೇಳಿಯ ಕೇಂದ್ರವಾಗಿ ಮಾರ್ಪಾಟಾದವು. ಇದರಲ್ಲಿ ಇತೀ ದೊಡ್ಡ ಖಳನಾಯಕ ದಮ್ಮಿಗೊಂಡ ವಿದ್ಯಾಲಯಗಳಲ್ಲಿ ಹೊಸದಾಗಿ ಅಧಿಕಾರ ವಹಿಸಿಕೊಂಡ ಮುಖ್ಯೋಪಾಧ್ಯಾಯನಾದ ಶ್ರೀ ರಾಮುಲು. ಇವನಿಗೆ ಅಧಿಕಾರ ಕುರ್ಚಿ ದೊರೆತ ಕೂಡಲೇ ವಿದ್ಯಾಲಯದ ವಾರ್ಡನ್ ಹಾಗೂ ಕೆಲವು ಉಪಾಧ್ಯರನ್ನು ತನ್ನ ಜೇಬಿನಲ್ಲಿರಿಸಿಕೊಂಡ. ಜೊತೆಯಲ್ಲಿ ಕಾವಲುಗಾರರನ್ನೂ ತನ್ನ ಜೊತೆ ಮಾಡಿಕೊಂಡ ಅಪ್ರಾಪ್ತ ವಯಸ್ಸಿನ ನಿಷ್ಕಳಂಕ ಗಿರಿಜನ ಬಾಲಕಿಯರನ್ನು ರಾತ್ರಿ ವೇಳೆಯಲ್ಲಿ ಶ್ರೀ ರಾಮುಲು ತನ್ನ ಗೆಳೆಯರ ಬಳಿ ಕರೆದೊಯ್ಯುತ್ತಿದ್ದ. ಈ ಬಾಲಕಿಯರ ಮಾಸಿಕ ಋತು ಸ್ರಾವದ ಬಗ್ಗೆ ದಾಖಲೆ ಇಡತೊಡಗಿದ. ಶ್ರೀ ರಾಮುಲು ತನ್ನ ಸ್ವಂತಕ್ಕೆ ಮಾತ್ರವಲ್ಲ, ತನ್ನ ಮನೆಗೆ ಬರುತ್ತಿದ್ದ ಅತಿಥಿಗಳ ಬಳಿ ಕೂಡ ವಿದ್ಯಾಲಯದ ಬಾಲಕಿಯರನ್ನು ಕರೆದೊಯ್ಯುತ್ತಿದ್ದ. ತಾಯಿ ಹಾಲಿನ ವಾಸನೆ ಇನ್ನೂ ಮರೆಯದಿದ್ದ ಅನೇಕ ಬಾಲಕಿಯರನ್ನು ಹಲವು ರಾಜಕೀಯ ಮುಖಂಡರ ಕಾಮತೃಷೆಗೆ ಬಲಿಗೊಡುತ್ತಿದ್ದ. ನಂತರ 8ನೇ ತರಗತಿಯಲ್ಲಿ ಓದುತ್ತಿದ್ದ ಪ್ರಪಂಚ ಜ್ಞಾನ ಗೊತ್ತಿಲ್ಲದ ಅರ್ಧ ಡಜನ್‌ಗೂ ಹೆಚ್ಚು ಹೆಣ್ಣು ಮಕ್ಕಳು ಗರ್ಭಧರಿಸಿದರು. ಅಮೀನಾಬಾದ್ ಗಿರಿಜನ ವೆಲ್‌ಫೇರ್ ಶಾಲೆಯ ಇನ್ನೊಬ್ಬ ಬಾಲಕಿ ಅಲ್ಲಿಯ ಡೆಪ್ಯುಟಿ ವಾರ್ಡನ್‌ನ ಅತ್ಯಾಚಾರಕ್ಕೊಳಗಾಗಿ 5 ತಿಂಗಳ ಗರ್ಭವತಿಯಾದಳು.

ಈ ಘಟನೆಗಳ ಸುದ್ದಿ ಬೆಂಕಿ ಜ್ವಾಲೆ ತರಹ ಆಂಧ್ರದ ಗ್ರಾಮಗಳಲ್ಲಿ ಹರಡಿದೆ. ಈ ವಿದ್ಯಾರ್ಥಿನಿಯರ ತಂದೆ - ತಾಯಿಂದಿರು, ದೇಶದ ಪ್ರಗತಿಪರ ಹೋರಾಟದಲ್ಲಿರುವ ವಿದ್ಯಾರ್ಥಿ ಸಂಘಟನೆಗಳ ನೇತೃತ್ವದಲ್ಲಿ ವಸತಿ ವಿದ್ಯಾಲಯಕ್ಕೆ ಮುತ್ತಿಗೆ ಹಾಕಿದರು. ಪರಿಸ್ಥಿತಿ ಬಿಗಡಾಯಿಸಿದಾಗ ಜಿಲ್ಲಾಧಿಕಾರಿಗಳು, ಸರ್ಕಾರಿ ಆಸ್ಪತ್ರೆಯ ಮಹಿಳಾ ವೈದ್ಯರು ಸ್ಥಳಕ್ಕೆ ಭೇಟಿ ನೀಡಿ ಈ ಪುಟ್ಟ ಬಾಲಕಿಯರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಇವರಿಂದ ತನ್ನ ಮಾನವತ್ವವನ್ನು ಮರೆಯುವಂತಹ ವಿವರಗಳು ಬಹಿರಂಗವಾದವು. 12 ರಿಂದ 13 ವರ್ಷ ವಯಸ್ಸಿನ ಬಾಲಕಿಯರು ಗರ್ಭಧರಿಸಿದ್ದರು. ಇವರಿಗೆ ಗರ್ಭಪಾತ ಮಾಡಿಸಿದ್ದಲ್ಲಿ ಜೀವಕ್ಕೇ ಅಪಾಯವೆಂದು ವೈದ್ಯರು ಅಭಿಪ್ರಾಯ ನೀಡಿದರು. ವಿಷಯ ತಿಳಿದ ಆಂಧ್ರದ ಎಡ ಪಕ್ಷಗಳು ಘಟನೆಯ ಬಗ್ಗೆ ನಾಯ್ಡು ಸರಕಾರದ ವಿರುದ್ಧ ಹೋರಾಟ ಆರಂಭಿಸಿದಾಗ ಮಾತ್ರವೇ ಈ ರಾಕ್ಷಸೀಯ ಪ್ರವೃತ್ತಿಯ ಉಪಾಧ್ಯಾಯರನ್ನು ಸಸ್ಥಳಕ್ಕೆ ಅಮಾನತ್ತಿನಲ್ಲಿಡುವುದಾಗಿ ಮಾತ್ರ ಚಂದ್ರಬಾಬು ನಾಯ್ಡು ಹೇಳಿದರು. ಈ ಉಪಾಧ್ಯಾಯರು ಚಂದ್ರಬಾಬು ನಾಯ್ಡುವಿನ ತೆಲುಗುದೇಶಂ ಪಕ್ಷದ ಸಂಬಂಧಿಗಳು ಹಾಗೂ ಸ್ನೇಹಿತರು ಆಗಿರುತ್ತಾರೆ. ಇವರನ್ನು ಕೈಬಿಡಲು ಚಂದ್ರಬಾಬು ನಾಯ್ಡು ತಯಾರಾಗಿರುವುದಿಲ್ಲ.

ಇತ್ತೀಚೆಗೆ ಆಂಧ್ರದಲ್ಲಿ ಗಿರಿಜನ ಮಹಿಳಾ ವಿದ್ಯಾಲಯದಲ್ಲಿ ನಡೆದ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲಿನ ಅತ್ಯಾಚಾರ ದೊಡ್ಡ ಸುದ್ದಿಯಾಗಿತ್ತು. ವಿಶಾಖಪಟ್ಟಣಂ ಜಿಲ್ಲೆಯ ದಮ್ಮಿಗೊಂಡ ಗಿರಿಜನ ಬಾಲಕಿಯರ ವಿದ್ಯಾಲಯ, ಗೋದಾವರಿ ಜಿಲ್ಲೆಯ ಅಮೀನಾಬಾದ್ ಬಾಲಕಿಯರ ವಿದ್ಯಾಲಯದಲ್ಲಿ ನಡೆದ ಘಟನೆಗಳು ತಲ್ಲಣಗೊಳಿಸುವ ಸುದ್ದಿಯಾಗಿದೆ.

ಹೈಟೆಕ್ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮುಂದೆ ಒಂದು ದಿನ ಈ ಘಟನೆಗಳಿಗೆ ಸೂಕ್ತ ಪ್ರತಿಫಲ ಖಂಡಿತ ಅನುಭವಿಸಬೇಕಾಗುತ್ತದೆ.

- ಇ.ಕೆ.ಎನ್. ರಾಜನ್

..........ಸಮರಧೀರರು ಜೈಲಿಗೆ

ಪುಟ 7 ರಿಂದ

ಬೀಜಾಪುರ ಬಂದ್

ಕೇಂದ್ರದ ರೈತ ವಿರೋಧಿ ಆಮದು ನೀತಿ ಹಾಗೂ ರಾಜ್ಯ ಸರಕಾರದ ರೈತ ವಿರೋಧಿ ವಿದ್ಯುತ್ ನೀತಿ ವಿರುದ್ಧ ಫೆಬ್ರವರಿ 5,6 ಹಾಗೂ 7 ರಂದು ನಡೆದ ಹೋರಾಟ ವಿಜಾಪುರ ಜಿಲ್ಲೆಯಲ್ಲಿ ಸಂಪೂರ್ಣ ಯಶಸ್ವಿಯಾಯಿತು. ಫೆಬ್ರವರಿ 7 ರಂದು ನಡೆದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ವಿಜಾಪುರದಲ್ಲಿ 150, ಸಿಂದಗಿಯಲ್ಲಿ 240, ಇಂಡಿಯಲ್ಲಿ 150ಕ್ಕೂ ಹೆಚ್ಚು ರೈತರು, ಮಹಿಳೆಯರು, ವಿದ್ಯಾರ್ಥಿ ಯುವಜನರು ಭಾಗವಹಿಸಿ ಪೊಲೀಸರ ಬಂಧನಕ್ಕೆ ಒಳಗಾಗಿ ಬಿಡುಗಡೆ ಹೊಂದಿದರು. ಇದೇ ಸಂದರ್ಭದಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ರೈತ ಮುಖಂಡರ ಮೇಲೆ ಮತ್ತು ಮತ್ತಿತರರ ಮೇಲೆ ನಡೆದ ಪೊಲೀಸ್ ದಬ್ಬಾಳಿಕೆ, ಲಾಠಿ ಚಾರ್ಜ್ ಮಾಡಿದ ಸುದ್ದಿ ಪಿಕೆಟಿಂಗ್ ನಡೆದ ಸ್ಥಳಕ್ಕೆ ಬಂದು ತಲುಪಿತು. ಈ ಘಟನೆಯನ್ನು ಬಲವಾಗಿ ಖಂಡಿಸಲಾಯಿತು.

ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಜನವಾದಿ ಮಹಿಳಾ ಸಂಘದ ಅಧ್ಯಕ್ಷರಾದ ಕೆ. ನೀಲಾ ಹಾಗೂ ಮತ್ತಿತರ ಮೇಲೆ ನಡೆದ ಪೊಲೀಸ್ ದಬ್ಬಾಳಿಕೆ, ಲಾಠಿ ಚಾರ್ಜನ್ನು ಬಲವಾಗಿ ಖಂಡಿಸಿ 13.2.2001 ರಂದು ವಿಜಾಪುರ ಜಿಲ್ಲಾ ಬಂದ್ ಕರೆಯನ್ನು ನೀಡಲಾಯಿತು. ಆದರ ಪೂರಕ ತಯಾರಿಗಾಗಿ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಭೀಮಶಿ ಕಲಾದಗಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಿಪಿಐ(ಎಂ) ಮುಖಂಡ ಎನ್.ಕೆ. ಉಪಾಧ್ಯಾಯ, ಎ.ಐ.ಕೆ.ಎಸ್.ನ ಪ್ರಕಾಶ್ ಹಿಟ್ನಳ್ಳಿ ಹಾಗೂ ಮತ್ತಿತರನ್ನು ಒಳಗೊಂಡ ಹೋರಾಟ ಸಮಿತಿ ವಿಜಾಪುರ ಜಿಲ್ಲಾ ವ್ಯಾಪಾರಿಗಳ ಸಂಘ, ಕಾಯಿಪಲ್ಲೆ ಭಾಗವಾನರ ಸಂಘ, ಹೋಟೆಲ್ ಮಾಲೀಕರ ಸಂಘ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಭೇಟಿಯಾಗಿ ಗುಲಬರ್ಗಾದಲ್ಲಿ ರೈತರ ಮೇಲೆ ನಡೆದ ಪೊಲೀಸರ ದಬ್ಬಾಳಿಕೆ ಕುರಿತು ವಿವರಿಸಿ ಜಿಲ್ಲಾ ಬಂದ್ ಕರೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಿದರು. ಸಾಮೂಹಿಕ ಸಂಘಟನೆಗಳ ಪದಾಧಿಕಾರಿಗಳ ಜೊತೆ ಚರ್ಚೆ ಮಾಡಿ ವಿಜಾಪುರ ಜಿಲ್ಲಾ ಬಂದ್ ಕರೆ ಹೋರಾಟವನ್ನು ರೂಪಿಸಲಾಯಿತು.

13.2.2001 ರಂದು ಜಿಲ್ಲಾ ಬಂದ್ ಕರೆಯ ಮೇರೆಗೆ ಶಾಸ್ತ್ರಿ ಮಾರುಕಟ್ಟೆ, ಸಂಕೀರ್ಣದಲ್ಲಿ ಸಂಪೂರ್ಣ ವ್ಯಾಪಾರ-ವಹಿವಾಟು, ಕಾಯಿಪಲ್ಲೆ ಮಾರುಕಟ್ಟೆ ವಹಿವಾಟು ಸ್ಥಗಿತಗೊಂಡಿತು. ವಿದ್ಯಾರ್ಥಿ ಸಂಘಟನೆ, ಯುವಜನ ಫೆಡರೇಶನ್ ಕಾರ್ಯಕರ್ತರು ನಗರದ ವಿವಿಧ ಭಾಗಗಳಲ್ಲಿ ಸಂಚರಿಸಿ ಧ್ವನಿವರ್ಧಕದ ಮೂಲಕ ಪ್ರಚಾರ ಕಾರ್ಯ ಕೈಗೊಂಡರು. ಇವರ ಹಿಂದೆಯೇ ಪೊಲೀಸರನ್ನು ತುಂಬಿದ ವಾಹನಗಳು ತಿರುಗಾಡಿದವು. ನಾಲ್ಕು ರೈತ ಸಂಘಟನೆಯ, ಜನವಾದಿ ಮಹಿಳಾ ಸಂಘ, ವಿದ್ಯಾರ್ಥಿ ಯುವಜನ ಫೆಡರೇಶನ್, ಸಿಐಟಿಯು ಈಳಗೇರ ಸಂಘದ ನೂರಾರು ಕಾರ್ಯಕರ್ತರೊಂದಿಗೆ ಪದಾಧಿಕಾರಿಗಳು ಎ.ಪಿ.ಎಂ.ಸಿ. ಯಾರ್ಡನಲ್ಲಿರುವ ಪ್ರಾಂತ ರೈತ ಸಂಘ ಆಫೀಸ್ ನಿಂದ ಬೃಹತ್ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದರು. ನಗರದ ಪ್ರಮುಖ ಸ್ಥಳಗಳಲ್ಲಿ ರ್‍ಯಾಲಿಯನ್ನುದ್ದೇಶಿಸಿ ಜನರನ್ನು ಉದ್ದೇಶಿಸಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಿಪಿಐ(ಎಂ) ಮುಖಂಡ ಎನ್.ಕೆ. ಉಪಾಧ್ಯಾಯ ಮಾತನಾಡಿದರು. ಗುಲಬರ್ಗಾದಲ್ಲಿ ರೈತರ ಮೇಲೆ ಹಾಗೂ ರೈತ ಮುಖಂಡರ ಮೇಲೆ ನಡೆದ ಪೊಲೀಸ್ ದಬ್ಬಾಳಿಕೆ, ಲಾಠಿ ಚಾರ್ಜನ್ನು ಬಲವಾಗಿ ಖಂಡಿಸಿದರು. ಇದೇ ಸಂದರ್ಭದಲ್ಲಿ ವಿಜಾಪುರದಲ್ಲಿ ನಡೆದ ಭಿಮಾ ನದಿಗೆ ನೀರು ಹೋರಾಟ ಸಮಿತಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಕೂಡಲೇ ಮಹಾರಾಷ್ಟ್ರ ಸರಕಾರದ ಮೇಲೆ ಒತ್ತಡ ತರಲು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು. ನೆರೆದ ಜನಸ್ತೋಮ ಈ ಹೋರಾಟದ ಕ್ರಮವನ್ನು ಹಾಗೂ ಸಂತಸವನ್ನು ಚಪ್ಪಾಳೆ ತಟ್ಟಿ ವ್ಯಕ್ತಪಡಿಸಿದರು. ಈ ಹಿಂದೆ ನಡೆದ ಬಂದ್ ಕಾರ್ಯಕ್ರಮಗಳಿಗೂ ಹಾಗೂ ಇಂದಿನ ಶಾಂತಿಯುತ ಬಂದ ಕರೆಯನ್ನು ಜನರು ಗುರುತಿಸಿದರು. ತಾವಾಗಿಯೇ ಮುಂದಾಗಿ ಮಾರುಕಟ್ಟೆಯನ್ನು ಬಂದ್ ಮಾಡಿದ ಮೆರವಣಿಗೆಗಾರರಿಗೆ ಚಪ್ಪಾಳೆ ತಟ್ಟಿ ಸಂಪೂರ್ಣ ಬೆಂಬಲವನ್ನು ಸೂಚಿಸಿದರು. ಮೆರವಣಿಗೆಯುದ್ದಕ್ಕೂ ಗುಲಬರ್ಗಾ ಪೊಲೀಸ್ ಹೆಚ್ಚುವರಿ ವರಿಷ್ಠಾಧಿಕಾರಿ ರಾಜಪ್ಪ ಹಾಗೂ ರಾಜ್ಯ ಸರ್ಕಾರಕ್ಕೆ ದಿಕ್ಕಾರದ ಘೋಷಣೆಗಳನ್ನು ನೀಡುತ್ತಾ ಸಾಗಿದರು.

ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಧ್ಯಕ್ಷ ಭೀಮಶಿ ಕಲಾದಗಿ ಮನವಿಪತ್ರವನ್ನು ಸಲ್ಲಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಜನವಾದಿ ಮಹಿಳಾ ಸಂಘದ ಸುರೇಖಾ ರಜಪೂತ, ರಾಜ್ಯ ರೈತ ಸಂಘದ ಚಂದ್ರಶೇಖರ್ ಚುಮನಾಳ, ಬಿ.ಎಸ್. ಜೋಗುರ, ಎಐಕೆಎಸ್‌ನ ಪ್ರಕಾಶ ಹಿಟ್ನಳ್ಳಿ, ವಿದ್ಯಾರ್ಥಿ ಸಂಘಟನೆಯ ಪ್ರೇಮಸಿಂಗ್, ಯುವಜನ ಫೆಡರೇಶನ್‌ನ ಬಸಲಿಂಗ ಕವಾಲಿ, ಸಿಐಟಿಯುನ ವ್ಹಿ.ಎಂ.ಸೊನ್ನದ, ಈಳಗೇರ ಸಂಘದ ಆರ್.ಎಚ್. ಕಲಾದಗಿ ಎನ್.ಕೆ. ಭೀಮಕಲಾದಗಿ ಮುಂತಾದ ಮುಖಂಡರುಗಳು ಮಾತನಾಡಿದರು.

ವಿಜಾಪುರದ ಬಂದ್ ಕಾರ್ಯಕ್ರಮ ಸಂಪೂರ್ಣವಾಗಿ ಯಶಸ್ವಿಯಾಗಿತ್ತು. ಸಂಜೆ 5 ಗಂ. ಯವರೆಗೆ ಯಾವುದೇ ವ್ಯಾಪಾರ ವಹಿವಾಟು ನಡೆಯಲಿಲ್ಲ. ವಿಜಾಪುರ ಸಮಸ್ತ ವ್ಯಾಪಾರಿ ಬಂದುಗಳು ಹೋಟೆಲ್ ಮಾಲಿಕರು, ಕಾಯಿಪಲ್ಲೆ ಭಾಗವಾನರು ಮುಂತಾದವರು ಸಂಪೂರ್ಣ ಸಹಕಾರ ನೀಡಿದರು.

ಇಂಡಿಯಲ್ಲಿ 13.2.2001 ವಿದ್ಯಾರ್ಥಿ ಸಂಘಟನೆಯ ಹಾಗೂ ನಾಲ್ಕು ರೈತ ಸಂಘಟನೆಗಳು ಪ್ರತಿಭಟನಾ ಮೆರವಣಿಗೆ ನಡೆಸಿದರು. ಸಿಂದಗಿ ಮತ್ತು ಬಸವನ ಬಾಗೇವಾಡಿಯಲ್ಲಿ ನಾಲ್ಕು ರೈತಸಂಘಟನೆಗಳು ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿದ್ದರು.

ಬೀದರ್ ಬಂದ್

ಯುವಜನ ಹಾಗೂ ರೈತ ನಾಯಕರುಗಳ ಮೇಲೆ ಹಲ್ಲೆ ನಡೆಸಿ, ಬಂದಿಸಿ, ಜೈಲಿಗೆ ತಳ್ಳಿದ್ದನ್ನು ಪ್ರತಿಭಟಿಸಿ ಇಡೀ ಬಿದರ್ ನಗರ ಸಂಪೂರ್ಣ ಬಂದ್ ಆಚರಿಸಿತು. ಇಂದು ಅಪೂರ್ವ ಪ್ರತಿಕ್ರಿಯೆ. ಅಂದು ವಾಹನಗಳ ಸಂಚಾರವಿರಲಿಲ್ಲ. ಯಾವುದೇ ಕಚೇರಿ, ಅಂಗಡಿಗಳು ಕಾರ್ಯನಿರ್ವಹಿಸಲಿಲ್ಲ. ಬಂದ್ ಆರಂಭಗೊಳ್ಳುತ್ತಿದ್ದಂತೆ ನಗರದಲ್ಲಿ ಮೆರವಣಿಗೆ ನಡೆಯಿತು. ವಕೀಲರಾದ ಸಂಗ್ರಾಮ ರೈತ ಮುಖಂಡ ಮನೋಹರ್, ಮುಂತಾದವರು ನೇತೃತ್ವ ವಹಿಸಿದ್ದರು.

ರಾಯಚೂರು : ರಾಯಚೂರು ನಗರ ಸಹ ಬಂದ್‌ನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಿತು. ಇಡೀ ರಾಯಚೂರಿನಲ್ಲಿ ಯಾವುದೇ ವಹಿವಾಟು ವಡೆಯಲೇ ಇಲ್ಲ. ಅಲ್ಲದೇ ರಾಯಚೂರು, ಕೊಪ್ಪಳ ಜಿಲ್ಲೆಗಳ ತಾಲೂಕುಗಳಲ್ಲಿಯೂ ಸಹ ಮೆರವಣಿಗೆ, ಪ್ರತಿಭಟನಾ ಪ್ರದರ್ಶನ ನಡೆಸಿ ಚಳುವಳಿಕಾರರ ಸೌಹಾರ್ದತೆ ವ್ಯಕ್ತಪಡಿಸಿತು.

ಗುಲ್ಬರ್ಗಾಜಿಲ್ಲೆ: ಗುಲ್ಬರ್ಗಾ ಹೊರತುಪಡಿಸಿ (ಬಂದ್‌ಗೆ ವಿನಾಯಿತಿ ನೀಡಿತ್ತು) ಆಳಂದ, ಶಹಪುರ, ಸುರಪುರ, ಯಾದಗಿರಿ, ಅಫ್ಜಲಪುರ, ಸೇಡಂ, ತಾಲೂಕುಗಳಲ್ಲಿ ಬಂದ್ ಯಶಸ್ವಿಯಾಗಿ ನಡೆಯಿತು.

ಮುಖ್ಯಮಂತ್ರಿ ಎದುರು ಪ್ರದರ್ಶನ

ಅಂದು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಗುಲ್ಬರ್ಗಾ ನಗರಕ್ಕೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಬಂದಿದ್ದರು. ಸಭೆ ನಡೆದ ಗುಲ್ಬರ್ಗಾ ವಿಶ್ವವಿದ್ಯಾಲಯದ ಸಭಾಂಗಣದ ಎದುರು ರೈತ-ಕೂಲಿಕಾರರು, ವಿದ್ಯಾರ್ಥಿ ಯುವಜನ-ಮಹಿಳೆಯರು ತೀವ್ರ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರತಿಭಟನಾ ನೇತೃತ್ವವನ್ನು ರೈತಮುಖಂಡರಾದ ಜಿ.ಪಿ. ಬಯ್ಯಾರೆಡ್ಡಿ, ಚಿತ್ತಪ್ಪ ಆನೆಗುಂಡಿ, ನೀಲಾ. ಕೆ, ಗಂಗಮ್ಮ ಮುಂತಾದವರು ವಹಿಸಿದ್ದರು. ನಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

........ಕರ್ನಾಟಕದ ರಾಜಕೀಯ

ಪುಟ 6 ರಿಂದ

ಹಾಗೂ ಸಂಯುಕ್ತ ರಂಗದ ಭಾಗವಾಗಿ ಕೇಂದ್ರ ಸರ್ಕಾರದ ಭಾಗವಾಗಿ ಹೊಸ ಆರ್ಥಿಕ ನೀತಿಗಳಿಗೆ ತೋರಿದ ಸ್ವಾಗತ, ಸಹಕಾರದ ನಿಲುವಿಗೆ ಬದಲಾಗಿ ಅವುದು ನೀತಿಗಳಿಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಸ್ವಾಗತಾರ್ಹ. ಬೆಂಗಳೂರಿನಲ್ಲಿ ದೇವೇಗೌಡರು, ವಿ.ಪಿ.ಸಿಂಗ್ ಹಾಗೂ ಹರಿಕಿಷನ್ ಸಿಂಗ್ ಸುರ್ಜಿತ್ ಭಾಗವಹಿಸಿದ್ದ ಬಹಿರಂಗ ಸಭೆ ಈ ದಿಶೆಯಲ್ಲಿ ಪ್ರಮುಖ ತಿರುವು. ನಂತರದ ದಿನಗಳಲ್ಲಿ ಜನತಾದಳ ಜ್ಯಾತ್ಯಾತೀತ ನಾಯಕರು ಭಾಗವಹಿಸಿದ ಸಭೆಗಳು, ಪತ್ರಿಕಾಗೋಷ್ಠಿಗಳಲ್ಲಿ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ದೇವೇಗೌಡರು ದೇಶದ ಹಲವ ಕಡೆಗಳಲ್ಲಿ ರೈತರ ರ್‍ಯಾಲಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಪ್ರತಿಭಟನೆಗಳಲ್ಲಿಯು ಭಾಗವಹಿಸುತ್ತಿದ್ದಾರೆ. ಇದು ಕರ್ನಾಟಕದಲ್ಲಿರುವ ಜನತಾದಳದ ಕಾರ್ಯಕರ್ತರು, ಹಾಗೂ ಅವರ ಹಿಂದಿರುವ ರೈತ ಸಮೂಹದ ಮೇಲೆ ಪ್ರಭಾವ ಬೀರಿದೆ. ರಾಜ್ಯದಲ್ಲಿ ತೀವ್ರಗೊಂಡ ರೈತರ ಅತೃಪ್ತಿ ಹಾಗೂ ಫೆ 5-7 ರ ಚಳುವಳಿಯ ನಂತರದ ದಿನಗಳಲ್ಲಿ ರಾಜ್ಯದ ಹಲವಾರು ಜಿಲ್ಲಾ ಕೇಂದ್ರಗಳಲ್ಲಿ ರೈತರ ಬಹಿರಂಗಸಭೆಗಳನ್ನು ನಡೆಸುವ ಮೂಲಕ ರಾಜ್ಯದಲ್ಲಿಯೂ ಬೆಂಬಲದ ಜನಸಮೂಹವನ್ನು ಸಂಪರ್ಕಿಸಿ ಆಮದು ನೀತಿಯ ವಿರೋಧ ಹಾಗೂ ಸಬ್ಸಿಡಿ ಕಡಿತದ ಬಗ್ಗೆ ಮಾತನಾಡುತ್ತಿದೆ.

ಬಿಜೆಪಿಯ ಬುಡಕ್ಕೆ ಸಂಚಕಾರ

ರೈತರ ಅತೃಪ್ತಿ ವ್ಯಕ್ತವಾಗುತ್ತಾ ಹೊರಟಂತೆ ಇದು ತನ್ನ ಬುಡಕ್ಕೆ ಸಂಚಕಾರ ತರುತ್ತದೆ ಎಂದು ಮೊದಲು ಎಚ್ಚರಗೊಂಡದ್ದು ಬಿಜೆಪಿ. ಅಡಿಕೆಯ ಬೆಲೆ ಕುಸಿದಂತೆ ಅಡಿಕೆ ಬೆಳೆಗಾರರ ಮಧ್ಯೆಯೇ ಬೇರು ಬಿಟ್ಟಿದ್ದ ಬಿಜೆಪಿ ಅಡಿಕೆ ಬೆಲೆ ಕುಸಿತಕ್ಕೆ ಕಾರಣರಾಜ್ಯ ಸರ್ಕಾರ ಎಂದು ಬೊಬ್ಬೆ ಆರಂಭಿಸಿತು. ಬಿಜೆಪಿಯ ಕೇಂದ್ರ ಮಂತ್ರಿ ಧನಂಜಯಕುಮಾರ್‌ರವರೇ ಈ ಆಪಾದನೆಗಳನ್ನು ಮಾಡಿದರು. ನಂತರ ಅನಿವಾರ್ಯವಾದಾಗ ಅಡಿಕೆಯ ಮೇಲಿನ ಆಮದು ಸುಂಕವನ್ನು ಏರಿಸುತ್ತೇವೆಂದು ಆಶ್ವಾಸನೆ ನೀಡಿದರು. ಅಡಿಕೆಯ ಮೇಲಿನ ಆಮದು ಸುಂಕವನ್ನು ಏರಿಸಿದ ವಾಜಪೇಯಿಯವರಿಗೆ ಅವರ ಅನುಪಸ್ಥಿತಿಯಲ್ಲಿಯೇ ಧನ್ಯವಾದ ಹೇಳುವ ಸಮಾರಂಭಗಳು ನಡೆದವು. ಬ್ಯಾನರುಗಳು ತೂಗಾಡಿದವು. ಆದರೆ ನೆಲಕಚ್ಚಿದ ಅಡಿಕೆಯ ಬೆಲೆ ಮೇಲಕ್ಕೇಳಲೇ ಇಲ್ಲ. ನಂತರ ತೆಂಗಿನ ಬೆಲೆ, ರಬ್ಬರ್ ಬೆಲೆ, ಹುಬ್ಬಳ್ಳಿಯ ಈರುಳ್ಳಿ (ಉಳ್ಳಾಗಡ್ಡಿ) ಬೆಲೆ, ಕಾಫಿ ಬೆಲೆ, ಮೆಕ್ಕೆ ಜೋಳ, ಭತ್ತಗಳ ಬೆಲೆ ಕುಸಿದಂತೆ ಒಂದು ಕಡೆ ಇದಕ್ಕೆ ಕಾರಣ ರಾಜ್ಯ ಸರ್ಕಾರ, ರೈತರ ಹಿತವನ್ನು ರಕ್ಷಿಸುವುದು, ಮಾರುಕಟ್ಟೆಯಲ್ಲಿ ಪ್ರವೇಶ ಮಾಡಿ ಬೆಂಬಲ ಬೆಲೆ ಖಾತರಿಗೊಳಿಸುವುದು ರಾಜ್ಯ ಸರ್ಕಾರದ ಜವಾಬುದಾರಿ, ರಾಜ್ಯ ಸರ್ಕಾರ ಮಾರಾಟ ತೆರಿಗೆ ಹಾಕಿರುವುದರಿಂದಲೇ ಈ ಸಮಸ್ಯೆ ಎಂದೆಲ್ಲಾ ವಾಗ್ದಾಳಿ ಆರಂಭಿಸಿದರು. ರೈತರ ಅತೃಪ್ತಿ ಇನ್ನೂ ಪ್ರಕೋಪಕ್ಕೆ ಏರಿದ ಮೇಲೆ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ್ದು ಕಾಂಗ್ರೆಸ್ಸೇ, ಆದ್ದರಿಂದ ಅವರೇ ಇದಕ್ಕೆ ಹೊಣೆ ಎಂಬಂತೆ ಮಾತಾನಾಡಲಾರಂಭಿಸಿದರು.

ಕಾಂಗ್ರೆಸ್ ರಾಜ್ಯ ಸರ್ಕಾರ

ಕೇಂದ್ರದಲ್ಲಿ ಪ್ರಮುಖ ವಿರೋಧ ಪಕ್ಷವಾದ ಹಾಗೂ ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಬೆಲೆ ಕುಸಿತಗಳಾದ ಹಲವು ಕಾಲದ ನಂತರವೂ ರೈತರು ಮೆರವಣಿಗೆ ಮತ್ತು ರ್‍ಯಾಲಿಗಳನ್ನು ನಡೆಸಿ ಈ ಪ್ರಶ್ನೆಯನ್ನು ಹಲವು ಭಾರಿ ಎತ್ತಿದಾಗಲೂ ಬಾಯಿ ಬಿಚ್ಚಲಿಲ್ಲ. ನಂತರ ರೈತರಿಂದ ತನ್ನಿಂದ ತಾನೇ ಪ್ರತಿಭಟನೆಗಳು ಆರಂಭವಾದ ಮೇಲೆ ಕಾಂಗ್ರೆಸ್ ಸರ್ಕಾರ ಮಾರಾಟ ಕೇಂದ್ರಗಳನ್ನು ತೆರೆಯುತ್ತೇವೆ, ಬೆಂಬಲ ಬೆಲೆಗೆ ಕೊಳ್ಳುತ್ತೇವೆ ಎಂಬ ಮಾತುಗಳನ್ನು ಆರಂಭಿಸಿತು. ಅಲ್ಪಸ್ವಲ್ಪ ಹಣ ಬಿಡುಗಡೆ ಮಾಡಿ ಕೊಳ್ಳುವುದನ್ನು ಆರಂಭಿಸಿತು. ಈ ಕೊಳ್ಳುವಿಕೆಯನ್ನು ಸರಿಯಾಗಿ ನಡೆಸಲಿಲ್ಲವೆಂದು ನಾಲ್ಕಾರು ಉನ್ನತ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಮತ್ತೆ ಯಾವುದೇ ವಿಚಾರಣೆ, ಶಿಕ್ಷೆಯಿಲ್ಲದೆ ಕೆಲವೆ ವಾರಗಳ ನಂತರ ಅಮಾನತ್ತು ಆಜ್ಞೆಯನ್ನು ಹಿಂತೆಗೆದುಕೊಳ್ಳುವ ನಾಟಕವನ್ನು ಆಡಿತು.

ಫೆ 5-7 ರ ಚಳುವಳಿಯಲ್ಲಿ ರೈತರ ಅತೃಪ್ತಿ ತೀವ್ರವಾಗಿ ಪ್ರಕಟಗೊಳ್ಳಲಾರಂಭಿಸಿದ ಮೇಲೆ ವಿಶ್ವ ವಾಣಿಜ್ಯ ಸಂಸ್ಥೆಯ ಒಪ್ಪಂದವನ್ನು ಪರಾಮರ್ಶೆಗೆ ಒಳಪಡಿಸಬೇಕೆಂಬ ವಿನಂತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿತು. ನಂತರ 6 ಜಿಲ್ಲೆಗಳ ಬಂದ್ ಹಾಗೂ ಪ್ರತಿಭಟನೆಗಳು ಯಶಸ್ವಿಯಾದ ಮೇಲೆ ವಿಶ್ವ ವಾಣಿಜ್ಯ ಸಂಸ್ಥೆಯೊಂದಿಗಿನ ಒಪ್ಪಂದವನ್ನು ವಿಮರ್ಶೆ ಮಾಡುವುದಕ್ಕಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಒಂದು ಸಭೆಯನ್ನೇ ಕರೆಯಬೇಕೆಂದು ಒತ್ತಾಯಿಸಿದರು. ಹಲವು ಕಡೆ ರೈತರ ಸಮಸ್ಯೆ ಬಗ್ಗೆ ಮಾತನಾಡಲಾರಂಭಿಸಿದರು. ಇಷ್ಟೆಲ್ಲದರ ನಡುವೆಯೂ ಕೂಡ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಆಮದು ನೀತಿಯ ಬಗ್ಗೆ, ಪ್ರಮಾಣಾತ್ಮಕ ನಿರ್ಬಂಧ ಗಳನ್ನು ತೆಗೆದು ಹಾಕಿದ ಬಗ್ಗೆ ಚಕಾರ ಎತ್ತಲಿಲ್ಲ. ಹೇಗೆ ಎತ್ತುತಾರೆ? ರಾಜ್ಯ ಸರ್ಕಾರದ ಹಣಕಾಸು ಹಾಗೂ ಯೋಜನೆಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರದ ಹಂಗಿನಲ್ಲಿ ಬಿದ್ದಿಲ್ಲವೇ? ಇವರು ವಿಶ್ವಬ್ಯಾಂಕಿನೊಡನೆ ಮಾಡಿಕೊಂಡ ಹತ್ತಾರು ಸಾವಿರ ಕೋಟಿ ರೂ.ಗಳ ಸಾಲವನ್ನು ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿಸಿಕೊಳ್ಳುವುದು ಹೇಗೆ? ತಾವು ಎತ್ತುವುದಿರಲಿ ತಮ್ಮ ಸಂಪುಟದ ಸಚಿವರುಗಳು ಕೂಡಾ ಈ ಬಗ್ಗೆ ಒಂದೇ ಒಂದು ಮಾತು ಆಡಲು ಬಿಟ್ಟಿಲ್ಲ ಎಂಬುದು ಈಗಾಗಲೇ ಸರ್ವವಿಧಿತ ಸಂಗತಿ. (ಕೆಲವು ತಿಂಗಳು ಹಿಂದೆಯೇ ಕೃಷಿ ಮಂತ್ರಿ ಜಯಚಂದ್ರ/ಸಣ್ಣ ಕೈಗಾರಿಕಾ ಮಂತ್ರಿ ಕಾಶಪ್ಪನವರ್ ಜಾಗತೀಕರಣ ಮುಂತಾದ



ನೀತಿಗಳಿಂದ ಕೃಷಿ ಹಾಗೂ ಕೈಗಾರಿಕೆಗಳಿಗೆ ಅಪಾಯವಿದೆ ಎಂದು ಸುರಿದ ಕೂಡಲೇ ರಾಜಿನಾಮೆ ಕೊಡಿ ಎಂದು ಬೆದರಿಸಿದ್ದನ್ನು ನೆನಪಿಸಿಕೊಳ್ಳಿ)

ಕಾಂಗ್ರೆಸ್ ಪಕ್ಷ ಮತ್ತು ಅದರ ಮತದಾರರು

ದೆಹಲಿಯಲ್ಲಿ ಕಾಂಗ್ರೆಸ್ ಇದೇ ಪ್ರಶ್ನೆಯ ಮೇಲೆ ಲೋಕಸಭೆಯ ಕಲಾಪವೇ ನಡೆಯದಂತೆ ಮಾಡಲು ಇತರ ಪಕ್ಷಗಳ ಜೊತೆಗೂಡಿದರೂ, ಬಿಜೆಪಿ ಕೂಟದ ಭಾಗಿಗಳಾದ ಚಂದ್ರಬಾಬು ನಾಯ್ಡು ಕೂಡ ಈ ನೀತಿಗಳ ಬಗ್ಗೆ ಹೂಂಕರಿಸಿದರೂ ಕೂಡ ಮುಖ್ಯಮಂತ್ರಿ ಕೃಷ್ಣ ಕೇಂದ್ರ ಸರ್ಕಾರದ ವಿರುದ್ಧ ಸೊಲ್ಲೆತ್ತಲಿಲ್ಲ. ಕಾಂಗ್ರೆಸ್ ಪಕ್ಷದ ಕರ್ನಾಟಕ ಸಮಿತಿಯೂ ಚಕಾರ ಎತ್ತಲಿಲ್ಲ.

ಕಾಂಗ್ರೆಸ್ ಪಕ್ಷ ಸುಮ್ಮನಿದೆಯೆಂದು ಕೃಷಿಯ ಈ ತೀವ್ರ ಬಿಕ್ಕಟ್ಟು ಕಾಂಗ್ರೆಸ್ಸಿಗರನ್ನು ಹಾಗೆ ಬಿಡುತ್ತದೆಯೇ? ಇಲ್ಲ. ಕಾಂಗ್ರೆಸ್ ಸರ್ಕಾರವೇ ವಸೂಲಿ ಮಾಡುತ್ತಿರುವ ವಿದ್ಯುತ್ ಬಾಕಿಯಿಂದಲಾದರೂ ಕಾಂಗ್ರೆಸ್‌ಗೆ ಮತ ಹಾಕಿದ ರೈತರಿಗೆ ವಿನಾಯಿತಿ ದೊರಕುತ್ತದೆಯೆ? ಇಲ್ಲ.

ಆದ್ದರಿಂದಲೇ ರಾಜ್ಯ ಅನೇಕ ಕಡೆಗಳಲ್ಲಿ ಕಾಂಗ್ರೆಸ್‌ನ ಮತದಾರರು, ಸ್ಥಳೀಯ ನಾಯಕರೂ ಕೂಡ ಕೆಂಬಾವುಟ-ಹಸಿರು ಬಾವುಟಗಳ ಹಿಂದೆ ಚಳುವಳಿಗೆ ಧುಮುಕಿದ್ದಾರೆ. ಭಾಗವಹಿಸಬಾರದೆಂದು ತಾಕೀತು ಬಂದಾಗಲೂ ನಾನು ಮೊದಲು ರೈತ ನಂತರ ಕಾಂಗ್ರೆಸ್ಸಿನವರು ಎಂದು ಉತ್ತರ ಕೊಟ್ಟಿದ್ದಾರೆ.

ಜನತಾದಳ(ಯು)ಗೂ ಬಾಯಿ ಬಂತು

ಇನ್ನೂ ಈ ಎಲ್ಲಾ ಪಕ್ಷಗಳ ನಂತರ ಕೊನೆಯಲ್ಲಿ ಜನತಾ ದಳ(ಯು) ನ ಸರದಿ. ರಾಜ್ಯದ ರೈತಾಪಿ ಜನತೆ ಇಂತಹ ಸಂಕಷ್ಟದಲ್ಲಿ ಮುಳುಗಿದ್ದರೂ ಕೂಡ ಹಾಲಿ ಕೃಷಿ ಮಂತ್ರಿಯೇ ಬಾಯಿ ತೆಗೆಯುವ ಧೈರ್ಯ ಮಾಡಿದರೂ ಕೂಡ ಮಾಜಿ ಕೃಷಿ ಮಂತ್ರಿ ಹಾಗೂ ಹಾಲಿ ಜನತಾದಳ (ಯು) ಅಧ್ಯಕ್ಷ ಭೈರೇಗೌಡರು ಬಾಯಿತೆಗೆಯಲಿಲ್ಲ. ಅವರು ಹೇಗೆ ಬಾಯಿ ತೆರೆಯಲು ಸಾಧ್ಯ? ತಮ್ಮ ವರಿಷ್ಟ ನಾಯಕ ರಾಮಕೃಷ್ಣ ಹೆಗಡೆಯವರೇ ಆರಂಭಿಸಿದ ಆಮದು ಪ್ರವಾಹ ಅಲ್ಲವೇ ಇದು? ಮತ್ತು ತಾವೇ ಕೃಷಿ ಮಂತ್ರಿಗಳಾಗಿ ರೂಪಿಸಿದ ಕೃಷಿ ನೀತಿಯ ಜಾರಿಯಲ್ಲವೇ ಇದು? ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಕೂಟದ ಭಾಗವಾಗಿ ಹೇಗೆ ಅದರ ವಿರುದ್ಧ ಮಾತನಾಡುತ್ತಾರೆ? ಆದ್ದರಿಂದ ರೈತ ಚಳುವಳಿಯ ಮೊದಲ ಎರಡು ಹಂತಗಳಲ್ಲಿ ಬಾಯಿಗೆ ಬೀಗ ಹಾಕಿಕೊಂಡವರಂತೆ ಸುಮ್ಮನಿದ್ದರು. ರೈತರ ಪರಿಸ್ಥಿತಿ ಕೆಡುತ್ತಾ ಬಂದಂತೆ ಉಳಿಯುವುದೇ ಕಷ್ಟ ಎಂಬ ಸ್ಥಿತಿಯಲ್ಲಿ ಮೊದಲು ರಾಜ್ಯ ಸರ್ಕಾರದ ಮೇಲೆ ಆರೋಪ ಮಾಡಿದರು ನಂತರ ಕೇಂದ್ರ ಸರ್ಕಾರದ ವಿರುದ್ಧ ವೂ ಮಾತನಾಡಿದರು.

ಇದಕ್ಕೆ ಆಮದು ನೀತಿಯ ಹರಿಕಾರ ರಾಮಕೃಷ್ಣ ಹೆಗಡೆಯವರೂ ಧನಿ ಕೂಡಿಸಿದರು ಎಂಬುದು ಪರಿಸ್ಥಿತಿಯ ತೀವ್ರತೆಯನ್ನು ವ್ಯಕ್ತಮಾಡುತ್ತದೆ. ಕರ್ನಾಟಕದ ಆರು ಜಿಲ್ಲೆಗಳು ಬಂದ್ ಆಚರಿಸಿದ ಫೆ 13 ಕ್ಕೆ ಒಂದು ದಿನ ಮೊದಲು ಫೆ 12 ರಂದು ಅದೇ ಪ್ರದೇಶದಲ್ಲಿ ಬಹಿರಂಗ ಸಭೆ ಮಾಡಿ ಆಮದು ನೀತಿಯನ್ನು, ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರವನ್ನು ಖಂಡಿಸಿದರು. (ಆದರೆ ನಡೆಯುತಿದ್ದ ರೈತ ಚಳುವಳಿಯ ಬಗ್ಗೆ ಹಾಗೂ ಪೋಲೀಸರ ದಾಳಿಯ ಬಗ್ಗೆ ಮತ್ತೆ ಎತ್ತಲಿಲ್ಲ ಎಂಬುದು ಬೇರೆ ಮಾತು)

ವಿಶಾಲವಾದ ಹೋರಾಟವೇ ರಾಜಕೀಯ ಧ್ರುವೀಕರಣದ ಆಧಾರ

ಹೀಗೆ ರಾಜ್ಯದಲ್ಲಿನ ಕೃಷಿ ಬಿಕ್ಕಟ್ಟು ಅದರ ವಿರುದ್ಧ ರೈತರ ತೀವ್ರ ಅತೃಪ್ತಿ ಹೆಚ್ಚು ಹೆಚ್ಚು ಜನರನ್ನು ಚಳುವಳಿಗೆ ಸೆಳೆಯುತ್ತಾ ರಾಜ್ಯದ ರಾಜಕೀಯದಲ್ಲಿ ತನ್ನ ಛಾಪನ್ನು ಮೂಡಿಸಲಾರಂಭಿಸಿದೆ. ರೈತರ ಅತೃಪ್ತಿಯ ಒತ್ತಡಕ್ಕೊಳಗಾಗಿ ರಾಜ್ಯದ ರಾಜಕೀಯ ಪಕ್ಷಗಳು ತಮ್ಮ ನಿದ್ದೆಯಿಂದ ಎಚ್ಚೆತ್ತು ಕಣ್ಣು ಬಿಡಲಾರಂಭಿಸಿದೆ. ರಾಜಕೀಯದಲ್ಲಿ ಚಲನೆ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ರಾಜಕೀಯದಲ್ಲಿ ಬರಬಹುದಾದ ಧ್ರುವೀಕರಣ, ತಿರುವುಗಳು, ರೈತರ ಅತೃಪ್ತಿ ಮತ್ತಷ್ಟು ವಿಶಾಲ ರೂಪ ಪಡೆಯುವುದರೊಂದಿಗೆ ಹಾಗೂ ರಾಜ್ಯದ ಸಮಗ್ರ ಜನತೆಯ ಅತೃಪ್ತಿ ಚಳುವಳಿಯಾಗಿ ರೂಪು ಪಡೆಯುವುದರೊಂದಿಗೆ ನೇರ ಸಂಬಂಧವಿದೆ. ರಾಜ್ಯದ ರಾಜಕೀಯದಲ್ಲಿ ಪ್ರಜಾಸತ್ತಾತ್ಮಕ ಪ್ರಗತಿಪರ ದಿಕ್ಕನ್ನು ಬಯಸುವರೆಲ್ಲರೂ ಜನತೆಯ ಚಳುವಳಿಯನ್ನು ಕಟ್ಟುವುದರಲ್ಲಿ ಮತ್ತಷ್ಟು ಆಳವಾಗಿ ತೊಡಗಬೇಕಾಗಿದೆ.



ಹೊಸಕೋಟೆ ರೈತರಿಂದ ಫೆ. 7 ರಂದು ರಸ್ತೆ ತಡೆ

ಕೊಡಗಿನಲ್ಲಿ ಪ್ರತಿಭಟನೆ

ಕೊಡಗು : ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿ ಕೃಷಿ ಉತ್ಪನ್ನಗಳ ತೀವ್ರ ಬೆಲೆ ಕುಸಿತ, ವಿದ್ಯುತ್ ದರ ಏರಿಕೆ, ಅಗತ್ಯವಸ್ತುಗಳ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಫೆಬ್ರವರಿ 7ರಂದು ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಸಿ.ಐ.ಟಿಯು ಮತ್ತು ಡಿ.ವೈ.ಎಫ್.ಐ, ಸಂಘಟನೆಯ ವತಿಯಿಂದ ಪ್ರತಿಭಟನೆಯನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಆದಿನ ಬೆಳಿಗ್ಗೆ 11-30 ಗಂಟೆಗೆ ಮಡಿಕೇರಿಯ ಗಾಂದೀಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಸಂಘಟನೆಯ ಕಾರ್ಯಕರ್ತರು ಸದಸ್ಯರು ನಗರದಲ್ಲಿ ಮೆರವಣಿಗೆ ನಡೆಸಿ ಬಳಿಕ ಕೋಟೆ ಆವರಣದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಜಿಲ್ಲೆಯ ಹಿರಿಯ ಕಾರ್ಮಿಕ ಮುಖಂಡರಾದ ಡಾ|| ಪಿ. ಆರ್. ಅಸ್ರಣ್ಣ ಕಾಂ| ಪಿ. ವೀರಾಸ್ವಾಮಿ, ಹೆಚ್ ಎಂ. ಕಾಳಯ್ಯ, ಎನ್.ಡಿ. ಕುಟ್ಟಪ್ಪ ಡಿವೈಎಫ್ಐನ ಕಾಂ| ಪೀಟರ್ ಲೋಬೋ, ಹೊಸಮನೆ ವಸಂತಕುಮಾರ್ , ಭರತ್ ಬಿಎಸ್. ರಮಾನಾಥ್ ಇವರುಗಳು ವಹಿಸಿದ್ದರು. ಈ ಪ್ರತಿಭಟನೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು ಮತ್ತು ಇತ್ತೀಚಿನ ವರ್ಷಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಇದೊಂದು ಗುರುತಿಸುವಂತಹ ಹೋರಾಟ ಕಾರ್ಯಕ್ರಮವಾಗಿತ್ತು.

ಈ ಹೋರಾಟದ ನಂತರ ಪೊಲೀಸರು ಹೆಚ್.ಎಂ. ಕಾಳಯ್ಯನವರ ಮೇಲೆ ಮೊಕದ್ದಮೆ ಹೂಡಿ ಚಳುವಳಿಯನ್ನು ದಮನಿಸಲು ಮುಂದಾಗಿದ್ದಾರೆ. ಜಿಲ್ಲೆಯ ಎಲ್ಲಾ ಪತ್ರಿಕೆಗಳೂ ಈ ಹೋರಾಟವನ್ನು ಶ್ಲಾಘಿಸಿದ ನಂತರದ ಬೆಳವಣಿಗೆ ಇದು.

ಹೆಚ್. ಕಾಳಯ್ಯ.



ಮಡಿಕೇರಿಯಲ್ಲಿ ಡಿವೈಎಫ್ಐ, ಸಿಐಟಿಯು ವತಿಯಿಂದ ನಡೆದ ಜಿಲ್ಲಾ ಮಟ್ಟದ ರ್‍ಯಾಲಿ

ಇಸ್ರೇಲ್ ಪ್ರಧಾನ ಮಂತ್ರಿಯಾಗಿ ಶರೋನ್ ಆಯ್ಕೆ

ಇಸ್ರೇಲ್ ನ ಹಿಂದಿನ ಪ್ರಧಾನಿ ಎಹುದ್ ಬರಾಕ್ ಪ್ರಧಾನ ಮಂತ್ರಿಗೆ ನಡೆದ ಚುನಾವಣೆಯಲ್ಲಿ



ಎಹುದ್ ಬರಾಕ್

ಪರಾಭವ ಹೊಂದಿದ್ದಾರೆ. ಅವರ ಪ್ರತಿಸ್ಪರ್ಧಿ ಬಲಪಂಥಿಯ ಲಿಕುಡ್ ನಾಯಕ್ ಅರೋಲ್ ಶರೋನ್ ಪ್ರಚಂಡ ಬಹುಮತ ದಿಂದ ಆಯ್ಕೆಯಾಗಿದ್ದಾರೆ. ಇತ್ತಿಚೀನ ಇಸ್ರೇಲಿ ಮತದಾನಗಳಲ್ಲಿ ಇದು ಅತ್ಯಂತ ಕಡಿಮೆ ಮತದಾನವಾದರೂ, (ಆದ್ದರಿಂದ ಇದು ನಿಜವಾದ ಜನಮತವಲ್ಲ ಎಂದು ವಾದಿಸಬಹುದಾದರೂ), ಈ ಚುನಾವಣಾ ಫಲಿತಾಂಶ ಪ್ಯಾಲೆಸ್ಟೇನ್ ಸಮಸ್ಯೆಗೆ ಶಾಂತಿಯುತ ಪರಹಾರದ ಸಾಧ್ಯತೆಗೆ ತೀವ್ರ ಪೆಟ್ಟು ನೀಡಿದೆ. ಪಾರ್ಲಿಮೆಂಟರಿ ಬಹುಮತ ಇಲ್ಲದ ಶರೋಸ್ ಸರ್ಕಾರ ಬಹುಕಾಲ ಬಾಳದೆ ಇರಬಹುದು. ಶರೋನ್ ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗುತ್ತಿದ್ದಂತೆ ಹಿಂಸಾಚಾರ ಪುನ: ಭುಗಿಲೆದ್ದಿದೆ. ಅರಬ್ ಜಗತ್ತಿನಲ್ಲಿ ಶಾಂತಿಗೆ ಇದ್ದ ಬದ್ದ ನಿರೀಕ್ಷೆಗಳೆಲ್ಲ ನಂದಿ ಹೋಗಿವೆ. ರಾಷ್ಟ್ರೀಯ ವಿಮೋಚನೆ ಹೋರಾಟಗಳಿಗೆ ಮತ್ತು ಪ್ರಗತಿಪರ ಶಕ್ತಿಗಳಿಗೆ ಇದೊಂದು ಕೆಟ್ಟ ಸುದ್ದಿ.

ಇಸ್ರೇಲಿ ಪ್ರಧಾನಿಯಾಗಿ ಶರೋನ್ ಆಯ್ಕೆ ಅರಬ್ ಜಗತ್ತಿನಲ್ಲಿ ಷಾಕ್ ತಂದಿದೆ. ಇಸ್ರೇಲಿನಲ್ಲಿ ಪ್ರಧಾನಮಂತ್ರಿಯನ್ನು ನೇರವಾಗಿ ಚುನಾವಣೆ ನಡೆಸುವ ವ್ಯವಸ್ಥೆಯಿದ್ದು, ಹಿಂದಿನ ಪ್ರಧಾನಿ ಬರಾಕ್ ಪಾರ್ಲಿಮೆಂಟಿನಲ್ಲಿ ಬಹುಮತ ಕಳೆದು ಕೊಂಡದ್ದರಿಂದ ಮರು ಚುನಾವಣೆ ಅಗತ್ಯವಾಗಿತ್ತು. ಸಾಮಾನ್ಯವಾಗಿ ಪಾರ್ಲಿಮೆಂಟ್ ಮತ್ತು ಪ್ರಧಾನ ಮಂತ್ರಿ ಚುನಾವಣೆ ಜೊತೆಗೆ ನಡೆಯುತ್ತವೆ. ಈ ಎರಡು ಚುನಾವಣೆಗಳು ಒಟ್ಟಿಗೆ ನಡೆಯದಿದ್ದಾಗ ಜನರಿಗೆ ಆಶಕ್ತಿ ಇರುವುದಿಲ್ಲ. ಈಗಿನ ಪಾರ್ಲಿಮೆಂಟಿನಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಇಲ್ಲದಿರುವುದರಿಂದ ಆಯ್ಕೆಯಾದ ಯಾವುದೇ ಪ್ರಧಾನಮಂತ್ರಿ ಸುಭದ್ರ ಸರ್ಕಾರ ನಡೆಸಲು ಸಾಧ್ಯ

ಪ್ಯಾಲೆಸ್ಟೈನ್ ಸಮಸ್ಯೆ ಶಾಂತಿಯುತ ಪರಿಹಾರಕ್ಕೆ ಆಘಾತ

ವಿಲ್ಲ ಎಂದು ಮತದಾರ ಉದಾಸೀನ ತೋರಿಸಿದ್ದು ಈ ಪ್ರದೇಶದ ಶಾಂತಿಗೆ ಮುಳುವಾಗಿದೆ. ಅಲ್ಲದೇ ಶಾಂತಿ ಮಾತುಕತೆ ವಿಫಲವಾದ ಹಿನ್ನಲೆಯಲ್ಲಿ ಹಿರಿಯ ಪ್ರಧಾನಿ ಬರಾಕ್ ಗೆ ಹೋಲಿಸಿದರೆ, ಈಗಿನ ಪ್ರಧಾನಿಯಾದವನು ಪ್ಯಾಲೆಸ್ಟೈನರ ಜೊತೆ ಶಾಂತಿ ಒಪ್ಪಂದದ ಬದ್ಧವೈರಿ. ಬರಕ್ ಲೇಬರ್ ಪಕ್ಷದ ಬೆಂಬಲ ಪಡೆದಿದ್ದು ಕನಿಷ್ಟ ಪ್ಯಾಲೇಷ್ಟೆನರ ಜೂತೆ ಮಾತುಕತೆಗೆ ತಯಾರಿದ್ದನು. ಅವರ ಸರ್ಕಾರ ಬಿದ್ದಾಗ, ಹೋರಾಟ, ಶಾಂತಿ ಮಾತುಕತೆ ಪ್ರಮುಖ ಹಂತದಲ್ಲಿತ್ತು. ಹಿಂದಿನ ಚುನಾವಣೆಯಲ್ಲಿ



ಶರೂನ್ ಪ್ರಧಾನಿಯಾಗಿ ಆಯ್ಕೆಯಾದ ನಂತರ ಪ್ಯಾಲೆಸ್ಟೈನಲ್ಲಿ ಭುಗಿಲೆದ್ದ ಹಿಂಸಾಚಾರ

ಪ್ಯಾಲೇಸ್ಟೈನ್ ಜೊತೆ ಶಾಂತಿಯ ವೇದಿಕೆಯ ಮೇಲೆ ಗೆದ್ದು ಬಂದಿದ್ದ ಬರಾಕ್ ಶಾಂತಿ ತರುವಲ್ಲಿ ಸೋತದ್ದಕ್ಕೆ ಇಸ್ರೇಲಿ ಮತದಾರರು ಬರಾಕ್ ರನ್ನು ಧಂಡಿಸಿದರೆ? ಬರಾಕ್ ಸೋಲಬಹುದು ಎಂಬ ಅಂದಾಜಿದ್ದರು, ಅವರ ಭಾರಿ ಪರಾಭವ ರಾಜಕೀಯ ವಲಯಗಳಲ್ಲಿ ಅಚ್ಚರಿ ತಂದಿದೆ.

ಬಸ್ಲೋ ಪ್ರಕ್ರಿಯೆ ಸ್ತಬ್ಧ

ಕಿಂಟನ್‌ರ ನಿರಂತರ ಒತ್ತಡ ಪ್ಯಾಲೆಸ್ಟೈನರ ನಾಯಕ **ಯೂಸರ್ ಅರಾಫತ್ ಮುಕ್ತನೀತಿಯು** ಇದ್ದಾಗ್ಯೂ ಯಾವುದೇ ಶಾಂತಿ ಒಪ್ಪಂದ ಸಾಧ್ಯವಾಗಲಿಲ್ಲ. ಹಿಂದಿನ ಯಾವುದೇ ಪ್ರಧಾನಿಗಿಂತಲೂ ಶಾಂತಿ ಮಾತುಕತೆಗೆ ಹತ್ತಿರವಾಗಿದ್ದರೂ, ಬರಾಕ್



ಅರೋಲ್ ಶರೋನ್

ಶಾಂತಿ ಸ್ಥಾಪಿಸುವಲ್ಲಿ ಸೋತರು. ಇಸ್ರೇಲ್ ಎಲ್ಲಾ ಜ್ಯೂಗಳ ದೇಶವಾದರೂ ಉದಾರವಾದಿ, ಪ್ರಗತಿಪರ ಶಕ್ತಿಗಳನ್ನು ಬಹುಸಖ್ಯಾತ ಜನತೆ ಬೆಂಬಲಿಸುತ್ತಿದ್ದರೂ ಬಲಪಂಥಿಯ ಝಿಯೊನಿಸ್ಟ ಶಕ್ತಿಗಳು ಪ್ರಬಲವಾಗಿವೆ. ಇಸ್ರೇಲ್‌ನಲ್ಲಿ ಬರುವ ಯಾವುದೇ ಸರ್ಕಾರ, ಪ್ರಧಾನಿ, ಶಾಂತಿ ಪ್ರಿಯ ಜನತೆ ಮತ್ತು ಈ ಝಿಯೋನಿಸ್ಟ್ ಶಕ್ತಿಗಳೆರಡನ್ನೂ ತೃಪ್ತಿ ಪಡಿಸಲು ಹೋಗಿ ಯಾರನ್ನು ತೃಪ್ತಿಪಡಿಸಲಾಗದೆ ಮಧ್ಯದಲ್ಲಿ ಬೀಳುವುದೇ ಹೆಚ್ಚು. ಬರಾಕ್‌ಗೂ ಅದೇ ಗತಿಯಾಗಿದೆ. ಶರೋನ್ ಅರಬರ ನಡುವೆ ಕುಖ್ಯಾತ ರಾಗಿದ್ದರೂ, ಭಾರಿ ಬಹುಮತ 'ದಿಂದ ಆಯ್ಕೆಯಾದದ್ದು ಈ ಹಿನ್ನೆಲೆಯಲ್ಲಿ.

ಸುಮಾರು 10 ವರ್ಷದಿಂದ ಆರಂಭವಾದ ಒಸ್ಲೊ ಶಾಂತಿ ಪ್ರಕ್ರಿಯೆ ನಿಂತಂತಾಗಿದೆ. ಹೊಸ ಪ್ರಧಾನಿ ಈ ಪ್ರಕ್ರಿಯೆ ನಿಂತಿದೆ ಎಂದು ಘಂಟಾ ಘೋಷವಾಗಿ ಹೇಳಿದ್ದಾರೆ.

ಈ ಶಾಂತಿ ಒಪ್ಪಂದದ ಪ್ರಕಾರ ಇಸ್ರೇಲ್ ಮಾಡಬೇಕಾಗಿದ್ದ ಯಾವುದನ್ನೂ ಮಾಡಲಿಲ್ಲ. ಆಕ್ರಮಿಸಿದ ಪ್ರದೇಶಗಳನ್ನು ಬಿಟ್ಟುಕೊಡುವುದು, ಜೆರೋಸಿಲಂ ಬಗ್ಗೆ ಮಾತುಕತೆ ಇತ್ಯಾದಿ ಯಾವುದನ್ನೂ ಪಾಲಿಸದೆ, ಪ್ಯಾಲೇಸ್ಟೈನರನ್ನು ಪುನ: ಸಶಸ್ತ್ರ ಹೋರಾಟಕ್ಕೆ ತಳ್ಳಿದೆ.

ಇಸ್ರೇಲಿನ ಈ "ಸಾಮ್ರಾಜ್ಯಶಾಹಿ" ಧೋರಣೆಗೆ ಪ್ರತಿಭಟನೆ ಭುಗಿಲೆದ್ದು ಹಿಂಸಾತ್ಮಕವಾದಾಗ, ಪೂರ್ಣ ಹಿಂಸೆ ನಿಲ್ಲಿಸದೆ ಮಾತುಕತೆ ಸಾಧ್ಯವಿಲ್ಲ ಎಂಬ ನೆಪದಲ್ಲಿ ಇಸ್ರೇಲ್ ಜಾರಿಕೊಳ್ಳುತ್ತಾ ಬಂದಿದೆ. ಪ್ಯಾಲೆಸ್ಟೈನ್ನರ ತಾಳ್ಮೆಗೆಡುತ್ತಾ ಬಂದಿದೆ. ಇಸ್ರೇಲ್ "ಒಸ್ಲೊ ಒಪ್ಪಂದದ ಪ್ರಕಾರ ತನ್ನ ಮಾತು ಪಾಲಿಸದಿದ್ದರೆ, ಸ್ವತಂತ್ರ ಪ್ಯಾಲೆಸ್ಟೈನ್ ಘೋಷಿಸುವುದಾಗಿ ಹೇಳುತ್ತಾ ಬಂದಿದ್ದಾರೆ. ಆದರೆ ಹಾಗೆ ಮಾಡಲಿಲ್ಲ. ಪರಿಸ್ಥಿತಿ ಹದಗೆಡುತ್ತಾ ಬಂದಿದ್ದು, ಶರೋನ್ ಆಯ್ಕೆ ಅತ್ಯಂತ ತೀವ್ರ ಬಿಕ್ಕಟ್ಟಿಗೆ ಸಿಕ್ಕಿದೆ.

ಎರಡನೇ 'ಇಂತಿಫಾದ್'

'ಅಮೆರಿಕನ್ ಸಾಮ್ರಾಜ್ಯಶಾಹಿ 'ಪ್ರಾಮಾಣಿಕ ಬ್ರೋಕರ್' ನ ಪಾತ್ರ ಮಾಡುವಂತೆ ಕಂಡರೂ, ಅದು ಇಸ್ರೇಲ್ ಜೂತೆ ಷಾಮೀಲಾಗಿ ಪ್ಯಾಲೆಸ್ಟೈನ್ನರ ಮೇಲೆ ಅನ್ಯಾಯಯುತ ಶಾಂತಿ ಹೊರಿಸಲು ಪ್ರಯತ್ನಿಸಿದೆ. ಪ್ಯಾಲೇಸ್ಟೈನ್ನರ ಸಹನೆಯ ಕಟ್ಟೆ ಹೊಡೆದಿದ್ದು, ಎರಡನೇ 'ಇಂತಿಫದಾ ಆರಂಭವಾಗಿದೆ.' ಇಂತಿಫದಾ ಎಂದರೆ ಕಲ್ಲು ಕವಣೆಗಳಿಂದ ನಿಶಸ್ತ್ರ ಜನತೆ ಇಸ್ರೇಲ್ ಸೈನ್ಯವನ್ನು ಎದುರಿಸುವುದು, ಪ್ರತಿರೋಧಿಸುವುದು. ಮೊದಲನೆಯ ಇಂತಿಫದಾ ಮೂರು ವರ್ಷಕಾಲ ನಡೆದು ಶಾಂತಿಯ ಭರವಸೆಯ ಅರಾಫತ್ ಅದನ್ನು ಆರಿಸಿದ್ದರು. ಆದರೆ ಎರಡನೇ ಇಂತಫದಾವನ್ನು ಆರಿಸುವು ಅಥವಾ ಅದರ ತಾರ್ಕಿಕ ನಿರ್ಣಯಕ್ಕೆ ಒಯ್ಯುವ ತಾಕತ್ತು ಅರಾಫತ್ ಗೆ ಉಳಿದಿಲ್ಲ. ಅರಾಫತ್‌ನ ವರ್ಚಸ್ಸು ಕುಂದುತ್ತಿದೆ. ಎಲ್ಲಾ ಆಕ್ರಮಿತ ಅರಬ್ ಪ್ರದೇಶಗಳ ವಾಪಸಾತಿ, ಪ್ಯಾಲೇಸ್ಟೈನ್ನರ ನಿರಾಶ್ರಿತರು ತಾಯ್ನಾಡಿಗೆ ಮರಳುವುದು ಜೆರೂಸೆಲಂ ಯಾವ ರಾಜಧಾನಿಯಾಗಬೇಕು. ಎರಡು ಧರ್ಮಗಳ ಪವಿತ್ರವಾದ ಪ್ರಾರ್ಥನಾ ಸ್ಥಳಗಳ ಬಗ್ಗೆ ವಿವಾದ ಇವು ಇನ್ನೂ ಇತ್ಯರ್ಥವಾಗದೆ ಉಳಿದವು.

- ಶರತ್ ಚಂದ್ರ

ಕರ್ನಾಟಕದಲ್ಲಿ ಕಳೆದ ವಾರ.............

ಪುಟ 3 ರಿಂದ

ಈ ಘಟನೆ ಅತ್ಯಂತ ಹೇಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ವಿದ್ವೇಶದ ಹಾದಿ ಖಂಡನಾರ್ಹ, ಶಿಕ್ಷಾರ್ಹ. ಇಂದಿನ ರಾಜಕೀಯ ತಲುಪಿರುವ ಕೆಳಮಟ್ಟದ ಅಪಾಯಕಾರಿ ಹಂತವನ್ನು ಇದು ತೋರಿಸುತ್ತದೆ. ಎಲ್ಲಾ ಪಕ್ಷಗಳು ಇದನ್ನು ಒಕ್ಕೊರಲಿನಿಂದ ವಿರೋಧಿಸಬೇಕು.

ಮಹಿಳಾ ಮೀಸಲಾತಿ ಮಸೂದೆ: ಯಜಮಾನಿಕೆ ಬಿಡಲೊಲ್ಲದ ತರ್ಕ

'ಏನೇ ಬರಲಿ, ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾಗದಿರಲಿ' ಎಂದು ದೆಹಲಿಯ ಪಾರ್ಲಿಮೆಂಟಿನಲ್ಲಿ ರಂಗು ರಂಗಿನ ಆಟ ಆಡಿದ ವಿಲ್ಲಾರಖಮಿನ ಜನ ಬೆಂಗಳೂರಿನಲ್ಲಿಯೂ ತಮ್ಮ ವಾದ ವೈಖರಿಯನ್ನು ಎಗ್ಗಿಲ್ಲದೇ ಹರಿಬಿಟ್ಟು, ಅಂತರಂಗದೊಳಗಿನ ಮಹಿಳಾ ವಿರೋಧಿ ನಿಲುಮೆಯನ್ನು ಜಾರಿಕೊಂಡಿದ್ದಾರೆ. ಮಹಿಳಾ ಮೀಸಲಾತಿಯಲ್ಲೇ ವಿವಿಧ ಜಾತಿಗಳಿಗೂ ಮೀಸಲಾತಿ ಮೊದಲು ನಿರ್ಧಾರವಾಗಲಿ ಎಂಬುದು ಅಂದು ಮಾತನಾಡಿದ ಬಹುತೇಕ ಎಲ್ಲಾ ಅತಿರಥ ಮಹಾಶಯರ ಖಚಿತ ನಿರ್ಧಾರ. ಜನತಾದಳ (ಎಸ್)ನ ಸಿದ್ದರಾಮಯ್ಯ, ಕಾಂಗ್ರೆಸ್‌ನ ಜಾಲಪ್ಪ, ಮಾಜಿ ಪೋಲೀಸ್ ಅಧಿಕಾರಿ, ಹಾಲಿ ರಾಜಕಾರಣಿ ಕೋದಂಡರಾಮಯ್ಯ, ಉಗ್ರಪ್ಪ ಎಲ್ಲರದು ಒಂದೇ ಹಾಡು. ಜಾಲಪ್ಪನವರಂತೂ ಈ ಚರ್ಚೆಯನ್ನೇ 10 ವರ್ಷ ಮುಂದೆ ಹಾಕುವ ಅದ್ಭುತ ಸಲಹೆ ನೀಡಿದರು. ಹೇಗೋ ಮಸೂದೆಯಂತೂ ಬರೋದಿಲ್ಲ, ಆದರೆ ಮಹಿಳಾ ಮತಗಳನ್ನು ಮರೆಯುವ ಹಾಗೆ ಇಲ್ಲವೆಂಬ ಘನ ಕಾಳಜಿ ಮಾತ್ರ ಎದ್ದು ಕಾಣುತ್ತಿತ್ತು. ಪಾರ್ಲಿಮೆಂಟಿನಲ್ಲಿ ಈ ಮಹಿಳಾ ಮಸೂದೆ ಅಂಗೀಕಾರಕ್ಕೆ ಏದುಸಿರುವ ಬಿಟ್ಟು 'ಹೋರಾಡುತ್ತಿರುವ' ಅಖಿಲಭಾರತ ಪಕ್ಷಗಳ ಈ ನಾಯಕರು ಮನಬಂದಂತೆ ಆಡಿದ್ದು, ಆ ಪಕ್ಷದವರು ಇದುವರೆಗೂ ಆಕ್ಷೇಪಣೆಯ ಒಂದು ಚಟುಕು ಮಾತೂ ಆಡದಿರುವುದು ಸೋಜಿಗವೇ ಸರಿ! ಇಂತಹ ತೆರೆದ ಹೃದಯಗಳ ಶೂರರಿಗೆಲ್ಲಾ ಬಿಜೆಪಿಯ ನೇಸರ್ಗಿ ಮಾತ್ರವೇ ಮಹಿಳಾ ಹಕ್ಕು ಹೋರಾಟಗಾರರೆಂದು ಯದ್ವಾತದ್ವಾ ಮಿಂಚಲು ಅವಕಾಶ ನೀಡಿದ ಕೀರ್ತಿ ಮಾತ್ರ ಈ ಎಲ್ಲರಿಗೂ ಸಲ್ಲಬೇಕು. ಈ ಮಸೂದೆ ಜಾರಿಗೆ ಅಡ್ಡಗೋಡೆಗಳಾಗುತ್ತಿರುವ ತಮ್ಮ ಪಕ್ಷದ ಉಮಾಭಾರತಿ ಮುಂತಾದ ನಾಯಕಿಯರ ಬಾಯಿ ಮುಚ್ಚಿಸಲು ಯಾರೂ ಸಲಹೆ ನೀಡದಿದ್ದುದು ವಿಚಿತ್ರವೇ ಸರಿ.

ಮಹಿಳಾ ಮೀಸಲಾತಿ ಮಸೂದೆ ಬಗೆಗಿನ ಈ ವಾದ-ವಿವಾದಗಳು ಹೊಸತೇನಲ್ಲ. ಜಾತಿ ಮೀಸಲಾತಿ ಇಲ್ಲದಿದ್ದರೆ ಮೇಲ್ಜಾತಿಯವರೇ ತುಂಬಿಕೊಂಡು ಬಿಡುತ್ತಾರೆ ಎನ್ನುವ ಇವರು ಇದುವರೆಗೂ ಆಯ್ಕೆಯಾಗುತ್ತಲೇ ಬಂದ ಪುರುಷರಲ್ಲಿ ಈ ಪ್ರಶ್ನೆಯೇಕೆ ಬರಲಿಲ್ಲ. ಈಗಾಗಲೇ ಆಯ್ಕೆಗೊಂಡಿರುವ ಶಾಸನಸಭೆಗಳ ಮಹಿಳಾ ಸದಸ್ಯರಲ್ಲಿ ಹಿಂದುಳಿದ ವರ್ಗದ ಮಹಿಳೆಯರ ಪ್ರಮಾಣ ನಗಣ್ಯ ಅಲ್ಲ. ಎಲ್ಲಾ ಜಾತಿ, ವರ್ಗದ ಇಡೀ ಮಹಿಳಾ ಸಮೂಹವೇ ಶೋಷಿತರು, ಆ ಸಮೂಹದ ಧ್ವನಿ, ಶಕ್ತಿಗೆ, ಪಾಲು ಅವರ ಹಕ್ಕು ಎಂಬ ದಾರುಣ ಸತ್ಯವನ್ನು ತಿರಸ್ಕರಿಸುವುದು ಇಲ್ಲಿನ ತಿರುಳು. 'ನಸ್ತ್ರಿ ಸ್ವಾತಂತ್ರ್ಯಂ ಅರ್ಹತಿ' ಎಂಬ(ಯಕಃಶ್ಚಿತ ಹೆಣ್ಣು ತಮ್ಮಂತೆ ಸಮಾನತೆ ಪಡೆಯುವುದೆಂದರೇನು?) ತಮ್ಮ ಊಳಿಗಮಾನ್ಯ ಯಜಮಾನಿಕೆ ಬಿರಲಾರೆವು ಎಂಬುದೇ ಮೂಲ ಸಿದ್ಧಾಂತ.

ಇಲ್ಲವಾದರೆ ಪಾರ್ಲಿಮೆಂಟಿನಲ್ಲಿ ಶೇ8, ಗೋವಾ ವಿಧಾನಸಭೆಯಲ್ಲಿ ಶೇ 10, ಕರ್ನಾಟಕದಲ್ಲಿ ಕೇವಲ ಶೇ 2 ರಷ್ಟು ಮಹಿಳಾ ಶಾಸಕರಿರುವ ಕ್ರೂರಸತ್ಯದೆದುರು ಹೀಗೆ ಮನವಿನಂತೆ ಆಡುತ್ತಿರಲಿಲ್ಲ. ಅದೂ ಸಾಮಾಜಿಕ ನ್ಯಾಯದ ಬಗ್ಗೆ ಸದಾ ಚಿಂತಿಸುವವರೂ ಸಹ... ಆದ್ದರಿಂದ ಮೊದಲು ಮಹಿಳಾ ಮೀಸಲಾತಿ ಅಂಗೀಕಾರ ಆಗಬೇಕು. ಮಸೂದೆಯೇ ಅಂಗೀಕರಿಸದೇ ಸ್ಥಾನ ಹಂಚುವ ಮಾತು ಕೇವಲ ಬೂಟಾಟಿಕೆ, ಮಹಿಳಾ ದ್ರೋಹ. ನೋವು-ಆಕ್ರಂದನ-ದಬ್ಬಾಳಿಕೆಗಳಲ್ಲಿನರಳಿ ಸಮಾನತೆಯ ಆಶಯಕ್ಕೆ ಹಂಬಲಿಸುವ ಮಹಿಳೆಯರ ಸ್ಥಿತಿಯನ್ನು ಹೀಗೆ ಒಣ ಚರ್ಚೆಗಳಿಂದ ಕೆಣಕಿ ವಂಚಿಸುವುದು ನಿಲ್ಲಬೇಕು.

ಜನರ ಸಾಮರಸ್ಯ ಕದಕುವ ಗಡಿ ವಿವಾದದ ಕಿಡಿ

ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಲೇಬೇಕೆಂದು ಮತ್ತೆ ಆಗ್ರಹಿಸಿದ್ದು ಬೇರಾರೂ ಅಲ್ಲ, ಇಡೀ ದೇಶದ ಎಲ್ಲಾ ರಾಜ್ಯಗಳ ಹಿತ-ಸಮಗ್ರತೆ ಕಾಯುವ ಹೊಣೆ ಇರುವ ಕೇಂದ್ರದ ಸಚಿವರು. ಇದನ್ನು ಪ್ರಶ್ನಿಸಿದವರಿಗೆ ಅವರು ಕೊಟ್ಟ ಉತ್ತರ "ನಾನು ಮೊದಲು ಶಿವಸೇನೆಯ ಸೈನಿಕ ನಂತರ ಉಳಿದದ್ದು....". ಹಿಂದೆ ಮುಖ್ಯಮಂತ್ರಿಯಾಗಿ, ಈಗ ದೇಶದ ಸಚಿವನಾಗಿಗರುವ ಮನೋಹರ ಜೋಷಿ ಗಡಿ ವಿವಾದಗಳನ್ನು ಸೂಕ್ತವಾದ ಸೌಹಾರ್ದತೆ ರೀತಿಯಲ್ಲಿ ಬಗೆಹರಿಸುವ ನಿಲುವು ತಳೆಯದೆ ದಿಢೀರನೇ ಕೆದಕಿ - ಜನರ ಭಾವನೆ ಕೆರಳಿಸಿದ್ದು ಖಂಡನೀಯ. ಇದಕ್ಕೆ ಪ್ರಧಾನಿ ವಾಜಪೇಯಿಯವರದು ಯಥಾ ಮೌನ! ಚರ್ಚೆಗೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಆಹ್ವಾನ. ಕರ್ನಾಟಕ ಮುಖ್ಯಮಂತ್ರಿ ಕೃಷ್ಣರವರು ಈ ಗಡಿವಿವಾದ ಮುಗಿದ ಅಧ್ಯಾಯವೆಂದೇನೋ ಹೇಳಿದ್ದಾರೆ. ಸರ್ವಪಕ್ಷಗಳೊಂದಿಗೆ ಚರ್ಚಿಸುವುದಾಗಿಯೂ ತಿಳಿಸಿದ್ದಾರೆ. ಮಹಾಜನ ವರದಿ ಅಂತಿಮವೆಂಬ ಮಾತೂ ಕೇಳಿದೆ.

ಭಾಷಾವಾರು ಪ್ರಾಂತ ವಿಂಗಡಣೆ ಮಾಡುವಾಗ ಗ್ರಾಮವನ್ನು ಒಂದು ಘಟಕ ಹಾಗೂ ಸಾತತ್ಯತೆಯನ್ನು ಪರಿಗಣಿಸದೆ ರಾಜಕೀಯ ಒತ್ತಡಗಳಿಗೆ ಮಣಿದು ಗಡಿಗಳ ನಿರ್ಧಾರ ಮಾಡಿದ್ದರಿಂದ ಹಲವಾರು ರಾಜ್ಯಗಳ ನಡುವೆ ವಿವಾದಗಳಿವೆ. ಒಂದು ರಾಜ್ಯದ ಒಂದು ಗಡಿ ವಿವಾದವನ್ನು ಕೆದಕಿದರೆ ಉಳಿದ ನೂರಾರು ವಿವಾದಗಳಿಗೆ ಬೆಂಕಿಗೆ ತುಪ್ಪ ಹೊಯ್ದಂತಾಗುತ್ತದೆ. ಆದ್ದರಿಂದ ಇಂದಿನ ಸ್ಥಿತಿಯೇ ಮುಂದುವರಿಯಬೇಕು. ಆದರೆ ಬೆಳಗಾಂ ಗಡಿ ವಿವಾದವನ್ನು ಎತ್ತಿದವರ ಉದ್ದೇಶ ಅದಲ್ಲವಲ್ಲ. ಜನರ ಸಾಮರಸ್ಯವನ್ನು ಕೆದಕುವುದೇ ಅವರ ಉದ್ದೇಶ. ಆದ್ದರಿಂದ ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚರವಹಿಸಬೇಕು.

ಇನ್ನೂ ಎರಡೂ ರಾಜ್ಯಗಳ ಜನರ ಭಾವನೆಗಳನ್ನು ಕೆರಳಿಸುವ ಯತ್ನಗಳನ್ನು ಕೂಡಲೇ ಉಭಯತ್ರರೂ ನಿಲ್ಲಿಸಬೇಕು. ನೈಜ ಪ್ರಶ್ನೆಗಳ ಪರಿಹಾರಕ್ಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯಗಳ ಸರ್ಕಾರಗಳು ಮುಂದಾಗಬೇಕು. ವಾಜಪೇಯಿಯವರು ತಮ್ಮ ಸಂಪುಟದ ಸಚಿವರ ಬೇಜವಾಬ್ದಾರಿ, ಪ್ರಚೋದಕ ಹೇಳಿಕೆಗಳಿಗೆ ತಡೆ ಹಾಕಬೇಕು.

ನಿಲ್ಲದ ಉಪಟಳ

ಯುದ್ಧ ವಿರೋಧಿಸಿ, ಮಾನವೀಯತೆ ಮರೆದ, ಫ್ಯಾಸಿಸ್ಟರ ಸೋಲು ಜಗದ ಜನರ ಬದುಕಿನ ಗೆಲುವು ಎಂದ ಚಾಪ್ಲಿನ್ ಮೇಲೆ ಅಮೆರಿಕಾ ಸರ್ಕಾರ ತೋರಿದ್ದು ಅತ್ಯಂತ ಕಡು ದ್ವೇಷ. ಶಾಂತಿ ಬೇಕು ಎಂದವಗೆ ನೀಡಿದ್ದು ನಾನಾ ರೀತಿಯ ಅಸಹನೀಯ ಯಾತನೆ, ಹಿಂಸೆ. ಇವೆಲ್ಲವನ್ನು ಎದುರಿಸಿ, ಈ ಕಿರುಕುಳಗಳಿಂದ ರೋಸಿದ ಚಾಪ್ಲಿನ್ ದೇಶ ಬಿಡ್ಟು ಹೋದ.... ಮುಂದೊಮ್ಮೆ ಅದೇ ಅಮೆರಿಕಾಕ್ಕೆ ಬಂದಾಗ ಆತನಿಗೆ ಎಲ್ಲಿಲ್ಲದ ಸ್ವಾಗತ



ಇತಿಹಾಸದ ಪುಟಗಳಿಂದ

ಚಾರ್ಲಿ ಚಾಪ್ಲಿನ್
ಚಾಪ್ಲಿನ್ ಮತ್ತು ಕಮ್ಯುನಿಸಂ

ಚಾಪ್ಲಿನ್‌ನನ್ನು ಇಕ್ಕಟ್ಟಿಗೆ ಸಿಕ್ಕಸುವ ಪ್ರಶ್ನೆಗಳನ್ನು ಪತ್ರಕರ್ತರು ಮುಂದುವರಿಸಿದರು.

ಪತ್ರಕರ್ತರು ಚಾಪ್ಲಿನ್ ಉತ್ತರದಿಂದ ಒಂದು ಕ್ಷಣ ತಬ್ಬಿಬ್ಬಾದರು. ಅವರ ಪೈಕಿ ಒಬ್ಬ 'ನಿಮಗೆ ಹ್ಯಾನ್ಸ್ ಈಸ್ಲರ್ ಗೊತ್ತಾ!' ಎಂದು ಕೇಳಿದ.

"ಆತ ನನಗೆ ಪರಿಚಯ ಮಾತ್ರವಲ್ಲ, ಆತ ನನ್ನ ಪ್ರೀತಿಯ ಮಿತ್ರ. ಬಹುದೊಡ್ಡ ಸಂಗೀತ ವಿದ್ವಾಂಸ"

"ಆತ ಕಮ್ಯುನಿಸ್ಟ್ ಎಂಬುದು ನಿಮಗೆ ಗೊತ್ತಾ"

"ಆತ ಯಾವ ಪಕ್ಷಕ್ಕೆ ಸೇರಿದವನೆಂಬುದು ನನಗೆ ಬೇಕಾಗಿಲ್ಲ. ನಮ್ಮ ಗೆಳೆತನಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ"

"ಅಂದರೆ ನೀವೂ ಕಮ್ಯುನಿಸ್ಟ್ ಸಿದ್ಧಾಂತಗಳ ಪ್ರತಿಪಾದಕರು ಎಂದಾಯಿತು"

"ನಾನೆಂಥವರ ಗೆಳೆತನ ಮಾಡಬೇಕು, ಎಂಥವರ ಗೆಳೆತನ ಮಾಡಬಾರದು ಎಂಬುದರ ಬಗ್ಗೆ ಇನ್ನೊಬ್ಬರಿಂದ ಕಲಿಯಬೇಕಾಗಿಲ್ಲ. ನಾವು ಅಲ್ಲಿಯವರೆಗೆ ಬಂದಿಲ್ಲ" ಎಂದು ಚಾಪ್ಲಿನ್ ಕಡ್ಡಿ ಮುರಿದಂತೆ ಹೇಳಿದ.

ಸಿನಿಮಾ ನಡೆಯುವಾಗಲೂ ಅಷ್ಟೆ.... ಪ್ರೇಕ್ಷಕರ ಒಂದು ಗುಂಪು ಚಿತ್ರದ ಪ್ರತಿಯೊಂದು ದೃಶ್ಯವನ್ನು ಅಪಹಾಸ್ಯ ಮಾಡುತ್ತಿತ್ತು. ಸಹೃದಯ ಪ್ರೇಕ್ಷಕರ ಮೇಲೆ ಆ ಗುಂಪು ಕಿಡಿಕಾರದೆ, ಲೇವಡಿ ಮಾಡದೆ ಇರಲಿಲ್ಲ. ಒಂದು ವರ್ಗದ ಪ್ರೇಕ್ಷಕರು ಬೇಕೆಂದೇ ತನ್ನ ಚಿತ್ರ ಪ್ರದರ್ಶನಕ್ಕೆ ಅಡ್ಡಿ ಮಾಡುತ್ತಿರುವರೆಂದು ಚಾಪ್ಲಿನ್ ಅರ್ಥ ಮಾಡಿಕೊಂಡ.

ಥೇಟರ್ ಹೊರಗಡೆಯೂ ಕ್ಯಾಥೋಲಿಕ್ ಧರ್ಮೀಯರು ಚಾಪ್ಲಿನ್ ವಿರುದ್ಧ, **ಮನ್ಸ್ಯೂವರ್ಡೊ** ಚಿತ್ರದ ವಿರುದ್ಧ ಧರಣಿ ನಡೆಸಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸತೊಡಗಿದ್ದರು. ಪೇಯಿಂಗ್ ಗೆಸ್ಟ್ ರೂಪದಲ್ಲಿ ಚಾಪ್ಲಿನ್ ಈ ದೇಶದಲ್ಲಿರುವುದು ಬೇಡ, ಕೃತಘ್ನನೂ, ಕಮ್ಯುನಿಸ್ಟಾವಾದಿಯೂ ಆದ ಚಾಪ್ಲಿನ್‌ನನ್ನು ಈ ದೇಶದಿಂದ ರಷ್ಯಾಕ್ಕೆ ಓಡಿಸಬೇಕು... ಎಂದು ಮುಂತಾಗಿ ಅವರು ಘೋಷಣೆಗಳನ್ನು ಕೂಗುತ್ತಿದ್ದರು. ಅಂತಹ ಬರಹಗಳಿದ್ದ ಫಲಕಗಳನ್ನು ಪ್ರದರ್ಶಿಸುತ್ತಿದ್ದರು. ಪತ್ರಕರ್ತರೂ ಅಂಥವರ ಚಟುವಟಿಕೆಗಳನ್ನು ಬೆಂಬಲಿಸುತ್ತಿದ್ದರು.

ಇಂಥ ಮತಾಂಧರು, ಫ್ಯಾಸಿಸ್ಟ್ ಮನೋಭಾವದವರ ಉಪಟಳದಿಂದಾಗಿ ಅಮೇರಿಕಾದ ಅನೇಕ ಥೇಟರುಗಳಲ್ಲಿ ಚಾಪ್ಲಿನ್ ಚಿತ್ರಗಳು ಪ್ರದರ್ಶನಗೊಳ್ಳಲಿಲ್ಲ. ಈ ಗತಿ ಮನ್ಸ್ಯೂವರ್ಡೊಗೊಂದೇ ಅಲ್ಲದೇ ದಿ ಗ್ರೇಟ್ ಡಿಕ್ಟೇಟರ್‌ನಂಥ ಚಿತ್ರಕ್ಕೂ ಒದಗಿತು. ಕ್ಯಾಥೋಲಿಕ್ ಮತಾಂಧರು ದಿ ಗ್ರೇಟ್ ಡಿಕ್ಟೇಟರ್ ನೋಡುವುದೆಂದರೆ ದೇವರಿಗೆ ದ್ರೋಹ ಬಗೆದಂತೆ ಎಂದೂ ಮಕ್ಕಳು ನೋಡಿದರೆ ಖಂಡಿತ ನಾಸ್ತಿಕರಾಗುವರೆಂದೂ ಸುದ್ದಿ ಹಬ್ಬಿಸುವಲ್ಲಿ ಸಫಲರಾದರು.

ಪರಿಸ್ಥಿತಿ ಹೀಗೆ ಮುಂದುವರಿದಿರುವಾಗ ಚಾಪ್ಲಿನ್ ದಿ ಗ್ರೇಟ್ ಡಿಕ್ಟೇಟರ್ ಚಿತ್ರದ ಕಥೆಗೆ ಸಂಬಂಧಿಸಿದಂತೆ ಕೃತಿ ಚೌರ್ಯ ಮಾಡಿರುವನೆಂದು ಸುದ್ದಿ ಹಬ್ಬಿಸಿದರು. ಇದಕ್ಕಾಗಿ ಯುರೋಪಿಯನ್ ಕಥೆಗಾರ ಕಾನ್ರಾಡ್ ವೈರಕೋವಿಸಿಯನ್ನು ಅಸ್ತ್ರವಾಗಿ ಬಳಸಿಕೊಂಡರು.

....

ಚಾಪ್ಲಿನ್ ಅಮೇರಿಕಾವನ್ನು ಪುನಃ ಪ್ರವೇಶಿಸಲು ಅನುಮತಿ ಕೋರಿ ಸರಕಾರಕ್ಕೆ ಮನವಿ ಸಲ್ಲಿಸಿದ. ಮೂರು ತಿಂಗಳು ಕಾದರೂ ಸರಕಾರದಿಂದ ಯಾವುದೇ ಪ್ರೋತ್ಸಾಹದಾಯಕ ಪ್ರತಿಕ್ರಿಯೆ ಬರಲಿಲ್ಲ. ಕಟ್ಟಬೇಕಾದ ತೆರಿಗೆ ಬಾಬತ್ತುಗಳನ್ನೆಲ್ಲ ಕಟ್ಟಿ ದಾರಿ ಸುಗಮ ಮಾಡಿಕೊಂಡ. ಎಲ್ಲ ಕಟ್ಟಿ ಬಗೆಹರಿಸಿಕೊಂಡ ನಂತರವೂ ತೆರಿಗೆ ಇಲಾಖೆ ಇನ್ನೂ ಇಪ್ಪತ್ತು ಲಕ್ಷ ಡಾಲರ್ ಕಟ್ಟಬೇಕಿದೆ ಎಂದು ಸೂಚಿಸಿತು. ಅನಗತ್ಯವಾಗಿ ಹೆಚ್ಚುವರಿ ಆದಾಯ ತೆರಿಗೆ ಪಾವತಿ ಮಾಡಲು ಚಾಪ್ಲಿನ್ ನಿರಾಕರಿಸಿದ. ಅಗತ್ಯ ಬಿದ್ದಲ್ಲಿ ತಾನು ಕೋರ್ಟಿನಲ್ಲಿ ಹೋರಾಡುವುದಾಗಿ ತಿಳಿಸಿದ. ತನ್ನದೇ ಪರವಾಟು ಎಂದು ಭಾವಿಸಿದ ತೆರಿಗೆ ಇಲಾಖೆ ತಿಪ್ಪೆ ಸಾರಿಸಿ, ತೆಪ್ಪಗಾಯಿತು. ಮತ್ತೊಮ್ಮೆ ಚಾಪ್ಲಿನ್ ರಿ ಎಂಟ್ರಿ ಪರ್ಮಿಟ್‌ಗಾಗಿ ಮನವಿ ಸಲ್ಲಿಸಿದ. ಅಲ್ಲಿಗೂ ಪ್ರತಿಕ್ರಿಯೆ ಬಾರದಿದ್ದಾಗ ತನಗೆ ರಿ ಎಂಟ್ರಿ ಪರ್ಮಿಟ್ ಕೊಡುವುದು ಸರಕಾರಕ್ಕೆ ಇಷ್ಟವಿರದಿದ್ದ ಪಕ್ಷದಲ್ಲಿ ತಾನು ಇಡೀ ಅಮೇರಿಕಾ ಬಿಟ್ಟು ಹೋಗಲು ನಿರ್ಧರಿಸಿರುವುದಾಗಿಯೂ, ಆದ್ದರಿಂದ ಯಾವುದಾದರೊಂದು ಉತ್ತರ ಕೊಡಬೇಕೆಂದು ಸರಕಾರಕ್ಕೆ ಖಾರವಾಗಿ ಪತ್ರ ಬರೆದ. ಸರಕಾರ ಅವನ ಮನವಿಯನ್ನು ವಲಸೆ ಮತ್ತು ಪುನರ್ವಸತಿ ಇಲಾಖೆಗೆ ಒಪ್ಪಿಸಿತು. ಆತನ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ವಲಸೆ ಇಲಾಖೆಯ ಅಧಿಕಾರಿಗಳು ತಾವು ಔಪಚಾರಿಕವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಸಮಾದಾನ ಪಡೆಯಲು ಮನೆಗೆ ಬರಬಹುದೇ ಎಂದು ಫೋನಿನಲ್ಲಿ ಸಂಪರ್ಕಿಸಿದರು.

'ಓಹ್... ಅಗತ್ಯವಾಗಿ ಬನ್ನಿ" ಎಂದು ಒಪ್ಪಿಗೆ ನೀಡಿದ ಚಾಪ್ಲಿನ್.

ಅವರೆಲ್ಲ ನಿಗದಿತ ಸಮಯಕ್ಕೆ ಸರಿಯಾಗಿ ಚಾಪ್ಲಿನ್‌ರ ನಿವಾಸಕ್ಕೆ ಬಂದರು. ಅವರ ಪೈಕಿ ಮೂವರು ಗಂಡಸರು ಒಬ್ಬ ಮಹಿಳೆ ಇದ್ದರು. ಅವರು ತಮ್ಮ ಜೊತೆ ತಂದ ಬ್ರೀಫ್‌ಕೇಸ್‌ಗಳಲ್ಲಿ ಒಂದು ಟೇಪ್‌ರೆಕಾರ್ಡರ್, ಟೈಪ್‌ರೈಟರ್‌ಗಳಲ್ಲದೆ ಕೆಲವು ಕಡತಗಳು ಇದ್ದವು. ಅವರ ಮುಖ್ಯಸ್ಥ ತೆಳ್ಳಗೆ ಎತ್ತರಕ್ಕಿದ್ದ ನಲವತ್ತರ ಅಜುಬಾಜಿನ ವ್ಯಕ್ತಿ. ಉಳಿದವರು ಆತನ ಆಜ್ಞಾರಾಧಕರು. ಚಾಪ್ಲಿನ್ ಯಾವುದನ್ನು ಮರೆಮಾಚಲು ಬಯಸಲಿಲ್ಲ. ಆತ ತನ್ನ ಸಹಾಯಕ್ಕೆಂದು ಸ್ಥಳೀಯ ವಕೀಲನೋರ್ವನನ್ನು ಆ ಕ್ಷಣ ಕರೆಯಿಸಿಕೊಳ್ಳದೆ ಇರಲಿಲ್ಲ.

ಮುಖ್ಯಸ್ಥ ಕಡತದಿಂದ ಒಂದೊಂದೆ ಹಾಳೆ ಮುಗುಚುತ್ತಾ ಪ್ರಶ್ನೆಗಳನ್ನು ಕೇಳತೊಡಗಿದ.

"ನಿಮ್ಮ ನಿಜವಾದ ಹೆಸರುಚಾರ್ಲಸ್ ಚಾಪ್ಲಿನ್ ಹೌದೋ ಅಲ್ಲವೋ?"

'ಹೌದು'

ಕೆಲವರು ನಿಮ್ಮ ಹೆಸರು(ಅದರಲ್ಲಿ ಪರದೇಶದ ಯಾವುದೋ ಒಂದು ಹೆಸರು ಇತ್ತು) ಮತ್ತು ನಿಮ್ಮ ಮೂಲಸ್ಥಳ ಗ್ಯಾಲಿಸಿಯಾ"

"ಇಲ್ಲ, ನನ್ನ ಹೆಸರು ಚಾರ್ಲಸ್ ಚಾಪ್ಲಿನ್. ನನ್ನ ತಂದೆಯ ಹೆಸರು ಕೂಡ ಅದೆ. ನನ್ನ ಮೂಲಸ್ಥಳ ಇಂಗ್ಲೆಂಡಿನ ಲಂಡನ್ ನಗರ"

"ನೀವೆಂದೂ ಕಮ್ಯುನಿಸ್ಟ್ ಸೇರಿದವರಲ್ಲವೆಂದು ಹೇಳುತ್ತಿದ್ದೀರಿ ತಾನೆ!"

"ಇಲ್ಲ... ನಾನ್ಯಾವತ್ತು ಯಾವುದೇ ರಾಜಕೀಯ ಪಕ್ಷಕ್ಕಾಗಲಿ, ಯಾವುದೇ ರಾಜಕೀಯ ಸಂಘಟನೆಗಾಗಲಿ ಸೇರಿದವನಲ್ಲ"

"ನೀವು ಒಂದೊಂದು ಸಾರಿ ಭಾಷ... ಮಾಡುತ್ತಿರುವಾಗ ಕಾಮ್ರೇಡ್ ಎಂ... ಸಂಭೋದಿಸಿದರಲ್ಲ... ಅದರರ್ಥವೇನು?"

"ಹೌದು.... ಅವತ್ತು ನಾನು ಹಾಗೆ ಹೇಳಿ... ನಿಜ. ದಯವಿಟ್ಟು ಡಿಕ್ಷನರಿ ತೆಗೆದುನೋಡಿ. ಕಾಮ್ರೇಡ್ಸ್ ಎಂಬ ಶಬ್ದಕ್ಕೂ, ಕಮ್ಯುನಿಸ್ಟ್ ಪಕ್ಷಕ... ಯಾವುದೇ ಸಂಬಂಧವಿಲ್ಲ"

ಚಾಪ್ಲಿನ್ ಉತ್ತರದಿಂದ ಒಂದು ಕ್ಷಣ ಅ... ಗಲಿಬಿಲಿಗೊಂಡ. ಅದರ ವಿರುದ್ಧ ಪ್ರತೀಕಾ... ತೀರಿಸಿಕೊಳ್ಳುವನಂತೆ

"ನೀವೆಂದಾದರೂ ವ್ಯಭಿಚಾರದ... ಪಾಲ್ಗೊಂಡಿದ್ದೀರೋ!" ಎಂದು ಕೇಳಿದ.

ಅಂಥ ಪ್ರಶ್ನೆಯನ್ನು ನಿರೀಕ್ಷಿಸಿರದಿದ್ದ ಚಾಪ್ಲಿನ್... ಸಿಟ್ಟು ಬಂತು. ಆದರೂ ಸಹಿಸಿಕೊಂಡ... ಸಮಾಧಾನದಿಂದಲೇ ಉತ್ತರಿಸಿದ "ನೋಡಿ.. ಇಂಥ ಅವಮಾನಕರ ಪ್ರಶ್ನೆಗಳನ... ಎದುರಿಸುವುದಕ್ಕಿಂತ ಈ ದೇಶ ಬಿಟ್ಟು ಹೋಗುವುದ... ಎಷ್ಟೋ ವಾಸಿ. ನನಗೇನು ಇಲ್ಲೇ ಇರಬೇಕೆಂ... ಏನೂ ಇಲ್ಲ. ಪ್ರಪಂಚ ವಿಶಾಲವಾಗಿದೆ ಎಂ... ಸಂಗತಿಯನ್ನು ಮರೆಯಬೇಡಿ, ದಯವಿಟ್ಟು..."

ಜಗತ್ತಿನ ಅದ್ವಿತೀಯ ಪ್ರತಿಭೆಯೆಂದು ಪ್ರಸಿ... ನಾಟಕಕಾರರಿಂದ ಹೊಗಳಿಸಿಕೊಂಡ ಚಾಪ್ಲಿನ... ವಿಶ್ವಮಾನವ... ಅವನು ಯಾವುದೇ ರಾಜಕೀಯ... ಪಕ್ಷಕ್ಕೆ ಕಟ್ಟುಬಿದ್ದವನಲ್ಲ. ಎಡಪಂಥೀಯ... ವಿಚಾರವಾದಿಗಳ ಸ್ನೇಹ ಸಾನಿಧ್ಯದಲ್ಲಿರುತ್ತಿದ್ದುದರಿಂ... ಆತ ಕಮ್ಯುನಿಸ್ಟ್ ಎಂಬ ಅಪಮಾನಕ್ಕೆ ಗುರಿಯಾ... ಅಮೇರಿಕಾ ಸರಕಾರದಿಂದ ಹದಿಮೂರು ವರ್ಷಗ... ಕಾಲ ಪಡಬಾರದ ಕಷ್ಟಗಳನ್ನು ಅನುಭವಿಸಿದ... ಪ್ರಜಾಪ್ರಭುತ್ವಕ್ಕೆ ಹೆಸರಾದ ಅಮೇರಿಕಾ ಆ ಮಾಹ... ಕಲಾವಿದನಿಗೆ ನೀಡಿದ ಗೌರವವಿದು. ಆ... ವ್ಯವಸ್ಥೆಯೊಂದಿಗೆ ರಾಜಿಯಾಗಿ ಅಭಿವ್ಯಕ್ತಿ ಸ್ವಾತಂತ್ರ... ಕಳೆದುಕೊಳ್ಳದೆ ಚಿತ್ರ ಮಾಧ್ಯಮದ ಮೂಲ... ಮುಕ್ತವಾಗಿ ಪ್ರತಿಪಾದಿಸಿದ, ಸಂಪಾದಿಸಿದ. ಅದ... ಮೌನವನ್ನು ಸಮರ್ಥವಾಗಿ ಬಳಸಿಕೊಂಡ. ಆ... ಪ್ರಪ್ರಥಮವಾಗಿ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರದ... ಮಾತನಾಡಿದ್ದು ಸಾಮಾನ್ಯ ಯೆಹೂದಿ ಹಜಾಮ... ಮೂಲಕ. ಮಾಡರ್ನ್ ಟೈಮ್ಸ್‌ನಲ್ಲಿ ಅವನ... ಹಾಡಿದ ಹಂಸಗೀತೆ ಪ್ರಪಂಚದ ಬಹಳಷ್ಟು ಭಾಷೆಗ... ಕಲಸುಮೇಲೋಗರ. ಟ್ರಾಂಪ್ ಪಾತ್ರದ ಮೂಲ... ಸಮಾಜದ ಓರೆಕೋರೆಗಳನ್ನು ಪ್ರಶ್ನಿಸಿದ. ಆತ ತ... ಚಿತ್ರಗಳಲ್ಲಿ ಪರಿಷ್ಕಾರ ಮಾರ್ಗಗಳನ್ನು ಸೂಚಿಸು... ಗೋಜಿಗೆ ಹೋಗಲಿಲ್ಲ. ತಾನು ಎತ್ತಿದ ಪ್ರಶ್ನೆಗಳ... ಉತ್ತರ ಕಂಡುಕೊಳ್ಳುವ ಸ್ವಾತಂತ್ರ್ಯವನ್ನು ಪ್ರೇಕ್ಷಕರಿ... ಬಿಟ್ಟುಕೊಟ್ಟ. ವಾಸ್ತವಿಕ ಜೀವನವನ್ನು ವಿಮರ್ಶಿಸ... ಆತ ಅವಾಸ್ತವಿಕ ಮಾರ್ಗಗಳನ್ನು ಆಯ್ದುಕೊಂ... ಜಾಗತಿಕವಾಗಿ ಆವರಿಸಿರುವ ದ್ವೇಷ, ಅವಮಾ... ಕ್ರೌರ್ಯ, ದಾರಿದ್ರ್ಯ, ಅಸಮಾನತೆಗಳ ವಿರು... ನಿರಂತರವಾಗಿ ಹೋರಾಡಿದ. ಕೋಪದ ಜಾಗದ... ವಿಷಾದ ಪ್ರಕಟಿಸಿದ. ದುಃಖದ ಪೊರೆಯೊಳ... ನಗೆಯ ಹೂರಣ ತುಂಬಿದ. ಸಂತೃಪ್ತ ಸಮಾಜ... ಕನಸುಕಂಡ. ತನ್ನ ಕನಸು ಪ್ರತಿಯೋರ್ವರ... ನನಸಾಗಲಿ ಎಂದು ಹಾರೈಸಿದ. ಅವನು ಸೃಷ್ಟಿಸಿ... ಟ್ರಾಂಪ್ ಪಾತ್ರ ಮಾನವತ್ವದ ರಾಯಭಾರಿ.

'ದ ಗ್ರೇಟ್ ಡಿಕ್ಟೇಟರ್' ನಲ್ಲಿ ಚಾಪ್ಲಿನ್





ಇಳಿ ವಯಸ್ಸಿನಲ್ಲಿ ಚಾಪ್ಲಿನ್

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ